ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 16 ಗುರುವಾರ 2024

ಸಂಪುಟ: 45 | ಸಂಚಿಕೆ: 30 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪ್ರಜ್ವಲ್ ರೇವಣ್ಣ ಇದೂವರೆಗೆ ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ

ಬೆಂಗಳೂರು, ಮೇ 15– ವಿದೇಶಕ್ಕೆ ಹೋಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಇದುವರೆಗೆ ಅವರ ಮನೆಯವರು ಸೇರಿದಂತೆ ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ ಎಂದು ಶಾಸಕ ಮತ್ತು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹೇಳಿದ್ದಾರೆ.



ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ಎಲ್ಲಿದ್ದಾರೆ ಅನ್ನೋದು ಅವ್ರ ಮನೆಯವರಿಗೂ ಗೊತ್ತಿಲ್ಲ ನಮಗೂ ಗೊತ್ತಿಲ್ಲ. ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ. ಅವರು ಬಂದ ಮೇಲೆಯೇ ನಮಗೂ ಅವರ ಬಗ್ಗೆ ಮಾಹಿತಿ ತಿಳಿಯಲಿದೆ ಎಂದರು.

ಪ್ರಜ್ವಲ್ ಮೇಲೆ ಆರೋಪ ಕೇಳಿ ಬಂದಲ್ಲಿಂದ ಪಕ್ಷದಿಂದ ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ಸೂಕ್ತ ಸಮಯದಲ್ಲಿ ಮಾಡಿದ್ದೇವೆ. ಇನ್ನು ಏನಿದ್ದರೂ ಸರ್ಕಾರದ ಕೆಲಸ. ಎಸ್ಐಟಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಬ್ಲೂ ಕಾರ್ನರ್ ನೋಟೀಸ್ ಜಾರಿ ಮಾಡಿದ್ದಾರೆ, ವಿಚಾರಣೆ ಮಾಡುತ್ತಾರೆ ಎಂದರು.

ಮತ್ತೆ ಫ್ಲೈಟ್ ಮಿಸ್ ಮಾಡಿದ ಪ್ರಜ್ವಲ್

ಎಸ್ಐಟಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾದಿದ್ದೆ ಬಾಕಿ!

ಮುಂದಿನ ಕಾನೂನಿನ ಪ್ರಕ್ರಿಯೆಗಳ ಸಂಬಂಧ ತಜ್ಞರೊಂದಿಗೆ ಮಾಜಿ ಪ್ರಧಾನಿ ದೇವೇಗೌಡರು ಸಮಾಲೋಚನೆ



ಬೆಂಗಳೂರು, ಮೇ 15(ಕೆಎಂಶಿ)– ಲೈಂಗಿಕ ದೌರ್ಜನ್ಯ ಆರೋಪ ಹೊತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಇಂದು ಸ್ವದೇಶಕ್ಕೆ ಹಿಂದಿರುಗಲಿದ್ದಾರೆ ಎಂಬುದು ಮತ್ತೊಮ್ಮೆ ಹುಸಿಯಾಗಿದೆ.

ಜರ್ಮನಿಯ ಮ್ಯೂನಿಚ್ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ಭಾರತೀಯ ಕಾಲಮಾನ ಬುಧವಾರ ಮಧ್ಯಾಹ್ನ 12.20ಕ್ಕೆ ಹೊರಟು, ಸರಿ ರಾತ್ರಿ 00.45ಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುವ ವಿಮಾನದಲ್ಲಿ ಟಿಕೆಟ್ ಕಾಯ್ದಿರಿಸಲಾಗಿತ್ತು. ಪ್ರಜ್ವಲ್ ಜೊತೆಗೆ ಇನ್ನೂ ಏಳು ಮಂದಿಯ ಹೆಸರಿನಲ್ಲಿ ಟಿಕೆಟ್ ನೋಂದಾಯಿಸಲಾಗಿತ್ತು. ಆದರೆ, ಪ್ರಜ್ವಲ್ ಕೊನೆ ಗಳಿಗೆಯಲ್ಲಿ ತಮ್ಮ ನಿರ್ಧಾರವನ್ನು ಬದಲಿಸಿದ್ದಾರೆ.

ಈ ಹಿಂದೆ ಎರಡು ಬಾರಿ ಇದೇ ರೀತಿ ರಾಷ್ಟ್ರಕ್ಕೆ ಹಿಂತಿರುಗುವ ನಿರ್ಧಾರವನ್ನು ಪ್ರಜ್ವಲ್ ಬದಲಿಸಿದ್ದರು. ಆದರೆ, ಇಂದು ನಗರಕ್ಕೆ ಪ್ರಜ್ವಲ್ ಬಂದೇ ಬರುತ್ತಾರೆ ಎಂಬ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಎಸ್ಐಟಿ ಅಧಿಕಾರಿಗಳು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಳಗ್ಗೆಯಿಂದಲೇ ಮೊಕ್ಕಾಂ ಹೂಡಿದ್ದರು.

ಎಸ್ಐಟಿಯ ಆರು ಅಧಿಕಾರಿಗಳ ತಂಡ ಜರ್ಮನಿಯಲ್ಲಿ ಬಿಡಾರ ಹೂಡಿ ಪ್ರಜ್ವಲ್ ಅವರ ಮನವೊಲಿಸಿ ಕರೆತರುವ ಪ್ರಯತ್ನ ನಡೆಸಿದ್ದಾರೆ. ಅಧಿಕಾರಿಗಳು ಬಲವಂತವಾಗಿ ಆ ದೇಶದಿಂದ ಕರೆತರಲು ಸಾಧ್ಯವಿಲ್ಲ. ಆದ್ದರಿಂದ ಮನವೊಲಿಸಿ ರಾಷ್ಟ್ರಕ್ಕೆ




ಕರೆತರುವ ಮೊದಲ ಪ್ರಯತ್ನದಲ್ಲಿ ವಿಫಲವಾಗಿದ್ದಾರೆ. ಪ್ರಜ್ವಲ್ ಜೊತೆ ಅವರ ಸ್ನೇಹಿತನೊಬ್ಬನಿದ್ದಾನೆ ಎಂದು ಹೇಳಲಾಗಿದ್ದು, ಆತ ಯಾರು ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಇದರ ನಡುವೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ತಮ್ಮ ಕುಟುಂಬದವರ ಮೇಲೆ ಬಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ಖ್ಯಾತ ಹಿರಿಯ ವಕೀಲರುಗಳನ್ನು ಮನೆಗೆ ಕರೆಸಿಕೊಂಡು ಸಲಹೆ ಪಡೆದುಕೊಂಡಿದ್ದಾರೆ. ಅವರ ಸಲಹೆಯಂತೆ ಪುತ್ರ ರೇವಣ್ಣ ವಿರುದ್ಧ ಎಸ್ಐಟಿ ಸಲ್ಲಿಸಿರುವ

● 2ನೇ ಪುಟಕ್ಕೆ

ಪೋಕ್ಸೋ ಪ್ರಕರಣದಲ್ಲಿ ಮಾಜಿ ಸಿಎಂ ಯಡಿಯೂರಪ್ಪರಿಗೆ ಬಂಧನ ಭೀತಿ

● ರಾಜ್ಯ ಸರ್ಕಾರದ ಮುಂದೆ ಮತ್ತೊಂದು ಸವಾಲು
● ಆರೋಪ ಪಟ್ಟಿ ಸಲ್ಲಿಸಲು ಸಿಐಡಿ ಸಿದ್ಧತೆ

ಬೆಂಗಳೂರು, ಮೇ 15(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದ ಭೀತಿಯಲ್ಲಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಮಾಜಿ ಸಚಿವ ಎಚ್.ಡಿ. ರೇವಣ್ಣ ಬಂಧನಕ್ಕೊಳಗಾಗಿ ಬಿಡುಗಡೆಯಾದ ಬೆನ್ನಲ್ಲೇ ಸರ್ಕಾರಕ್ಕೆ ಮತ್ತೊಂದು ತಲೆನೋವು ಎದುರಾಗಿದೆ.



ಪೋಕ್ಸೋ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಈಗಾಗಲೇ ಎಫ್ಐಆರ್ ದಾಖಲಿಸಿ ಪ್ರಾಥಮಿಕ ಹಂತದ ತನಿಖೆ ಮುಗಿಸಿ ಈಗ ಆರೋಪ ಪಟ್ಟಿ ಸಲ್ಲಿಸಲು ಮುಂದಾಗಿದ್ದಾರೆ. ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವುದಕ್ಕೂ ಮುನ್ನ ಯಡಿಯೂರಪ್ಪ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕಾಗಿದೆ. ಇನ್ನೆರಡು ದಿನದಲ್ಲೇ ಈ ಕಾರ್ಯ ಮುಗಿಯಬೇಕಿದೆ. ಯಡಿಯೂರಪ್ಪ ಅವರನ್ನು ಬಂಧಿಸುವುದಕ್ಕೂ ಮುನ್ನ ಅಧಿಕಾರಿಗಳು ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಗಮನಕ್ಕೆ ವಿಷಯ ತಂದಿದ್ದಾರೆ. ತದನಂತರ ಸಿದ್ದರಾಮಯ್ಯ ಹಾಗೂ ಡಾ.ಪರಮೇಶ್ವರ್ ಅವರು ಚರ್ಚೆ ಮಾಡಿ, ಸರ್ಕಾರವನ್ನು ಮತ್ತೆ ಇಕ್ಕಟ್ಟಿಗೆ ಸಿಲುಕಿಸಬೇಡಿ ಎಂಬ ಕಿವಿಮಾತು ಹೇಳಿದ್ದಾರಂತೆ. ರೇವಣ್ಣ ಪ್ರಕರಣದಿಂದ ಒಂದು ಸಮುದಾಯದ ವಿರೋಧ ಕಟ್ಟಿಕೊಂಡಿದೆ. ಯಡಿಯೂರಪ್ಪ ಅವರನ್ನೂ ಬಂಧಿಸಿದರೆ ಆ ಸಮಾಜವೂ ತಿರುಗಿಬೀಳುತ್ತದೆ. ನೀವು ಕಾನೂನು ರೀತಿ ಕ್ರಮ ಕೈಗೊಳ್ಳಬೇಕಿದ್ದರೆ ಯಡಿಯೂರಪ್ಪ ನ್ಯಾಯಾಲಯದಲ್ಲಿ ಹೋರಾಟ ನಡೆಸಲಿ ಎಂಬ ಸಲಹೆ ನೀಡಿದ್ದಾರಂತೆ. ಸಹಾಯ ಕೇಳಲು ಹೋಗಿದ್ದ 17 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಅವರ ತಾಯಿ, ಸದಾಶಿವನಗರ ಠಾಣೆಯಲ್ಲಿ ದೂರು ನೀಡಿದ್ದರು. ಕಳೆದ ಫೆಬ್ರವರಿ 2ರಂದು

● 2ನೇ ಪುಟಕ್ಕೆ

ಮೈಸೂರಲ್ಲಿ ತಲೆಮರೆಸಿಕೊಂಡಿದ್ದ ಬೇಹುಗಾರಿಕೆ ಪ್ರಕರಣದ ಆರೋಪಿ ಬಂಧನ

ಎನ್ಐಎ ಕಾರ್ಯಾಚರಣೆ; ರಾಜೀವ್‌ನಗರದಲ್ಲಿ ಐದು ತಿಂಗಳಿಂದ ನೆಲೆಸಿದ್ದ ನೂರುದ್ದೀನ್ ಅಲಿಯಾಸ್ ರಫಿ

ಮೈಸೂರು, ಮೇ 15(ಎಸ್‌ಬಿಡಿ)– ಬೇಹುಗಾರಿಕೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ವಿಶೇಷ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮೈಸೂರಿನಲ್ಲಿ ಬುಧವಾರ ಮುಂಜಾನೆ ಬಂಧಿಸಲಾಗಿದೆ.



ನೂರುದ್ದೀನ್

ಮೈಸೂರಿನ ರಾಜೀವ್‌ನಗರದಲ್ಲಿ ಐದಾರು ತಿಂಗಳಿಂದ ನೆಲೆಸಿದ್ದ ಚೆನ್ನೈ ಮೂಲದ ನೂರುದ್ದೀನ್ ಅಲಿಯಾಸ್ ರಫಿ(34 ವರ್ಷ)ಯನ್ನು ಸ್ಥಳೀಯ ಉದಯಗಿರಿ ಠಾಣೆ ಇನ್‌ಸ್ಪೆಕ್ಟರ್ ಸುಧಾಕರ್, ಎಸ್ಐಗಳು ಹಾಗೂ ಸಿಬ್ಬಂದಿ ಸಹಕಾರದೊಂದಿಗೆ ಎನ್ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಈ ವೇಳೆ ಆತ ನೆಲೆಸಿದ್ದ ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಮೊಬೈಲ್‌ಗಳು, ಲ್ಯಾಪ್‌ಟಾಪ್, ಪೆನ್‌ಡ್ರೈವ್‌ಗಳು, ಡ್ರೋನ್ ಸೇರಿದಂತೆ ಹಲವು ದೋಷಪೂರಿತ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎನ್ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ನೂರುದ್ದೀನ್ ಆನ್‌ಲೈನ್ ಮೂಲಕ ಶೂಗಳನ್ನು ಖರೀದಿಸಿ, ಅವುಗಳನ್ನು ಸ್ಥಳೀಯವಾಗಿ ಮಾರಾಟ ಮಾಡಿಕೊಂಡಿದ್ದ. ಈತ ಮೈಸೂರಿನಲ್ಲಿ ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಇಲ್ಲ. ಈತನ ಬಂಧನವನ್ನು ಸ್ಥಳೀಯ ಪೊಲೀಸರು ಖಚಿತಪಡಿಸಿದ್ದಾರೆ.

ಬೆಂಗಳೂರಿನ ಇಸ್ರೇಲ್ ಹಾಗೂ ಚೆನ್ನೈನ ಅಮೆರಿಕಾ ರಾಯಭಾರಿ ಕಚೇರಿಗಳ ಮೇಲೆ ಸ್ಫೋಟಕ್ಕೆ ಸಂಚು ರೂಪಿಸಿದ ಆರೋಪದ ಮೇಲೆ ಶ್ರೀಲಂಕಾ ಪ್ರಜೆ ಮೊಹಮ್ಮದ್ ಸಕೀರ್ ಹುಸೇನ್ ಹಾಗೂ ಕೊಲಂಬೊದ ಪಾಕಿಸ್ತಾನದ ರಾಜತಾಂತ್ರಿಕ ಕಚೇರಿ ನೌಕರನಾಗಿರುವ ಪಾಕಿಸ್ತಾನದ ಪ್ರಜೆ ಅಮೀರ್ ಜುಬೇರ್ ಸಿದ್ದಿಕಿಯನ್ನು 2014ರಲ್ಲಿ ಬಂಧಿಸಿ, ಎನ್ಐಎ ಪ್ರಕರಣ ದಾಖಲಿಸಿತ್ತು. ಈ ಆರೋಪಿಗಳಿಗೆ ಭಾರತದ ನಕಲಿ ನೋಟು ಪೂರೈಸುವ ಮೂಲಕ ರಾಷ್ಟ್ರವಿರೋಧಿ ಕೃತ್ಯಕ್ಕೆ ಸಹಕರಿಸಿದ ಆರೋಪದಲ್ಲಿ ನೂರುದ್ದೀನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಆತನನ್ನು ಬಂಧಿಸಿತ್ತು.

ಆರೋಪಿ ನೂರುದ್ದೀನ್ 2023ರ ಆಗಸ್ಟ್‌ನಲ್ಲಿ ಜಾಮೀನಿನ ಮೇಲೆ ಹೊರಬಂದಿದ್ದ. ನಂತರ ಚೆನ್ನೈನ ಎನ್ಐಎ ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಆದ್ದರಿಂದ ಈತನ ವಿರುದ್ಧ ಜಾಮೀನುರಹಿತ ವಾರೆಂಟ್ ಹೊರಡಿಸಲಾಗಿತ್ತು. ಈತನ ಮಾಹಿತಿ ನೀಡಿದವರಿಗೆ ಬಹುಮಾನವನ್ನೂ ಘೋಷಿಸಲಾಗಿತ್ತು. ಸದ್ಯ ನೂರುದ್ದೀನ್ ಬಂಧನವಾಗಿದ್ದು, ಪ್ರಕರಣದ ವಿಚಾರಣೆಯನ್ನು ಮುಂದುವರೆಸಲಾಗುವುದು ಎಂದು ಎನ್ಐಎ ತಿಳಿಸಿದೆ.

ಹುಣಸೂರು ಬಳಿ ಸರಣಿ ಅಪಘಾತ; ಬೈಕ್ ಸವಾರ ಸಾವು

● ಎರಡು ಬಸ್, ಎರಡು ಕಾರು ಜಖಂ ● ಕೆಲವರಿಗೆ ಸಣ್ಣಪುಟ್ಟ ಗಾಯ







ಹುಣಸೂರು, ಮೇ 15–ಹುಣಸೂರು ತಾಲೂಕು ಅರಸು ಕಲ್ಲಳ್ಳಿ ಸಮೀಪದ ನಾಗಮಂಗಲ ಗೇಟ್ ಬಳಿ ಸರಣಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಸಾವನ್ನಪ್ಪಿ, 2 ಕೆಎಸ್ಆರ್‌ಟಿಸಿ ಬಸ್ ಮತ್ತು ಎರಡು ಕಾರುಗಳು ಜಖಂಗೊಂಡು, ಕೆಲವರು ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ.

ಇಲವಾಲ ಹೋಬಳಿ ಕಮರವಹಳ್ಳಿ ಗ್ರಾಮದ ಕೆ.ಎಂ.ಉಮೇಶ್ ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ಹುಣಸೂರು ತಾಲೂಕು ಅತ್ತಿಗುಪ್ಪೆ ಗ್ರಾಮಕ್ಕೆ ತೆರಳಿ ಹಿಂತಿರುಗುತ್ತಿದ್ದ ವೇಳೆ ಅತೀ ವೇಗವಾಗಿ ಸ್ಪ್ಲೆಂಡರ್ ಬೈಕ್ (ಕೆಎ 09 ಹೆಚ್ ಕೆ 2037) ಚಲಾಯಿಸುತ್ತಿದ್ದ ಈತ ಹುಣಸೂರು ಕಡೆಯಿಂದ ಪಿರಿಯಾಪಟ್ಟಣ ಕಡೆಗೆ ತೆರಳುತ್ತಿದ್ದ ಕೆಎಸ್ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದ್ದಾನೆ. ಈತ ಬರುತ್ತಿದ್ದ ವೇಗವನ್ನು ಕಂಡು ಕೆಎಸ್ಆರ್‌ಟಿಸಿ ಬಸ್ ಚಾಲಕ ಹಠಾತ್ ಬ್ರೇಕ್ ಹಾಕಿದರೂ, ಬೈಕ್ ಬಂದು ಬಸ್‌ಗೆ ಅಪ್ಪಳಿಸಿದ ಪರಿಣಾಮ ತಲೆಗೆ ತೀವ್ರ ಪೆಟ್ಟು ಬಿದ್ದು, ಉಮೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಅಪಘಾತದ ವೇಳೆ ಬೈಕ್‌ನ ವೇಗವನ್ನು ಕಂಡು ಬಸ್ ಚಾಲಕ ಹಠಾತ್ ಬ್ರೇಕ್ ಹಾಕಿದಾಗ ಅದರ ಹಿಂದೆ ಬರುತ್ತಿದ್ದ ಇನ್ನೋವಾ ಕಾರ್ ಬಸ್‌ಗೆ ಡಿಕ್ಕಿ ಹೊಡೆದರೆ, ಇನ್ನೋವಾಗೆ ಬೆಂಝ್ ಕಾರ್ ಡಿಕ್ಕಿ ಹೊಡೆದಿದೆ. ಅದೇ ವೇಳೆ ಅದರ ಹಿಂದೆ ಬರುತ್ತಿದ್ದ ಮತ್ತೊಂದು ಕೆಎಸ್ಆರ್‌ಟಿಸಿ ಬಸ್ ಬೆಂಝ್ ಕಾರ್‌ಗೆ ಡಿಕ್ಕಿ ಹೊಡೆದಿದ್ದು, ಎರಡು ಬಸ್ ಮತ್ತು ಎರಡು ಕಾರುಗಳಲ್ಲಿದ್ದ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಒಳಪುಟಗಳಲ್ಲಿ

ಆದ್ಯತೆ ಮೇಲೆ ರೈತರ ಬ್ಯಾಂಕ್ ಖಾತೆಗೆ ಬರ ಪರಿಹಾರದ ಹಣ ವರ್ಗಾವಣೆ ಮಾಡಿ

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬ್ಯಾಂಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ

■ ಪುಟ–7

ರಂಗೇರಿದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಕಣ


ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಇಂದು ನಾಮಪತ್ರ ಸಲ್ಲಿಕೆ

● ಹೆಚ್.ಡಿ.ಕುಮಾರಸ್ವಾಮಿ, ವಿಜಯೇಂದ್ರ, ಆರ್.ಅಶೋಕ್ ಉಪಸ್ಥಿತಿ ● ತಾನೆ ಮೈತ್ರಿ ಅಭ್ಯರ್ಥಿ ಎಂದ ಡಾ.ನಿಂಗರಾಜ್‌ಗೌಡ
● ಇವರು ನಾಮಪತ್ರ ಸಲ್ಲಿಸುವ ಮೂಲಕ ಗೊಂದಲಕ್ಕೆ ನಾಂದಿ ● ನಾನೂ ಸ್ಪರ್ಧೆ ಮಾಡುತ್ತೇನೆ: ಕೆ.ಟಿ.ಶ್ರೀಕಂಠೇಗೌಡ

ಮೈಸೂರು, ಮೇ15(ಬಿಎಲ್‌ಯು)–ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ (ಎನ್‌ಡಿಎ) ಅಭ್ಯರ್ಥಿಯಾಗಿ ಕೆ.ವಿವೇಕಾನಂದ ನಾಳೆ (ಮೇ.16) ನಾಮಪತ್ರ ಸಲ್ಲಿಸಲಿದ್ದಾರೆ. ಆದರೆ ತಾನೆ ಮೈತ್ರಿ ಅಭ್ಯರ್ಥಿ ಎಂದು ಡಾ.ಈ.ಸಿ.ನಿಂಗರಾಜ್ ಗೌಡ ಇಂದು ನಾಮಪತ್ರ ಸಲ್ಲಿಸಿದ್ದು, ಗೊಂದಲಕ್ಕೆ ಕಾರಣವಾಗಿದೆ.

ಲೋಕಸಭಾ ಚುನಾವಣಾ ಕಾವು ತಣ್ಣಗಾಗುತ್ತಿದ್ದಂತೆ ವಿಧಾನ ಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಯ ಕಣ ರಂಗೇರಿದೆ. ಲೋಕಸಭಾ ಚುನಾವಣೆಯ ಫಲಿತಾಂಶ ಜೂನ್ 4ರಂದು ಪ್ರಕಟವಾಗಲಿದ್ದು, ಅದರ ಮುನ್ನ ದಿನ ನಡೆಯುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಜಿದ್ದಾ ಜಿದ್ದಿ ಏರ್ಪಟ್ಟಿದೆ. ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ವಿವೇಕಾನಂದ ಕಣಕ್ಕಿಳಿಯುತ್ತಿದ್ದಾರೆ. ಬೆಂಗಳೂರಿನ ಪದ್ಮನಾಭನಗರದಲ್ಲಿ ಜೆಡಿಎಸ್ ರಾಷ್ಟ್ರಾಧ್ಯಕ್ಷ ಹೆಚ್.ಡಿ.ದೇವೇಗೌಡರಿಂದ ಇಂದು ವಿವೇಕಾನಂದ ಬಿ.ಫಾರಂ ಕೂಡ ಪಡೆದಿದ್ದಾರೆ. ಆ ವೇಳೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಹಾಜರಿದ್ದರು.

ವಿವೇಕಾನಂದ ನಾಳೆ ನಾಮಪತ್ರ ಸಲ್ಲಿಸಲಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನಾಮಪತ್ರ ಸಲ್ಲಿಸುವ ವೇಳೆ ಹಾಜರಿರುತ್ತಾರೆ. ಈ ಮೂಲಕ ವಿವೇಕಾನಂದ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿ ಎಂಬುದು ಖಚಿತವಾಗಿದೆ. ಇದಕ್ಕೂ ಮೊದಲು ನಗರದ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಸಭೆ ನಡೆಯಲಿದ್ದು, ಎರಡು ಪಕ್ಷದ ನಾಯಕರು ಭಾಗಿಯಾಗಲಿದ್ದಾರೆ. ಆದರೆ ತಾನು ಬಿಜೆಪಿ



ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿವೇಕಾನಂದ ಬುಧವಾರ ಬೆಂಗಳೂರಿನ ಪದ್ಮನಾಭನಗರದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಂದ ಬಿ.ಫಾರಂ ಪಡೆದರು. ಶಾಸಕ ಜಿ.ಟಿ.ದೇವೇಗೌಡ ಹಾಗೂ ಇತರರನ್ನು ಕಾಣಬಹುದು.

ಹಾಗೂ ಜೆಡಿಎಸ್ ಪಕ್ಷದ ಎನ್‌ಡಿಎ ಅಭ್ಯರ್ಥಿ ಎಂದು ಡಾ.ಈ.ಸಿ.ನಿಂಗರಾಜ್‌ಗೌಡ ಇಂದು ನಾಮಪತ್ರ ಸಲ್ಲಿಸಿರುವುದು ಗೊಂದಲಕ್ಕೆ ಕಾರಣವಾಗಿದೆ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಡಾ.ನಿಂಗರಾಜ್ ಗೌಡ ಇಂದು ಉಮೇದುವಾರಿಕೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ವೈ.ಹೆಚ್.ಲೋಹಿತ್ ಕುಮಾರ್, ಬಿ.ಎಸ್.ಸುರೇಶ್, ಡಿ.ಶ್ರೀಕಂಠೇಗೌಡ, ಎಂ.ಎಸ್. ಉಮಾಶಂಕರ್ ಆರಾಧ್ಯ ಹಾಜರಿದ್ದರು. ಕಳೆದ ವಾರ ಬಿಜೆಪಿ ಬಿಡುಗಡೆಗೊಳಿಸಿದ ವಿಧಾನಪರಿಷತ್ ಚುನಾವಣೆಗೆ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯಲ್ಲಿ ನನ್ನ ಹೆಸರಿತ್ತು. ಈ ಹಿನ್ನೆಲೆಯಲ್ಲಿ ನಾನು ನಾಮಪತ್ರ ಸಲ್ಲಿಸಿದ್ದೇನೆ. ಆದರೆ ಇಂದು ಸಲ್ಲಿಸಿದ ನಾಮಪತ್ರದಲ್ಲಿ ಬಿಜೆಪಿ ಪಕ್ಷದ ಬಿ.ಫಾರಂ ಇಲ್ಲ. ಆದರೆ ನಾಳೆ ವೇಳೆಗೆ ಬಿ.ಫಾರಂ ನನ್ನ ಕೈ ಸೇರಲಿದೆ. ಇದರಿಂದ ನಾನೇ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಮೈತ್ರಿ ಅಭ್ಯರ್ಥಿ ಎಂದು ಡಾ.ನಿಂಗರಾಜ್‌ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಟಿಎಸ್ ಸ್ಪರ್ಧೆ: ಈ ಮಧ್ಯೆ ಜೆಡಿಎಸ್ ಪಕ್ಷದ ಆಕಾಂಕ್ಷಿಯಾಗಿದ್ದ ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಕೂಡ ನಾನೂ ಸ್ಪರ್ಧೆ ಮಾಡುತ್ತೇನೆ ಎಂದು ಪ್ರಕಟಿಸಿದ್ದಾರೆ. ನಗರದ ಆಲಮ್ಮ ಛತ್ರದಲ್ಲಿ ಇಂದು ಬೆಂಬಲಿಗರ ಸಭೆ ನಡೆಸಿದ

● 2ನೇ ಪುಟಕ್ಕೆ

ಮೈತ್ರಿ ಶಕ್ತಿಯಿಂದ ನಮಗೆ ಗೆಲುವು ಖಚಿತ: ಜಿಟಿಡಿ

ತಾನೇ ಮೈತ್ರಿ ಅಭ್ಯರ್ಥಿ ಎಂದು ಡಾ.ನಿಂಗರಾಜ್‌ಗೌಡ ಸ್ಪರ್ಧೆಗೆ ಮುಂದಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಶಾಸಕ ಜಿ.ಟಿ.ದೇವೇಗೌಡ, ವಿವೇಕಾನಂದ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಒಮ್ಮತದ ಅಭ್ಯರ್ಥಿಯಾಗಿದ್ದಾರೆ. ನಾಳೆ ವಿವೇಕಾನಂದ ನಾಮಪತ್ರ ಸಲ್ಲಿಸುವ ವೇಳೆ ಹೆಚ್.ಡಿ.ಕುಮಾರಸ್ವಾಮಿ, ವಿಜಯೇಂದ್ರ, ಆರ್.ಅಶೋಕ್ ಸೇರಿ ಹಲವರು ಭಾಗಿಯಾಗಲಿದ್ದಾರೆ. ಇದರಿಂದ ಮೈತ್ರಿಯ ಒಗ್ಗಟ್ಟು ಸಾಬೀತಾಗಲಿದೆ. ಮೈತ್ರಿ ಬಗ್ಗೆ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಡಾ.ನಿಂಗರಾಜ್ ಗೌಡರಿಗೆ ಬಿಜೆಪಿಯಿಂದ ಬಿ.ಫಾರಂ ನೀಡದ ಕಾರಣ ಅವರು ಮೈತ್ರಿ ಅಭ್ಯರ್ಥಿ ಆಗುವುದಿಲ್ಲ. ವಿವೇಕಾನಂದಗೆ ಈಗಾಗಲೇ ಜೆಡಿಎಸ್‌ನಿಂದ ಬಿ.ಫಾರಂ ನೀಡಿರುವುದರಿಂದ ಅವರೇ ಮೈತ್ರಿ ಅಭ್ಯರ್ಥಿ ಎಂದು ತಿಳಿಸಿದರು. ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಒಗ್ಗಟ್ಟಿನಿಂದ ನಾವು ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಗೆಲುವು ಸಾಧಿಸುತ್ತೇವೆ. ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ 4 ಬಾರಿ ಇದೇ ಕ್ಷೇತ್ರ ಪ್ರತಿನಿಧಿಸಿದ್ದಾರೆ. ಆದರೆ ಶಿಕ್ಷಕರ ಸಮಸ್ಯೆ ಮಾತ್ರ ಪರಿಹಾರ ಮಾಡಿಲ್ಲ. ಶಿಕ್ಷಕರ ಬಹಳಷ್ಟು ಜಟಿಲ ಸಮಸ್ಯೆಗಳು ಹಾಗೆ ಇವೆ. ಆದ ಕಾರಣ ಈ ಬಾರಿ ಶಿಕ್ಷಕರು ಮರಿತಿಬ್ಬೇಗೌಡರಿಗೆ ಬೆಂಬಲ ನೀಡುವುದಿಲ್ಲ. ನಮ್ಮ ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಬೆಂಬಲಿಸಲಿದ್ದು, ನಾವು ಗೆಲುವು ಸಾಧಿಸುತ್ತೇವೆ ಎಂದು ಜಿ.ಟಿ.ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಇಂದು ಮೈಸೂರಿಗೆ ಸಿಎಂ



ಮೈಸೂರು, ಮೇ 15(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಮೇ 16) ಮೈಸೂ ರಿಗೆ ಆಗಮಿಸುವರು.

ವಿಶೇಷ ವಿಮಾನ ದಲ್ಲಿ ಗುರುವಾರ ಬೆಳಗ್ಗೆ 10.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿ ಸಲಿರುವ ಅವರು, ಸ್ಥಳೀಯ ಕಾರ್ಯ ಕ್ರಮಗಳಲ್ಲಿ ಪಾಲ್ಗೊಂಡ ಬಳಿಕ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸು ವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಿಬಿಎಸ್‌ಸಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.86 ಅಂಕ



ಮೈಸೂರು, ಮೇ 15– ಮೈಸೂರಿನ ಶ್ರೀ ಶಾರದಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಶಿವಾನಿ.ಎಸ್ ಸಿ.ಬಿ.ಎಸ್.ಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 430/500 (ಶೇ.86) ಅಂಕಗಳನ್ನು ಪಡೆದಿದ್ದಾರೆ. ಈಕೆ ಕುವೆಂಪುನಗರ 'ಎಂ' ಬ್ಲಾಕ್ ನಿವಾಸಿ ಶಿವಕುಮಾರಸ್ವಾಮಿ ಮತ್ತು ಅಶ್ವಿನಿರಾವ್ ಎಂ. ದಂಪತಿ ಪುತ್ರಿ.

ಮಾರಿಷಿಯಸ್‌ನಲ್ಲಿ ಕನ್ನಡ ಡಿಂಡಿಮ

ಮೈಸೂರು, ಮೇ 15– ಮಾರಿಷಿಯಸ್‌ನ ಇಂದಿರಾ ಗಾಂಧಿ ಕಲ್ಚರಲ್ ಸೆಂಟರ್ ದೇಶದ ಹಲವು ಬಗೆಯ ಸಂಗೀತ ಮತ್ತು ಇತರ ಕಲೆಗಳ ಶಿಕ್ಷಣ ಹಾಗೂ ಪ್ರಸಾರದಲ್ಲಿ ಗಣನೀಯವಾದ ಸೇವೆಯನ್ನು ಮಾಡುತ್ತಿದ್ದು ಎಲ್ಲಾ ಭಾರತೀಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಪ್ರಸ್ತುತ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಕಾದಂಬಿನಿ ಅವರು ಹಲವು ವರ್ಷಗಳಿಂದ ಬೆಂಗಳೂರಿನ ಜಿಗಿಣಿಯಲ್ಲಿನ ಯೋಗ ಕೇಂದ್ರದಲ್ಲಿ ಸೇವೆ ಸಲ್ಲಿಸಿ ಇದೀಗ ಮಾರಿಷಿಯಸ್‌ನಲ್ಲಿರುವ ಈ ಕೇಂದ್ರಕ್ಕೆ ಎರವಲು ಸೇವೆಗಾಗಿ ನಿಯುಕ್ತಿಗೊಂಡಿರುವ ಈ ಪ್ರತಿಭಾವಂತ ಭಾರತೀಯ ಮಹಿಳೆ ಅಲ್ಲಿಯೂ ಯೋಗ ಹಾಗೂ ಪ್ರಾಣಾಯಾಮ ತರಗತಿಗಳನ್ನು ನಡೆಸುತ್ತಿದ್ದಾರೆ. ಇತ್ತೀಚೆಗೆ



ಈ ಕೇಂದ್ರಕ್ಕೆ ಭೇಟಿ ನೀಡಿದ ಡಿಆರ್‌ಡಿಓದ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ, ಮೈಸೂರಿನ ಕೆ.ಜಯಪ್ರಕಾಶ್‌ರಾವ್ ಅವರಿಗೆ ಮೈಸೂರು ಪಾಕ್ ಹಾಗೂ ಕನ್ನಡ ಪುಸ್ತಕ ನೀಡಿ ಅಭಿನಂದಿಸಿದರು. ಈ ವೇಳೆ ಮೈಸೂರು ಮೂಲದ ಅಲ್ಲಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಕೇಂದ್ರದ ರಿಜಿಸ್ಟ್ರಾರ್ ಡಾ.ಕೆ.ಪಿ. ನವೀನ್ ಹಾಜರಿದ್ದರು.

ಸುವರ್ಣ ಭಾರತೀ ಮಹೋತ್ಸವ ಪ್ರಯುಕ್ತ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 15(ಪಿಎಂ)– ಶೃಂಗೇರಿಯ ಶ್ರೀ ಶಾರದಾ ಪೀಠದ ಶ್ರೀ ಭಾರತೀ ತೀರ್ಥ ಸ್ವಾಮೀಜಿಯವರ 50ನೇ ವರ್ಷದ ಸನ್ಯಾಸ ಸ್ವೀಕಾರ ಸುವರ್ಣ ಭಾರತೀ ಮಹೋತ್ಸವದ ಪ್ರಯುಕ್ತ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮ ಸೇರಿದಂತೆ ವಿವಿಧ ಸೇವಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಎಸ್‌ಎಸ್‌ಎಲ್‌ಸಿ ಮತ್ತು ನಂತರದ ಕೋರ್ಸ್‌ಗಳಲ್ಲಿ ಶೇ.80ಕ್ಕೂ ಹೆಚ್ಚು ಅಂಕಗಳನ್ನು ಪಡೆದಿರುವ ಎಲ್ಲಾ ಭಾರತೀಯ ಹಿಂದೂ ಸಮಾಜದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರು. ಅವರ ಕುಟುಂಬದ ವಾರ್ಷಿಕ ವರಮಾನವು 3 ಲಕ್ಷ ರೂ.ಗೆ ಒಳಪಟ್ಟಿರಬೇಕು. ಅಲ್ಲದೆ, ಮೈಸೂರು ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಥಿವೇತನ ಅರ್ಜಿಗಳನ್ನು 'ಆದರ್ಶ ಸೇವಾ ಸಂಘ' ಸಂಖ್ಯೆ 02, ಬ್ಲಾಕ್ 27, ಮಧುವನ ಬಡಾವಣೆ (ಭ್ರಮರಾಂಭ ಛತ್ರದ ಹಿಂಭಾಗ ವಾಟ್ ಟ್ಯಾಂಕ್ ಬಳಿ), ಶ್ರೀರಾಂಪುರ, 2ನೇ ಹಂತ, ಮೈಸೂರು–570034 (ದೂರವಾಣಿ ಸಂಖ್ಯೆ 0821–3559202) ಇಲ್ಲಿ ಪಡೆಯಬಹುದು. ಅಂತೆಯೇ 2024ರಲ್ಲಿ ತೇರ್ಗಡೆಯಾದ ಪರೀಕ್ಷಾ ಅಂಕಪಟ್ಟಿ, ವಿದ್ಯಾರ್ಥಿಯ ವಿಳಾಸ, ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ವಿವರಗಳನ್ನು ಅರ್ಜಿಯೊಂದಿಗೆ ಮೇ 15ರಿಂದ ಮೇ 30ರವರೆಗೆ ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಲ್ಲಿಸಬಹುದು.

ಮೈಸೂರಿನ ಸರಸ್ವತಿಪುರಂನ ಜ್ಞಾನೋದಯ ಪಿಯು ಕಾಲೇಜಿನಲ್ಲಿ ಇಂದು ವಿದ್ಯಾರ್ಥಿವೇತನದ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಗಳಾಗಿ ಅಭಿನವ ಶಂಕರಾಲಯದ ಧರ್ಮಾಧಿಕಾರಿ ಹೆಚ್.ರಾಮಚಂದ್ರ, ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಕೆ. ಭಾಸ್ಕರ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ ಅವರು ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಲ್ಲದೆ, ವಿದ್ಯಾರ್ಥಿವೇತನ ಕಾರ್ಯಕ್ರಮದ ಬಗ್ಗೆ ಅವರು ವಿವರಗಳನ್ನು ನೀಡಿದರು ಎಂದು ಶ್ರೀ ಅಭಿನವ ಶಂಕರಾಲಯದ ಪ್ರಕಟಣೆ ತಿಳಿಸಿದೆ.

ನಿಧನ

ಮಿರ್ಜಾ ಅಹಮದ್ ಬೇಗ್



ಮೈಸೂರು, ಮೇ 15– ಮೈಸೂರಿನ ರಾಜೀವ್‌ನಗರ ನಿವಾಸಿ ಮಿರ್ಜಾ ಅಹಮದ್ ಬೇಗ್ (69) ಮಂಗಳವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ, ಓರ್ವ ಸಹೋದರ, ಇಬ್ಬರು ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಸಕ ತನ್ವೀರ್ ಸೇಠ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಸೈಯದ್ ದಸ್ತಗಿರ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಆದಂ ಬೇಗ್ ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ವಿವೇಕಾನಂದ ಇಂದು ನಾಮಪತ್ರ ಸಲ್ಲಿಕೆ

ಶ್ರೀಕಂಠೇಗೌಡ, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ತಮ್ಮ ನಿರ್ಧಾರ ಪ್ರಕಟಿಸಿದರು. ಕಳೆದ 12 ವರ್ಷಗಳಿಂದ ವಿಧಾನ ಪರಿಷತ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನಾನು ಕೂಡ ಶಿಕ್ಷಕನಾಗಿರುವ ಕಾರಣ ಶಿಕ್ಷಕರ ಸಮಸ್ಯೆ ನನಗೆ ಚೆನ್ನಾಗಿ ಗೊತ್ತಿದೆ. ಈ ತನಕ ಶಿಕ್ಷಕರ ಪರವಾಗಿ ಹೋರಾಟ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಪ್ರತಿನಿಧಿಯಾಗಿ ನಾನು ಕೂಡ ಸ್ಪರ್ಧೆ ಮಾಡುತ್ತೇನೆ ಎಂದರು. ಹಲವು ವರ್ಷದಿಂದ ಜೆಡಿಎಸ್ ಪಕ್ಷದ ಸಂಘಟನೆ ಮಾಡಿದ್ದು, ಒಂದು ಬಾರಿಯೂ ಪಕ್ಷಾಂತರ ಮಾಡಿಲ್ಲ. ಆದರೂ ಜೆಡಿಎಸ್ ಪಕ್ಷ ನನಗೆ ಯಾವ ಕಾರಣಕ್ಕೆ ಟಿಕೆಟ್ ನೀಡಲಿಲ್ಲ ಎಂಬುದು ತಿಳಿದಿಲ್ಲ. ಆದರೆ ನಿರಂತರ ಶಿಕ್ಷಕರ ಒಡನಾಟ ಹೊಂದಿರುವ ನಾನು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸುತ್ತೇನೆ ಎಂದು ಶ್ರೀಕಂಠೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಮತ್ತೆ ಫ್ಲೈಟ್ ಮಿಸ್ ಮಾಡಿದ ಪ್ರಜ್ವಲ್

ಚಾರ್ಜ್‌ಶೀಟ್ ಅನ್ನು ರದ್ದು ಮಾಡುವಂತೆ ಹೈಕೋರ್ಟ್ ಮೊರೆ ಹೋಗಲು ತೀರ್ಮಾನ ಕೈಗೊಂಡಿದ್ದಾರೆ. ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ರೇವಣ್ಣ ಅವರನ್ನು ಎಸ್‌ಐಟಿ ಬಂಧಿಸಿ ಜೈಲಿಗೆ ಕಳುಹಿಸಿತ್ತು. ಷರತ್ತುಬದ್ಧ ಜಾಮೀನು ಪಡೆದು ನಿನ್ನೆಯಷ್ಟೇ ರೇವಣ್ಣ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಹೊರಬಂದಿದ್ದಾರೆ. ತಂದೆಯ ಜೊತೆ ರೇವಣ್ಣ ಕೂಡ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯ ಆರೋಪ ಹೊತ್ತಿರುವ ಪ್ರಜ್ವಲ್‌ನನ್ನು ಸುರಕ್ಷಿತವಾಗಿ ರಾಷ್ಟ್ರಕ್ಕೆ ಕರೆತಂದು ಪೊಲೀಸರಿಗೆ ಶರಣಾಗಿಸುವ ಬಗ್ಗೆಯೂ ಸಲಹೆ ಪಡೆದಿದ್ದಾರೆನ್ನಲಾಗಿದೆ. ಪೊಲೀಸರು ಪ್ರಜ್ವಲ್‌ನನ್ನು ವಶಕ್ಕೆ ಪಡೆದ ನಂತರ ಕುಟುಂಬದವರಾಗಿ ಯಾವ ರೀತಿ ಕಾನೂನು ಹೋರಾಟ ಮಾಡಲು ಸಾಧ್ಯ ಎಂಬ ಬಗ್ಗೆಯೂ ಮಾಹಿತಿ ಮತ್ತು ಮಾರ್ಗದರ್ಶನ ಪಡೆದಿದ್ದಾರೆ. ಇದರ ಹೊಣೆಗಾರಿಕೆಯನ್ನು ಹಿರಿಯ ವಕೀಲರಿಗೆ ವಹಿಸಿದ್ದಾರೆ ಎನ್ನಲಾಗಿದೆ.

ಯಡಿಯೂರಪ್ಪರಿಗೆ ಬಂಧನ ಭೀತಿ

ಯಡಿಯೂರಪ್ಪ ಅವರು ಬಾಲಕಿಯನ್ನು ಕೊಠಡಿಗೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದಾಗಿ ದೂರಿನಲ್ಲಿ ಆರೋಪಿಸಲಾಗಿತ್ತು. ದೂರು ನೀಡಿದ ನಂತರ ಮಕ್ಕಳ ಮೇಲಿನ ಲೈಂಗಿಕ ತಡೆ (ಪೋಕ್ಸೋ) ಕಾಯಿದೆ ಸೆಕ್ಷನ್ 8 ಹಾಗೂ ಐಪಿಸಿ ಸೆಕ್ಷನ್ 354(ಎ) ಅಡಿ ಮಾರ್ಚ್ 14ರಂದು ಎಫ್‌ಐಆರ್ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಗಳು ಕೆಲವು ವಿಡಿಯೋಗಳನ್ನು ವಶಪಡಿಸಿಕೊಂಡಿದ್ದು, ಜೊತೆಗೆ ಕೆಲವರ ಹೇಳಿಕೆಗಳನ್ನೂ ದಾಖಲಿಸಿಕೊಂಡಿದ್ದಾರೆ. ದೂರು ಕೊಟ್ಟ ಮಹಿಳೆಗೆ ಮಾನಸಿಕ ಸಮಸ್ಯೆ ಇದೆ ಎಂದು ಕೆಲವರು ಹೇಳಿದ್ದಾರೆ. ಅವರು ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ್ದಾರೆ. ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಿ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಂದು ಪ್ರತಿಕ್ರಿಯಿಸಿದ್ದರು.

ಕೆಪಿಎಸ್‌ಸಿ, ಯುಪಿಎಸ್‌ಸಿ ಪರೀಕ್ಷೆ ಕಬ್ಬಿಣದ ಕಡಲೆಯಲ್ಲ

ಲೋಕೋಪಯೋಗಿ ಇಲಾಖೆ ಉಪಕಾರ್ಯದರ್ಶಿ ಡಾ.ಸೋಮನಾಥ್ ಅಭಿಪ್ರಾಯ

ಮೈಸೂರು, ಮೇ15(ಬಿಎಲ್‌ಯು)– ಕೆಪಿಎಸ್‌ಸಿ ಹಾಗೂ ಯುಪಿಎಸ್‌ಸಿ ಪರೀಕ್ಷೆ ಕಬ್ಬಿಣದ ಕಡಲೆ ಎಂಬ ತಪ್ಪು ಕಲ್ಪನೆಯಿಂದ ಮೊದಲು ದೂರವಾಗಬೇಕು ಎಂದು ಲೋಕೋಪಯೋಗಿ ಇಲಾಖೆ ಉಪಕಾರ್ಯದರ್ಶಿ ಡಾ.ಸೋಮನಾಥ ಜಿ.ಪಾಟ್ನೆ ಸಲಹೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಕೆಎಎಸ್ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗೆ ಶ್ರಮ ವಹಿಸಿ ಓದಿದರೆ ಆಯ್ಕೆ ಆಗುವುದು ಕಷ್ಟದ ಕೆಲಸವಲ್ಲ ಎಂದು ಅಭಿಪ್ರಾಯಪಟ್ಟರು.

ಸ್ಪರ್ಧಾತ್ಮಕ ಪರೀಕ್ಷೆ ಬಹಳ ಕಷ್ಟ ಎಂಬ ತಪ್ಪು ಕಲ್ಪನೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತಂತೆ ಮೊದಲು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು ಎಂದು ಹೇಳಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬುಧವಾರ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಆಯೋಜಿಸಿದ್ದ ಕೆಎಎಸ್ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರವನ್ನು ಲೋಕೋಪಯೋಗಿ ಇಲಾಖೆ ಸರ್ಕಾರದ ಉಪ ಕಾರ್ಯದರ್ಶಿ ಡಾ.ಸೋಮನಾಥ ಜಿ.ಪಾಟ್ನೆ ಉದ್ಘಾಟಿಸಿದರು.

ಒಂದು ಬಾರಿ ನಾನು ಅನುತ್ತೀರ್ಣನಾಗಿದ್ದು, ಮುಂದಿನ ಪರೀಕ್ಷೆಗೆ ಕೂರುವುದು ಬೇಡ ಎಂಬ ತೀರ್ಮಾನಕ್ಕೆ ಬರಬಾರದು. ಸೋಲೆ ಗೆಲುವಿನ ಮೆಟ್ಟಿಲು ಎಂದು ಭಾವಿಸಿ ಪ್ರಯತ್ನ ಮಾಡಬೇಕು. ಪ್ರಯತ್ನದಲ್ಲಿ ಛಲ ಮತ್ತು ಪರಿಶ್ರಮ ಇರಬೇಕು ಎಂದು ಡಾ.ಸೋಮನಾಥ ಜಿ.ಪಾಟ್ನೆ ಕಿವಿಮಾತು ಹೇಳಿದರು.

ಇತ್ತೀಚೆಗೆ ಖಾಲಿ ಹುದ್ದೆಗಳ ಸಂಖ್ಯೆ ಕಡಿಮೆ ಇರುತ್ತದೆ. ಆದರೆ ಆಯ್ಕೆ ಬಯಸುವ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿರುತ್ತದೆ. ಆದ ಕಾರಣ ಪರೀಕ್ಷೆ ಕಷ್ಟ ಎಂಬ ಭಾವನೆ ಬರುತ್ತದೆ. ವಿಸ್ತೃತ ಅಧ್ಯಯನ, ಅತೀವ ವಿಶ್ವಾಸ, ಸಾಧಿಸಬೇಕೆಂಬ ಸ್ಫೂರ್ತಿ ಇದ್ದರೆ ಪರೀಕ್ಷೆ ಕಷ್ಟಕರವಾಗಿರುವುದಿಲ್ಲ ಎಂದರು.

ನಾನು ಎಷ್ಟು ತಾಸು ಓದುತ್ತೇವೆ ಎಂಬುದು ಮುಖ್ಯವಲ್ಲ. ಆದರೆ, ಮನಸ್ಸಿಟ್ಟು ಓದುವುದು ಮುಖ್ಯ. ಮನಸ್ಸಿಲ್ಲದೆ ಎಷ್ಟೆ ಗಂಟೆ ಓದಿದರೂ ಏನು ಪ್ರಯೋಜನವಾಗುವುದಿಲ್ಲ. ನಾವು ಓದಿದ ವಿಚಾರವನ್ನು ಅರ್ಥೈಸಿಕೊಳ್ಳಬೇಕು. ನಾವು ಹುದ್ದೆಗೆ ಆಯ್ಕೆಯಾದರೆ ಮತ್ತೊಬ್ಬರಿಗೆ ಸಹಾಯ ಮಾಡುತ್ತೇನೆ ಎಂಬ ಮನೋಭಾವ ಬೆಳೆಸಿಕೊಂಡರೆ ಓದುವ ಉತ್ಸಾಹ ಹೆಚ್ಚಿರುತ್ತದೆ ಎಂದರು. ಇಂದಿನಿಂದ 50 ದಿನಗಳ ಕಾಲ ಶಿಬಿರ ನಡೆಯಲಿದ್ದು, ಮೈಸೂರು ಮಾತ್ರವಲ್ಲದೆ ಕರ್ನಾಟಕದ ಹಲವು ಜಿಲ್ಲೆಗಳಿಂದ ಅಭ್ಯರ್ಥಿಗಳು ಭಾಗವಹಿಸಿದ್ದಾರೆ. ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕಿ ವಿ.ಪ್ರಿಯದರ್ಶಿನಿ, ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಡೀನ್ ಡಾ.ಲಕ್ಷ್ಮಿ, ಡಾ.ಹೆಚ್. ವಿಶ್ವನಾಥ್ ಹಾಗೂ ಶಿಬಿರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> ನಾವು ಪ್ರತಿ ದಿನ ಪತ್ರಿಕೆಗಳನ್ನು ಓದಿ ಜ್ಞಾನ ವೃದ್ಧಿಸಿಕೊಳ್ಳಬೇಕು. ರಾಜಕಾರಣಿಗಳ ಆರೋಪ, ಪ್ರತ್ಯಾರೋಪ ಮಾತ್ರ ಓದಿದರೆ ಯಾವ ಪ್ರಯೋಜನವಾಗುವುದಿಲ್ಲ. ಪರೀಕ್ಷೆಗೆ ಪೂರಕವಾದ ಬಹಳಷ್ಟು ಮಾಹಿತಿಗಳನ್ನು ಗ್ರಹಿಸಿಕೊಳ್ಳಬೇಕು. ಆಗಾದಾಗ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರ ನೀಡಲು ಸಹಾಯವಾಗುತ್ತದೆ.
> –ಡಾ.ಸೋಮನಾಥ ಪಾಟ್ನೆ



ಮೈಸೂರಿನ ವಿಪ್ರ ವಕೀಲರ ವೇದಿಕೆ ವತಿಯಿಂದ ಇತ್ತೀಚೆಗೆ ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಆಯೋಜಿಸಲಾಗಿದ್ದ ಆಚಾರ್ಯತ್ರಯರ ಜಯಂತಿ ಕಾರ್ಯಕ್ರಮದಲ್ಲಿ ನಗರದ ವಕೀಲ, ನೋಟರಿ ಹಾಗೂ ಅಂಕಣಕಾರ ಕೆ.ವಿ.ವಾಸು ಅವರನ್ನು ಸನ್ಮಾನಿಸಲಾಯಿತು.

ಮೇ 21, 22ರಂದು ಮೈಸೂರಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಮೇ 15–ವಿಶ್ವ ರಂಗಭೂಮಿ, ನೃತ್ಯ ಹಾಗೂ ಸಂಗೀತ ದಿನಾಚರಣೆ ಅಂಗವಾಗಿ ಮೇ 21, 22ರಂದು ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಪ್ರದರ್ಶನ ಕಲೆ ಮತ್ತು ಮಾಧ್ಯಮ ಸಾಂಸ್ಕೃತಿಕ ದೃಷ್ಟಿಕೋನಗಳು ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ಪ್ರದರ್ಶಕ ಕಲೆ ಹಾಗೂ ಮಾಧ್ಯಮ ಶಿಕ್ಷಣ ತಜ್ಞರು ಭಾಗವಹಿಸಲಿದ್ದಾರೆ. ಅನೇಕ ಸಂಶೋಧಕರು ಮತ್ತು ಶಿಕ್ಷಕರು ಪ್ರಬಂಧ ಮಂಡಿಸುವರು. ಈ ವಿಚಾರ ಸಂಕಿರಣಕ್ಕೆ ಅಬ್‌ಸ್ಟ್ರ್ಯಾಕ್ಟ್ ಸಲ್ಲಿಸಲು ಮೇ 20 ಕೊನೆ ದಿನ. ಇತರ ವಿವರಗಳನ್ನು ವಿವಿಯ ವೆಬ್‌ಸೈಟ್‌ನಲ್ಲಿ ನೋಡಬಹುದು. ಇಲ್ಲಿ ಮಂಡಿಸಲಾಗುವ ಎಲ್ಲಾ ಲೇಖನಗಳನ್ನು ಐಎಸ್ಬಿಎನ್ ಸಂಖ್ಯೆಯೊಂದಿಗೆ ವಿವಿಧ ಪ್ರಸಾರಾಂಗದಿಂದ ಪ್ರಕಟಿಸಲಾಗುವುದು ಎಂದು ಕುಲಸಚಿವರು ತಿಳಿಸಿದ್ದಾರೆ.

ಕೌಟಿಲ್ಯ ವಿದ್ಯಾಲಯಕ್ಕೆ ಶೇ.100ರಷ್ಟು ಫಲಿತಾಂಶ



ಮೈಸೂರು, ಮೇ 15– ಮೈಸೂರಿನ ಕೌಟಿಲ್ಯ ವಿದ್ಯಾಲಯವು ಸಿಬಿಎಸ್‌ಇ 10ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಸತತ 13ನೇ ಬಾರಿ ಶೇಕಡ ನೂರರಷ್ಟು ಫಲಿತಾಂಶ ಗಳಿಸಿದೆ.

ಪರೀಕ್ಷೆಯನ್ನು ಬರೆದ ಒಟ್ಟು 89 ವಿದ್ಯಾರ್ಥಿಗಳಲ್ಲಿ 39 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 45 ಮಂದಿ ಉತ್ತಮ ಶ್ರೇಣಿ ಪಡೆದಿದ್ದಾರೆ. ಪ್ರಚೇತ್ ಜಯಕುಮಾರ್ 96.4% ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದು ಗಣಿತ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

ಶ್ರದ್ಧಾ ಟಿ.ಯು ಶೇ.96.2 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾಳೆ. ಶ್ರೇಯಸ್ ಜಿ ವಸಿಷ್ಠ ಶೇ.95.6, ಅಥರ್ವ್ ಸಿಂಹ ಶೇ.95.6, ಆದಿತ್ಯ ಎಂ.ಪಾಟೀಲ್ ಶೇ.95.4 ಅಂಕಗಳನ್ನು ಪಡೆದಿದ್ದಾರೆ. ಸಮೃದ್ಧಿ ಎಂ.ಕಾಮತ್ ಸಂಸ್ಕೃತ ವಿಷಯದಲ್ಲಿ 100 ಅಂಕಗಳನ್ನು ಪಡೆದಿದ್ದು, ಮಂಜುನಾಥ್ ಆರ್.ಗೌಡ ಸಮಾಜ ವಿಜ್ಞಾನದಲ್ಲಿ 100 ಅಂಕ ಪಡೆದಿದ್ದಾನೆ.

ರಜಾ ಅವಧಿಯಲ್ಲಿ ವಿಶೇಷ ತರಗತಿಗಳ ನಡೆಸುವಂತೆ ಹೊರಡಿಸಿರುವ ಆದೇಶ ಹಿಂಪಡೆಯಲು ಒತ್ತಾಯ

ಮೈಸೂರು, ಮೇ 15–ರಜಾ ಅವಧಿಯಲ್ಲಿ ವಿಶೇಷ ತರಗತಿಗಳನ್ನು ನಡೆಸುವಂತೆ ಮಾಡಿರುವ ಆದೇಶವನ್ನು ಹಿಂಪಡೆಯುವಂತೆ ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಸ್.ಎಸ್.ಎಲ್.ಸಿ. ಎರಡನೇ ಅವಧಿಯ ಪರೀಕ್ಷೆಗಾಗಿ ವಿಶೇಷ ತರಗತಿಗಳನ್ನು ಕಡ್ಡಾಯವಾಗಿ ಮೇ 15 ರಿಂದ ಜೂನ್ 5 ಆಯಾ ಶಾಲೆಯ ಶಿಕ್ಷಕರನ್ನೇ ಬೇಸಿಗೆ ರಜೆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲು ಆದೇಶಿಸಲಾಗಿದೆ.

ರಜಾ ಅವಧಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ, ಮೌಲ್ಯಮಾಪನ, ಚುನಾವಣಾ ತರಬೇತಿ, ಚುನಾವಣಾ ಕಾರ್ಯ ಹಾಗೂ ಬಿಎಲ್‌ಒಗಳಾಗಿ ಇನ್ನೂ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದ ಚುನಾವಣೆಗೂ ಶಿಕ್ಷಕರನ್ನು ನಿಯೋಜಿಸಲಾಗಿರುತ್ತದೆ. ಶಿಕ್ಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಸಂಬಂಧ ಗಮನಹರಿಸಲು ಸಾಧ್ಯವಾಗದೆ ಶಾಲಾ–ಕಾಲೇಜಿನ ದಾಖಲಾತಿ, ಪರೀಕ್ಷೆ ಹಾಗೂ ಇನ್ನಿತರೆ ಕಾರ್ಯಗಳ ಕಡೆ ಸಮಯ ನೀಡಲು ಸಹ ಸಾಧ್ಯವಾಗದೆ ಮಾನಸಿಕವಾಗಿ ಬಹಳ ಕುಗ್ಗಿರುತ್ತಾರೆ. ಈ ರೀತಿ ಏಕಾಏಕಿ ಆದೇಶ ಮಾಡಿರುವುದರಿಂದ ಪೋಷಕರು ಹಾಗೂ ಶಿಕ್ಷಕರು ರಜಾ ಅವಧಿಯಲ್ಲಿ ತಮ್ಮ ಮಕ್ಕಳನ್ನು ಪ್ರವಾಸ ಹಾಗೂ ಇನ್ನಿತರೆ ಪೂರ್ವನಿಯೋಜಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ತುಂಬಾ ತೊಂದರೆ ಉಂಟಾಗಿರುತ್ತದೆ.

ಮೇ 28ರಿಂದ ಎಲ್ಲಾ ಶಾಲೆಗಳು ಪ್ರಾರಂಭವಾಗಲಿದ್ದು, ಶಾಲೆ ಪ್ರಾರಂಭವಾದ ಮೇಲೆ ಅಂದರೆ ಮೇ 28ರಿಂದ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ರೆಗ್ಯೂಲರ್ ತರಗತಿಗಳ ಅವಧಿಯಲ್ಲೇ ಸಮಯ ಸರಿದೂಗಿಸಿಕೊಂಡು ವಿಶೇಷ ತರಗತಿಗಳನ್ನು ನಡೆಸುವುದು ಸೂಕ್ತ. ಆದ ಕಾರಣ, ರಜಾ ಅವಧಿಯಲ್ಲಿ ನಡೆಸಲು ಉದ್ದೇಶಿಸಿರುವ ವಿಶೇಷ ತರಗತಿ ಆದೇಶವನ್ನು ಕೂಡಲೇ ಹಿಂಪಡೆಯಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರನ್ನು ಒತ್ತಾಯಿಸಿದ್ದಾರೆ.

> ಹೆಸರಿಗೆ ಮಾತ್ರ ರಜಾ ಸಹಿತ ಇಲಾಖೆಯೆಂದು ಪರಿಗಣಿಸಿ, ರಜಾ ಅವಧಿಯಲ್ಲೂ ಬಿಡುವಿಲ್ಲದ ರೀತಿಯಲ್ಲಿ ಒಂದಿಲ್ಲೊಂದು ಕೆಲಸ ಹಂಚಿಕೆ ಮಾಡಲಾಗುತ್ತಿರುವುದು ಶೋಚನೀಯ. ವರ್ಷಕ್ಕೆ 3 ಪರೀಕ್ಷೆಗಳನ್ನು ಅವೈಜ್ಞಾನಿಕವಾಗಿ ನಡೆಸಲು ಉದ್ದೇಶಿಸಿರುವುದೇ ಹಲವು ಗೊಂದಲ ಹಾಗೂ ತೊಂದರೆಗಳಿಗೆ ಕಾರಣ. ಬೋಧನೆಗೆ ಕಾಲಾವಕಾಶ ಇಲ್ಲದೆ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಆಸಕ್ತಿ ಕಳೆದುಕೊಂಡು ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗಿದೆ. –ಮರಿತಿಬ್ಬೇಗೌಡ




ದೃಷ್ಟಿ, ಶ್ರವಣದೋಷವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು, ಮೇ 15– ಮೈಸೂರಿನ ಯಾದವಗಿರಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್.ಎ.ಬಿ. ಅಂಧ ಮತ್ತು ಕಿವುಡರ ಕೈಗಾರಿಕಾ ತರಬೇತಿ ಕೇಂದ್ರದ ವತಿಯಿಂದ ಪ್ರಸಕ್ತ 2024–25ನೇ ಸಾಲಿನ 35ನೇ ತಂಡದ ತರಬೇತಿಗಾಗಿ 16ರಿಂದ 25 ವರ್ಷಗಳ ವಯೋಮಿತಿಯಲ್ಲಿರುವ ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಭ್ಯಾಸ ಮಾಡಿರುವ ದೃಷ್ಟಿದೋಷ ಹಾಗೂ ಶ್ರವಣದೋಷವುಳ್ಳ ಯುವಕ ಮತ್ತು ಯುವತಿಯರಿಂದ ಅರ್ಜಿ ಆಹ್ವಾನಿಸಿದೆ.

ತರಬೇತಿಯು ಸಂಪೂರ್ಣ ಉಚಿತವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ 250 ಪ್ರಶಿಕ್ಷಣಾರ್ಥಿ ವೇತನವನ್ನು ನೀಡಲಾಗುವುದು. ಒಂದು ವರ್ಷದ ಅವಧಿಯಲ್ಲಿ ಲೈಟ್ ಎಂಜಿನಿಯರಿಂಗ್, ಪ್ಲಾಸ್ಟಿಕ್ ಇಂಜೆಕ್ಷನ್ ಮೌಲ್ಡಿಂಗ್, ಬೇಸಿಕ್ ಎಲೆಕ್ಟ್ರಿಕಲ್ ನಾರಿನಿಂದ ಹಗ್ಗ ಮತ್ತು ಫುಟ್ ರಗ್ ಮಾಡುವುದು, ರೀಕೇನಿಂಗ್ ಹಾಗೂ ಬೇಸಿಕ್ ಕಂಪ್ಯೂಟರ್ ವಿಷಯದಲ್ಲಿ ತರಬೇತಿ ನೀಡಲಾಗುತ್ತದೆ. ದೃಷ್ಟಿದೋಷವುಳ್ಳ ಅಭ್ಯರ್ಥಿಗಳಿಗೆ ಚಲನವಲನ ತರಬೇತಿಯನ್ನು ಸಹ ನೀಡಲಾಗುತ್ತದೆ. ಆಸಕ್ತ ದೃಷ್ಟಿದೋಷ ಹಾಗೂ ಶ್ರವಣದೋಷವುಳ್ಳ ಅಭ್ಯರ್ಥಿಗಳು ಮೇಲ್ಕಂಡ ವಿಳಾಸದಲ್ಲಿ ಅರ್ಜಿ ಪಡೆಯಬಹುದು. ಮಾಹಿತಿಗಾಗಿ ದೂ. 2514431, ಕಚೇರಿ ವೇಳೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.05.2024 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು :** 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಗರಡಿ ಬೀದಿಯಿಂದ ಹೊಸ ಬೀದಿ 1 ರಿಂದ 5ನೇ ಕ್ರಾಸ್‌ವರೆಗೆ, ಹಳೆ ಮಾಡಲ್ ಹೌಸ್, ಎಸ್‌ಆರ್‌ಟಿ ಗ್ಯಾರೇಜ್ ಮಾರ್ಗವಾಗಿ ನ್ಯೂ ಮಾಡಲ್ ಹೌಸ್‌ನವರೆಗೆ ಭಕ್ತಾದಿಗಳ ಪೂಜೆ ಸ್ವೀಕರಿಸಿ, ಗಣಪತಿ ದೇವಸ್ಥಾನದ ಮಾರ್ಗವಾಗಿ ದೇವಸ್ಥಾನಕ್ಕೆ ಬಂದು ಸೇರುತ್ತದೆ. ನಂತರ ಮಹಾಮಂಗಳಾರತಿ.
- **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನ ಪೂರ್ವಕ ನಿತ್ಯಹೋಮ, ಮಹಾಸುದರ್ಶನ ಹೋಮ, ಪೂರ್ಣಾಹುತಿ, ಗರುಡೋತ್ಸವ, ಸಂಜೆ 6ಕ್ಕೆ ರುಕ್ಮಿಣಿ ಕಲ್ಯಾಣೋತ್ಸವ, ಲಾಜಾ ಹೋಮ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.
- **ಆರ್ಟ್ ಆಫ್ ಲಿವಿಂಗ್ :** ಮೇಧಾ ಯೋಗ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ
- **ಶ್ರೀ ನಟರಾಜ ವಸತಿ ಪ್ರಥಮ ದರ್ಜೆ ಮಹಿಳಾ ಕಾಲೇಜು :** ಆರ್ಟ್ ಕಾಮ್ ಅರೆನಾ ಇನ್‌ಫಿನಿಟಿ–2024, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಕೈಗಾರಿಕೋದ್ಯಮಿ ಎಂ. ಗಣೇಶ್, ಮುಖ್ಯ ಅತಿಥಿಗಳು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ ಎಸ್. ಶಿವರಾಜಪ್ಪ, ಗ್ರಂಥಪಾಲಕ ಜಿ.ಎಸ್. ಚಂದ್ರಶೇಖರ, ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಹೀನಾ ಕೌಸರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ
- **ಮಹಾರಾಜ ಕಾಲೇಜು :** ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಹೆಚ್. ಸೋಮಶೇಖರಪ್ಪ, ಉಪಸ್ಥಿತರು : ಕಾಲೇಜು ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಸಂಚಾಲಕ ಪ್ರೊ. ಷಹಸೀನಾಬೇಗಂ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಬೆಳಗ್ಗೆ 11ಕ್ಕೆ.
- **ಹರಿ ವಿದ್ಯಾಲಯ, ಕಾಸ್ಮಾಸ್ :** ಇಸ್ರೋ ವಿಜ್ಞಾನಿ ಡಾ. ವಿ. ಗಿರೀಶ್ ಅವರೊಂದಿಗೆ ಸಂವಾದ, ಸ್ಥಳ: ಶಾಲೆ ಆವರಣ, ಬೆಳಗ್ಗೆ 11.30 ರಿಂದ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಬಸವ ಜಯಂತಿ, ಗುರುವಂದನಾ ಕಾರ್ಯಕ್ರಮ, ಬಸವ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಬಂಡಳ್ಳಿ ದೊಡ್ಡ ಮಠದ ಮಠಾಧ್ಯಕ್ಷ ಡಾ. ಫಲಹಾರ ಪ್ರಭುದೇವ ಸ್ವಾಮಿಗಳು, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಅಖಿಲ ಕರ್ನಾಟಕ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಕೋಶಾಧ್ಯಕ್ಷ ವರುಣಾ ಮಹೇಶ್, ಮುಖ್ಯ ಅತಿಥಿಗಳು : ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಪ್ರದೀಪ್ ಕುಮಾರ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಕಲಾಸುರುಚಿ :** ಬೆಂಗಳೂರಿನ ಸಹಚಾರಿ ತಂಡದಿಂದ 'ಶಾಂತಿ ಮತ್ತು ಪ್ರೀತಿಗಾಗಿ' ನೃತ್ಯ ಕಾರ್ಯಕ್ರಮ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.
- **ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು :** ಕಾಯಕ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಸಮ್ಮುಖ : ಶ್ರೀ ಸಿದ್ದಮಲ್ಲೇಶ್ವರ ಪಟ್ಟದ ಮಠದ ಶ್ರೀ ಮಹದೇವ ಸ್ವಾಮೀಜಿ, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಜಡೇ ಸ್ವಾಮೀಜಿ, ಶ್ರೀ ಬಸವರಾಜ ಸ್ವಾಮೀಜಿ, ಡಾ. ಡಿ.ಎಂ. ಮಹೇಂದ್ರಮೂರ್ತಿ ಅವರಿಂದ ಬಸವಾದಿ ಶರಣರು ಮತ್ತು ಕಾಯಕ ತತ್ವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಸನ್ಮಾನಿತರು : ಡಾ. ಎಚ್.ಬಿ. ರಾಜಶೇಖರ್, ಡಾ.ಎಚ್.ಬಿ. ಬೆಟ್ಟಸ್ವಾಮಿ, ಜಿ.ಬಿ. ಸಂತೋಷ್‌ಕುಮಾರ್, ರಾಜಾಚಾರ್, ಗುರುಸ್ವಾಮಿ, ಶಾಂತಮ್ಮ, ಕೆ. ಮಹದೇವಸ್ವಾಮಿ, ಓ.ಜಿ. ಸ್ವಾಮಿ, ನಾಗರಾಜು, ಕಿರಾಳು ಸ್ವಾಮಿ, ಸ್ಥಳ: ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ಕಿರಾಳು ಗ್ರಾಮ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಪ್ರಸ್ತುತಿ–ಆನಂದ ಗೋಪಾಲ್, 6.15 ಗೀತಾರಾಧನ, 6.35 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಪದ ಸಂಸ್ಕೃತಿ, 7.15 ಭಾವಗೀತೆಗಳು–ಕೆ.ಸಿ.ಶಿವಪ್ಪ ಅವರ ರಚನೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ– ಡಾ. ಎಸ್. ವಿಜಯರಾಘವನ್ – ವೀಣಾವಾದನ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಬಿ.ಎನ್.ಮಂಜುಳ, 12.45 ಚಟ್–ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಮೀನಾ, 1.20 ಭಾವಗೀತೆ–ಸಾವಿತ್ರಿ ಪ್ರಭಾಕರ್, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ:ಪರಿಸರ ಸಂರಕ್ಷಣೆ ಹಾಗೂ ವೈಜ್ಞಾನಿಕ ಮನೋಭಾವ, ಚರ್ಚೆ, ಭಾಗವಹಿಸುತ್ತಾರೆ–ಕೃಪಾಕರ ಹಾಗೂ ಸೇನಾನಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ–ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್ ವಾಣಿ, ಹವಾಮಾನ ಆಧಾರಿತ ಬೆಳೆ ಮುನ್ಸೂಚನೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ– ನಾಗನಹಳ್ಳಿಯ ಕೃಷಿ ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಸಿ.ರಾಮಚಂದ್ರ ಹಾಗೂ ಕೃಷಿ ಹವಾಮಾನ ವಿಭಾಗದ ಸಹ ಸಂಶೋಧಕರಾದ ಡಾ. ಸುಮಂತ್ ಕುಮಾರ್, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಯುವವಾಣಿ–LIVE– 'ಹಲೋ ಯುವವಾಣಿ' ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ– ಎಚ್.ನಿವೇದಿತಾ, 10.00 ನಾಟಕ : ರಾಮಧಾನ್ಯ ಪ್ರಕರಣ–ಕನಕದಾಸರ ರಾಮಧಾನ್ಯ ಚರಿತೆಯ ಪ್ರೇರಿತ ನಾಟಕ, ಪ್ರಸ್ತುತಿ–ಬಹುಮುಖಿ ಸಾಂಸ್ಕೃತಿಕ ವೇದಿಕೆ ಮೈಸೂರು, 10.30 ಸವಿನೆನಪು

ನಕ್ಕರೆ ಅದೇ ಸ್ವರ್ಗ

ಜಿಪುಣ ಶ್ರೀಮಂತ ರೋಗಿ : "ನನ್ನ ಬಾಯಿಲೆ ವಾಸಿ ಮಾಡೋಕೆ ಎಷ್ಟು ಖರ್ಚಾಗುತ್ತೆ?"
ವೈದ್ಯ : "ಐವತ್ತು ರೂಪಾಯಿ"
ರೋಗಿ : "ಸಾಯಲು"
ವೈದ್ಯ : "ಐದು ರೂಪಾಯಿ"
ರೋಗಿ : "ಹಾಗಾದರೆ ನಾನು ಸಾಯಲು ಸಿದ್ಧ. ನಲವತ್ತೈದು ರೂಪಾಯಿ ಉಳಿಯುತ್ತೆ"

ಮೈಸೂರು ಮಿತ್ರ
ಗುರುವಾರ, 16 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪ್ರೇಮವೆಂಬುದು ಸುಗಂಧ ಬೀರುವ ವಸ್ತು.
ಅದು ಲೋಕವನ್ನು ಸುಗಂಧಮಯವನ್ನಾಗಿಸುತ್ತದೆ. – ಟ್ರೆಂಚ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಾರೀಲಿ ಹೋಗೋನ್ನ ಅಪ್ಪಾ ಅಂದ್ರೆ ಯಾರಿಗೆ ಹುಟ್ಟಿದೋ ಮಗನೆ ಅಂದನಂತೆ

ನಿಮ್ಮ ಪತ್ರಗಳು

■ ಚಾಮುಂಡಿಬೆಟ್ಟದಲ್ಲಿ ಚಪ್ಪಲಿ ಮುಟ್ಟಿದ ಕೈಯಲ್ಲಿ ದೇವರಿಗೆ ನಮಸ್ಕರಿಸಬೇಕೆ?

ಮಾನ್ಯರೆ,

ಜಗದ್ವಿಖ್ಯಾತ ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ಅಮ್ಮನವರ ದರ್ಶನಕ್ಕೆ ಮೊನ್ನೆ ಹೋಗಿದ್ದ ಸಂದರ್ಭದಲ್ಲಿ ಚಪ್ಪಲಿಗಳನ್ನು ಸ್ಟ್ಯಾಂಡಿನಲ್ಲಿಯೇ ಬಿಡತಕ್ಕದ್ದು ಎಂಬ ಪ್ರಕಟಣೆ ದೇವಾಲಯದ ಕಡೆಯಿಂದ ಚಪ್ಪಲಿ ಸ್ಟ್ಯಾಂಡ್ ಬಳಿಯಲ್ಲಿ ಹೊರಡುತ್ತಿತ್ತು. ಯಾವುದೇ ತೆಂಗಿನಕಾಯಿ ಅಥವಾ ಮಳಿಗೆಯ ಬಳಿ ಅನಧಿಕೃತವಾಗಿ ಬಿಡುವಂತಿಲ್ಲ ಎಂಬ ಎಚ್ಚರಿಕೆ ಸಹ ಆ ಪ್ರಕಟಣೆಯಲ್ಲಿ ಇತ್ತು.

ಸರಿ ಎಂದು ನಾವು ಚಪ್ಪಲಿ ಅಧಿಕೃತ ಸ್ಟ್ಯಾಂಡ್‌ನಲ್ಲಿ ಬಿಟ್ಟು ದೇವರ ದರ್ಶನಕ್ಕೆ ಹೋದರೆ ಚಪ್ಪಲಿ ಮುಟ್ಟಿದ ಕೈಯನ್ನು ತೊಳೆಯಲು ನೀರಿನ ವ್ಯವಸ್ಥೆ ಎಲ್ಲೂ ಇಲ್ಲ. ದೇವಸ್ಥಾನದ ನೂರು ರೂಪಾಯಿ ಟಿಕೆಟ್‌ನ ಪಕ್ಕದ ನಲ್ಲಿಯಲ್ಲಿ ಕೈತೊಳೆಯಲು, ಕುಡಿಯಲೂ ಸಹ ನೀರಿಲ್ಲ. ಇದು ಕಳೆದ ನಾಲ್ಕು ತಿಂಗಳಿಂದ ಐದನೇ ಬಾರಿ ನನಗಾದ ಅನುಭವ. ಚಪ್ಪಲಿ ಸ್ಟ್ಯಾಂಡ್‌ನವರಿಗೆ ಈ ಬಗ್ಗೆ ಕೇಳಿದರೆ ದೇವಸ್ಥಾನದವರನ್ನು ಕೇಳಿ, ಟೆಂಡರ್ ದುಡ್ಡು ಕಟ್ಟಿದ್ದೇವೆ ಅವರಿಗೆ ಎಂದು ಮುಖಕ್ಕೆ ಹೊಡೆದ ಹಾಗೆ ಹೇಳಿದ. ಅಲ್ಲಪ್ಪಾ ಟೆಂಡರ್‌ನಲ್ಲಿ ಇವೆಲ್ಲಾ ಹೇಳಿರಲ್ವಾ ಅಂದ್ರೆ, ನಮ್ಮ ಹತ್ರ ಆ ಬಗ್ಗೆ ಮಾತು ಬೇಡ ಅವರನ್ನೇ ಕೇಳಿ ಎಂದ.

ದೇವಸ್ಥಾನಕ್ಕೆ ಹೋಗುವಾಗ ಚಪ್ಪಲಿ ಮುಟ್ಟಿದ ಕೈನಲ್ಲಿ ದೇವರಿಗೆ ನಮಸ್ಕರಿಸುವ ದೌರ್ಭಾಗ್ಯ ಭಕ್ತರಿಗೆ ಕರುಣಿಸಿದ ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಯ ಕಾರ್ಯವೈಖರಿ ಕೇಳುವವರ್‍ಯಾರು.

ಈ ಬಗ್ಗೆ ದೂರವಾಣಿ ಸಂಖ್ಯೆ 0821–2590027ಗೆ ಕರೆ ಮಾಡಿದರೆ ಫೋನ್ ಎತ್ತುವವರೇ ಇಲ್ಲ. ಇದು ಚಾಮುಂಡಿಬೆಟ್ಟದ ದೇವಸ್ಥಾನದ ಆಡಳಿತ ಮಂಡಳಿ ಅಧಿಕೃತ ದೂರವಾಣಿ. ಬೇರೆ ಸರ್ಕಾರಿ ಇಲಾಖೆಗಳಂತೆಯೇ ಬೇಜವಾಬ್ದಾರಿ ವರ್ತನೆಗೆ ಸಾಕ್ಷಿಯಾಗಿದೆ. ಚಪ್ಪಲಿ ಸ್ಟ್ಯಾಂಡ್‌ನಲ್ಲಿ ಧರ್ಮಸ್ಥಳ, ಸುಬ್ರಮಣ್ಯ, ನಂಜನಗೂಡು, ಶೃಂಗೇರಿ ಎಲ್ಲಾ ಕಡೆ ಸ್ಟ್ಯಾಂಡ್‌ನವರು ಅವರೇ ಚಪ್ಪಲಿ ಎತ್ತಿ ಇಡುತ್ತಾರೆ. ಇಲ್ಲದಿದ್ದರೂ ಕಡೇ ಪಕ್ಷ ನೀರಿನ ಸೌಲಭ್ಯವಿರುತ್ತದೆ.

ಚಾಮುಂಡಿಬೆಟ್ಟದಲ್ಲಿ ಈ ಕನಿಷ್ಠ ಸೌಲಭ್ಯವನ್ನು ದೊರಕಿಸದ ಸರ್ಕಾರ ದೇವರ ಹುಂಡಿಯ ಹಣ ಉಪಯೋಗಿಸುವಲ್ಲಿ ಮುಂದಾಗಿರುವುದು ಸರಿಯಲ್ಲ. ಈ ಬಗ್ಗೆ ಸಂಬಂಧಿಸಿದವರು ಏನೆನ್ನುತ್ತಾರೆ? ಇಲ್ಲಿನ ಭಕ್ತರ ದೂರಿಗೆ ಬೆಲೆ ಇದೆಯೇ? ಸೂಕ್ತ ವ್ಯವಸ್ಥೆಯ ನಿರೀಕ್ಷೆಯಲ್ಲಿದ್ದೇವೆ. ಸ್ಪಂದನೆಯ ಕಾರ್ಯ ಜರೂರು ಆಗಬೇಕಾಗಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

■ ಮುಂಗಾರು ಮಳೆಗೂ ಮುನ್ನ ಎಚ್ಚೆತ್ತುಕೊಳ್ಳಿ

ಮಾನ್ಯರೆ,

ಇತ್ತೀಚೆಗೆ ಹೆಚ್ಚುತ್ತಿರುವ ಬಿಸಿಲಿನ ತಾಪಮಾನದಿಂದ ಬೇಸತ್ತಿದ್ದ ಸಾಂಸ್ಕೃತಿಕ ನಗರಿ ಮೈಸೂರಿನ ಜನತೆಗೆ ಮುಂಗಾರು ಪೂರ್ವ ಮಳೆಯು ತಂಪೆರೆದಿದೆ. ವರುಣನ ಆಗಮನದಿಂದ ಭೂಮಿ ತಂಪಾಯಿತು ಎನ್ನುವಷ್ಟರಲ್ಲಿಯೇ, ಮೈಸೂರಿನಲ್ಲಿ ಹತ್ತಾರು ಬೃಹತ್ ಗಾತ್ರದ ಮರಗಳು ಧರೆಗುರುಳಿವೆ. ಇದರಿಂದಾಗಿ ಹಲವು ವಾಹನಗಳು ಜಖಂ ಆಗಿದ್ದು, ಎಷ್ಟೋ ಕಡೆ ವಿದ್ಯುತ್ ತಂತಿ ಕಿತ್ತುಹೋಗಿವೆ. ಕಂಬಗಳು ನೆಲಕಚ್ಚಿವೆ. ಇನ್ನು ನಗರದ ಪ್ರಮುಖ ರಸ್ತೆಗಳಾದ ಹಳೇ ಆರ್‌ಎಂಸಿ ರಸ್ತೆ, ದಾಸಪ್ಪ ವೃತ್ತ, ಸಬರ್ಬನ್ ಬಸ್ ಸ್ಟ್ಯಾಂಡ್ ಮುಂಭಾಗ ಹಾಗೂ ನಗರದ ಹಲವೆಡೆ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೇ ಮತ್ತು ರಸ್ತೆಯಲ್ಲಿರುವ ಹಳ್ಳಗಳ ಕಾರಣ ಮಳೆ ನೀರು ತುಂಬಿಕೊಂಡು ಕೆರೆಯಂತಾಗುತ್ತದೆ. ಇನ್ನು ರಸ್ತೆ ಮಧ್ಯಕ್ಕೆ ಅಡ್ಡವಾಗಿ ಬೀಳುವ ದೊಡ್ಡ ಮರಗಳಿಂದ ಹಲವು ಗಂಟೆಗಳ ಕಾಲ ಮುಖ್ಯ ರಸ್ತೆಗಳಲ್ಲಿ ಟ್ರಾಫಿಕ್ ಕಿರಿಕಿರಿಯುಂಟಾಗುತ್ತದೆ. ಪೂರ್ವ ಮುಂಗಾರು ಮಳೆಗೆ ಇಷ್ಟು ತೊಂದರೆಗಳು ಕಾಣುತ್ತಿದ್ದು, ಅಧಿಕಾರಿಗಳು ಈ ಕೂಡಲೆ ಎಚ್ಚೆತ್ತುಕೊಂಡು ಮುಂಬರುವ ಮುಂಗಾರಿಗೂ ಮುನ್ನ ನಗರದ ರಸ್ತೆಬದಿಯಲ್ಲಿ ಚರಂಡಿ ವ್ಯವಸ್ಥೆ ಸರಿಪಡಿಸಿ, ರಸ್ತೆಗಳಿಗೆ ಅಡ್ಡವಾಗಿರುವ, ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ತೆರವುಗೊಳಿಸಿ ಮುಂದೆ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸಬೇಕಿದೆ.

–ವಿ. ಕಿರಣ್, ಸಂತ ಫಿಲೋಮಿನಾ ಕಾಲೇಜು, ಮೈಸೂರು

■ ಬೀದಿನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಅಂಚನಹಳ್ಳಿ ಗ್ರಾಮದಲ್ಲಿ ಶ್ವಾನಗಳು ಹೆಚ್ಚಾಗಿರುವ ಕಾರಣ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಗ್ರಾಮಸ್ಥರ ಕುರಿ, ಮೇಕೆ, ಎತ್ತು, ಕೋಳಿಗಳು ರಸ್ತೆಗಳಿಗೆ ಬರುತ್ತಿದ್ದಂತೆ ಅವುಗಳ ಮೇಲೆ ನಾಯಿಗಳು ದಾಳಿ ನಡೆಸಿದ್ದು ಅದೆಷ್ಟೋ ಕೋಳಿಗಳು ಬಲಿಯಾಗಿವೆ. ಹಾಗೆಯೇ ರಸ್ತೆಯಲ್ಲಿ ಓಡಾಡುವಾಗ ಮಕ್ಕಳು ಹಾಗೂ ವೃದ್ಧರ ಮೇಲೂ ಅನೇಕ ಬಾರಿ ಬೀದಿನಾಯಿಗಳು ದಾಳಿ ಮಾಡುತ್ತಿದ್ದು, ಬಹುದೊಡ್ಡ ತಲೆನೋವಾಗಿ ಪರಿಣಮಿಸಿದೆ. ಯಾವುದೇ ವಾಹನಗಳಲ್ಲಿ ಚಲಿಸುವಾಗ ನಾಯಿಗಳು ಅಡ್ಡ ಬಂದು ತೊಂದರೆ ನೀಡುತ್ತಿದ್ದು ಇಲ್ಲಿನ ಜನರು ರಸ್ತೆಯಲ್ಲಿ ಬಿದ್ದು ಗಾಯಗಳಾಗುತ್ತಿರುವುದು ಸಾಮಾನ್ಯವಾಗಿದೆ. ಇದರಿಂದ, ಇಲ್ಲಿನ ಗ್ರಾಮಸ್ಥರು ರಸ್ತೆಯಲ್ಲಿ ಓಡಾಡಲು ಭಯಭೀತರಾಗಿದ್ದಾರೆ. ಆದ್ದರಿಂದ ಸಂಬಂಧಪಟ್ಟವರು ಗಮನಹರಿಸಿ ಕೂಡಲೇ ಗ್ರಾಮಕ್ಕೆ ಬಂದು ಮುಂದಾಗುವ ಅನಾಹುತಗಳನ್ನು ತಪ್ಪಿಸುವಂತೆ ಈ ಮೂಲಕ ಮನವಿ.

–ಎ.ಈ.ಮಹಾಲಕ್ಷ್ಮಿ, ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು, ಮೈಸೂರು

■ ವಿವೇಚನೆ ಇಲ್ಲದ ಅವೈಜ್ಞಾನಿಕ ರಸ್ತೆ ವಿಭಜಕ ಅಪಘಾತಕ್ಕೆ ಪೂರಕ

ಮಾನ್ಯರೆ,

ಮೇ 13ರ 'ಮೈಸೂರು ಮಿತ್ರ'ದಲ್ಲಿ ನಾಗಮಂಗಲ ನರಸಿಂಹಮೂರ್ತಿಯವರು ಬರೆದಿರುವ ಪತ್ರ ಸರಿಯಾಗಿಯೇ ಇದೆ. ಮೈಸೂರಿನ ವಿಜಯನಗರದಲ್ಲಿ ಸುಲಲಿತವಾಗಿದ್ದ ಸಂಚಾರ ಸಮಸ್ಯೆ ಪ್ರಸ್ತುತ ನಿರ್ಮಿಸುತ್ತಿರುವ ರಸ್ತೆ ವಿಭಜಕದಿಂದಾಗಿ ಅಪಘಾತಗಳು ನಡೆಯುವ ಸಾಧ್ಯತೆಗಳೇ ಹೆಚ್ಚಾಗಿದೆ. ಇದಕ್ಕೆ ಪರಿಹಾರವೆಂದರೆ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್‌ನಿಂದ ಮುಂದೆ ತ್ರಿವೇಣಿ ವೃತ್ತದ ಕಡೆಗೆ ತೆರಳುವ ವಾಹನಗಳಿಗೆ ಪ್ರತ್ಯೇಕವಾಗಿ ವಿಭಜಕದಲ್ಲಿ ಒಂದು ತೆರವು, ನಂತರ ವಿಭಜಕ ಅಳವಡಿಸಿ ಮತ್ತೆ ಇದೇ ರಸ್ತೆಯಿಂದ ರೈಲ್ವೆ ಬಡಾವಣೆಗೆ ತೆರಳುವ ವಾಹನಗಳಿಗೆ ಪುನಃ ಒಂದು ತೆರವು ಮಾಡಿಸಿದಲ್ಲಿ ಒಳಿತು. ಬಹುಶಃ ಈ ಜಿಜ್ಞಾಸೆಗಾಗಿಯೇ ಈ ಭಾಗದ ವಿಭಜಕ ನಿರ್ಮಾಣ ಇಲ್ಲಿಯವರೆಗೂ ತಡೆಹಿಡಿದಿರಲಿಕ್ಕೂ ಸಾಕು. ಈ ಹಿಂದೆ ಇದೇ ರಸ್ತೆಯಲ್ಲಿ ಡುಬ್ಬದ ಬಗ್ಗೆಯೂ ಹೀಗೆಯೇ ನಿರ್ಮಾಣವಾದ ನಂತರ ಒಡೆದು ನಿರ್ಮಿಸಲಾಗಿತ್ತು. ಈ ಬಗ್ಗೆ ಸಂಬಂಧಪಟ್ಟವರು ಗಮನ ಹರಿಸಿ ಸೂಕ್ತ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವಲ್ಲಿ ನೆರವಾಗಲಿ.

–ವಿಜಯ್ ಹೆಮ್ಮಿಗೆ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ದಾಸ ಸಾಹಿತ್ಯದ ಅಮೂಲ್ಯ ರತ್ನ ಪುರಂದರದಾಸರು



ಸಾಹಿತ್ಯ ಅನುಭವದ ಪ್ರತಿರೂಪ. ಇಂತಹ ಸಾಹಿತ್ಯ ವಿವಿಧ ಕಾಲ ಘಟ್ಟದಲ್ಲಿ ವಿವಿಧ ಪ್ರಕಾರದಲ್ಲಿ ಮೂಡಿ ಪ್ರಕಟವಾಗಿರುವುದು ಸಾಹಿತ್ಯದ ಸಮೃದ್ಧಿಯನ್ನು ಕನ್ನಡಿಯಾಗಿಸಿದೆ. ಈ ನಿಟ್ಟಿನಲ್ಲಿ ದಾಸ ಸಾಹಿತ್ಯ, ಕನ್ನಡ ಸಾಹಿತ್ಯ ಯುಗದಲ್ಲಿ ಮರೆಯಲಾಗದ ಸತ್ವವನ್ನು ಉಳಿಸಿಕೊಂಡು ಜನಮಾನಸದಲ್ಲಿ ಪ್ರಸ್ತುತ ಕಾಲದಲ್ಲಿಯೂ ಶಾಶ್ವತವಾಗಿ ನೆಲೆ ನಿಂತಿದೆ. ಇಂತಹ ಸಾಹಿತ್ಯದಲ್ಲಿ ಮರೆಯಲಾಗದ ಅಮೂಲ್ಯ ರತ್ನ ಎಂದರೆ ಅದು ಪುರಂದರದಾಸರು. ದಾಸರೆಂದರೆ ಪುರಂದರದಾಸರಯ್ಯ... ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಸಿಕೊಂಡ ಹೆಗ್ಗಳಿಕೆ ಇವರದು. ಪುರಂದರದಾಸರು ಮತ್ತು ಕನಕದಾಸರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಎಂದು ಕರೆಯುತ್ತಾರೆ.

ಶ್ರೀನಿವಾಸನಾಯಕ ಪುರಂದರದಾಸನಾದ: ಪುರಂದರದಾಸರ ಮೊದಲ ಹೆಸರು ಶ್ರೀನಿವಾಸನಾಯಕ. ಒಮ್ಮೆ ಶ್ರೀನಿವಾಸನಾಯಕರ ಬಳಿ ಬಡ ಬ್ರಾಹ್ಮಣನೊಬ್ಬ ಬಂದು ತನ್ನ ಮಗನ ಉಪನಯನಕ್ಕಾಗಿ ಸಹಾಯವನ್ನು ಬೇಡುತ್ತಾನೆ. ಜಿಪುಣನಾಗಿದ್ದ ಶ್ರೀನಿವಾಸ, ಬಡ ಬ್ರಾಹ್ಮಣನಿಗೆ ಯಾವುದೇ ಸಹಾಯವನ್ನು ಮಾಡುವುದಿಲ್ಲ. ನಂತರ ಆ ಬಡ ಬ್ರಾಹ್ಮಣ ಶ್ರೀನಿವಾಸನಾಯಕರ ಹೆಂಡತಿಯಾದ ಸರಸ್ವತಿ ಬಾಯಿ ಹತ್ತಿರ ಹೋಗಿ ಸಹಾಯವನ್ನು ಬೇಡುತ್ತಾನೆ. ಗಂಡನ ಸ್ವಭಾವವನ್ನು ಅರಿತಿದ್ದ ಸರಸ್ವತಿ ಬಾಯಿ ಏನೂ ಮಾಡಲಾಗದ ಪರಿಸ್ಥಿತಿಯಲ್ಲಿದ್ದರೂ ತನ್ನ ತಂದೆಯ ಮನೆಯವರು ಮಾಡಿಸಿಕೊಟ್ಟಿದ್ದ ಚಿನ್ನದ ಮೂಗುತಿಯನ್ನು ಆ ಬ್ರಾಹ್ಮಣನಿಗೆ ನೀಡುತ್ತಾಳೆ. ಸರಸ್ವತಿ ಬಾಯಿ ಕೊಟ್ಟ ಚಿನ್ನದ ಮೂಗುತಿಯನ್ನು ಶ್ರೀನಿವಾಸನಾಯಕರ ಅಂಗಡಿಗೇ ಬಂದು ಬ್ರಾಹ್ಮಣ ಇದನ್ನು ಇಟ್ಟುಕೊಂಡು ಏನಾದರೂ ಹಣದ ಸಹಾಯ ನೀಡಿ ಎಂದು ಬೇಡುತ್ತಾನೆ. ಆ ಚಿನ್ನದ ಮೂಗುತಿಯನ್ನು ನೋಡಿದ ನಾಯಕರಿಗೆ ಅದು ತನ್ನ ಮಡದಿಯದು ಎಂದು ಅನುಮಾನ ಬರುತ್ತದೆ. ಆ ಬ್ರಾಹ್ಮಣನಿಗೆ ಹಣವನ್ನು ನಾಳೆ ಕೊಡುವುದಾಗಿ ಬರ ಹೇಳಿ ಮೂಗುತಿಯನ್ನು ಅಂಗಡಿಯಲ್ಲಿಟ್ಟು ಮನೆಗೆ ಬರುತ್ತಾನೆ. ಮನೆಗೆ ಬಂದು ಮಡದಿಯನ್ನು ಮೂಗುತಿಯ ಬಗ್ಗೆ ವಿಚಾರಿಸಿದಾಗ ಮಡದಿ ಸ್ನಾನ ಮಾಡಲು ತೆಗೆದಿಟ್ಟಿರುವೆ, ತರುವೆನೆಂದು ಹೇಳಿ ಗಂಡನಿಗೆ ಸತ್ಯ ಹೇಳಲಾರದೆ ತಾನಿನ್ನು ಬದುಕಬಾರದೆಂದು ವಿಷವನ್ನು ಕುಡಿಯಲು ಯತ್ನಿಸಿದಾಗ ವಿಷದ ಬಟ್ಟಲಿನಲ್ಲಿ ಚಿನ್ನದ ಮೂಗುತಿ ಕಾಣಿಸಿಕೊಳ್ಳುತ್ತದೆ. ಅದನ್ನು ಗಂಡನಿಗೆ ತಂದು ಕೊಡುತ್ತಾಳೆ. ಶ್ರೀನಿವಾಸನಿಗೆ ಆಶ್ಚರ್ಯ! ಅಂಗಡಿಗೆ ಬಂದು ನೋಡಿದಾಗ ಅಲ್ಲಿ ಇಟ್ಟಿದ್ದ ಮೂಗುತಿ ಮಾಯವಾಗಿತ್ತು. ಈ ಒಂದು ಸಂದರ್ಭ ಅವನ ಬದುಕಿನಲ್ಲಿ ಬದಲಾವಣೆಯ ತಿರುವನ್ನು ಪಡೆಯಿತು. ಬ್ರಾಹ್ಮಣನಾಗಿ ಬಂದಿದ್ದು ಸಾಕ್ಷಾತ್ ಪರಮಾತ್ಮನೇ ಎಂದು ಭಾವಿಸಿ ಆ ಕ್ಷಣದಿಂದಲೇ ತನ್ನಲ್ಲಿದ್ದ ಅಪಾರವಾದ ಆಸ್ತಿಯನ್ನು ದಾನ ಮಾಡಿ ದಾಸನಾದನಂತೆ.

ಸಂಪೂರ್ಣ ವೈರಾಗ್ಯ: ಪುರಂದರದಾಸರ ಜೀವನ ಚರಿತ್ರೆಯನ್ನು ತಿಳಿಯುವಾಗ ಮತ್ತೊಂದು ದಂತಕಥೆ ತಿಳಿಯುತ್ತದೆ. ಸಕಲವನ್ನು ದಾನ ಮಾಡಿ ದಾಸನಾಗಿ ತನ್ನ ಹೆಂಡತಿಯೊಂದಿಗೆ ಪುರಂದರದಾಸ ಊರೂರು ಅಲೆಯುವಾಗ ಒಮ್ಮೆ ಒಂದೂರಿನ ಜನ ಈ ಮಾರ್ಗದಲ್ಲಿ ಸಂಚರಿಸಬೇಡಿ, ಇಲ್ಲಿ ಕಳ್ಳರು, ದರೋಡೆಕೋರರು ಹೆಚ್ಚಾಗಿ ಇದ್ದಾರೆಂದು ಎಚ್ಚರಿಸುತ್ತಾರೆ. ಊರಿನ ಜನರ ಮಾತನ್ನು ಕೇಳಿ ಪುರಂದರದಾಸ ನಕ್ಕು ದಾಸನಾದ ನನ್ನ ಹತ್ತಿರ ಅವರಿಗೆ ಏನೂ ದೊರಕಲಾರದು ಎಂದು ಉತ್ತರವನ್ನು ನೀಡಿ ಮುಂದೆ ಸಾಗುತ್ತಾನೆ. ಊರಿನ ಜನರ ಮಾತಿನಿಂದ ಭೀತಳಾದ ಸರಸ್ವತಿ ಬಾಯಿ ತಾನು ಸ್ವಲ್ಪ ಚಿನ್ನವನ್ನು ತಂದಿರುವುದಾಗಿ ತಿಳಿಸಿದಾಗ ಪುರಂದರದಾಸರು ಹಣ, ಆಭರಣ ಮನುಷ್ಯನಿಗೆ ಭಯವನ್ನು ನೀಡುತ್ತದೆ. ಇವುಗಳಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅವುಗಳನ್ನು ದಾನ ಮಾಡಿಸಿ ಮುಂದೆ ಸಾಗಿದರಂತೆ. ಹೀಗೆ ಜಿಪುಣರಾಗಿದ್ದ ಪುರಂದರದಾಸರು ಮುಂದೆ ವೈರಾಗ್ಯಮೂರ್ತಿಯಾಗಿ ಪರಿವರ್ತನೆ ಒಳಗಾದದ್ದು ದೊಡ್ಡ ಸಾಧನೆ ಸರಿ. ಉತ್ಪ್ರೇಕ್ಷೆ ಇರುವಂತೆ ಭಾಸವಾದರೂ ಪುರಂದರದಾಸರ ವೈರಾಗ್ಯ ಎಲ್ಲವನ್ನು ಮೀರಿದ್ದು ಎಂಬುದನ್ನು ತಿಳಿಸುವಂತಿದೆ.

ಪುರಂದರದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ವ್ಯವಸ್ಥೆಗಳ ಕಟ್ಟುಪಾಡುಗಳನ್ನು ಟೀಕಿಸಿ ಅವುಗಳನ್ನು ತಿದ್ದುವ ಜೊತೆಗೆ ಜನರ ಮನಸ್ಥಿತಿಯನ್ನು ಬದಲಿಸುವ ಕೆಲಸವನ್ನು ಮಾಡಿದ್ದಾರೆ.

ಅನುಗಾಲವು ಚಿಂತೆ ಜೀವಕೆ
ಮನವುಶ್ರೀರಂಗನೋಳ್ ಮೆಚ್ಚುವ ತನಕ
ಸತಿಯಿದ್ದರು ಚಿಂತೆ, ಸತಿಯಿಲ್ಲದ ಚಿಂತೆ
ಮತಿಹೀನ ಸತಿಯು ಆದರು ಚಿಂತೆ
ಪೃಥ್ವಿಯೊಳಗೆ ಸತಿ ಕಡು ಚೆಲ್ವೆಯಾದರೆ
ಮಿತಿ ಮೊದಲಿಲ್ಲದ ಮೋಹದ ಚಿಂತೆ
ಬಡವನಾದರು ಚಿಂತೆ, ಬಲ್ಲಿದನಾಗೆ ಚಿಂತೆ
ಹಿಡಿ ಹೊನ್ನು ಕೈಯೊಳು ಇದ್ದರು ಚಿಂತೆ
ಪೊಡವಿಯೊಳಗೆ ನಮ್ಮ ಪುರಂದರ ವಿಠ್ಠಲನ
ಬಿಡದೆ ಧ್ಯಾನಿಸು, ಚಿಂತೆ ನಿಶ್ಚಿಂತೆ

ಸದಾಕಾಲ ಒಂದಲ್ಲ ಒಂದು ಚಿಂತೆಯಿಂದ ಬಳಲುವ ಜನರು ಪುರಂದರ ವಿಠಲನನ್ನು ಕುರಿತು ಧ್ಯಾನ ಮಾಡಿದರೆ ಯಾವುದೇ ಚಿಂತೆ ಇರಲಾರದು ಎಂದು ತಿಳಿಸುವ ಈ ಕೀರ್ತನೆ ಚಿಂತೆ ಮನುಷ್ಯನನ್ನು ಕೊಲ್ಲುತ್ತದೆ. ಅದರಿಂದ ಹೊರಬರಬೇಕಾದರೆ ಪರಮಾತ್ಮನ ಸಾಂಗತ್ಯವೇ ಮುಖ್ಯ ಎಂಬುದನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತಿಳಿಸುವಂತಿದೆ. ಶ್ರೀಮಂತನಾದರೂ ಚಿಂತೆ, ಬಡವನಾದರೂ ಚಿಂತೆ, ಕೈಯ್ಯಲ್ಲಿ ಹಣವಿದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ, ಮೋಹದ ಚಿಂತೆ, ಮಡದಿಯ ಚಿಂತೆ, ಹೀಗೆ ಒಂದಲ್ಲ ಒಂದು ಚಿಂತೆಯಿಂದ ಬದುಕನ್ನು ವ್ಯರ್ಥ ಮಾಡಿಕೊಳ್ಳುವ ಬದಲು ಅದೇ ಸಮಯದಲ್ಲಿ ಪರಮಾತ್ಮನ ಧ್ಯಾನದಲ್ಲಿಟ್ಟರೆ ಚಿಂತೆಗಳೆಲ್ಲ ನಿಶ್ಚಿಂತೆಯಾಗಿ ದೂರಾಗುತ್ತದೆ ಎಂಬ ಭಕ್ತಿಯ ಕೀರ್ತನೆ ಇದಾಗಿದೆ.

ಆಚಾರವಿಲ್ಲದ ನಾಲಿಗೆ ನಿನ್ನ
ನೀಚ ಬಿಡು ನಾಲಿಗೆ
ವಿಚಾರವಿಲ್ಲದೆ ಪರರ ದೂಷಿಪುದಕ್ಕೆ
ಚಾಚಿ ಕೊಂಡಿರುವಂಥ ನಾಲಿಗೆ
ಇದ್ದಮಾತನಾಡು ನಾಲಿಗೆ ಹಿಡಿ
ದೊದ್ದರೂ ಹುಸಿಬೇಡ ನಾಲಿಗೆ
ಇದ್ದುಕೊಂಡು ಉಣ್ಣು ಅಮೃತಾನ್ನಗಳನು
ಬುದ್ಧಿಯಲಿರು ಕಂಡೆಯ ನಾಲಿಗೆ
ಬಡವರ ಮಾತಿಗೆ ನಾಲಿಗೆ – ನೀ
ಕಡುಚತುರ ನುಡಿಯದಿರು ನಾಲಿಗೆ
ಹಿಡಿದು ಕೊಂಡೊಯ್ವರು ಯಮನ ಭಟರು ನಿನ್ನ
ನುಡಿ ಕಂಡೆಯ ಹರಿಯಂದು ನಾಲಿಗೆ
ಹರಿಪಾದವೆ ಗತಿಯೆಂದು ನಾಲಿಗೆ – ನಿನಗೆ
ಪರರ ಚಿಂತೆಯೇಕೆ ನಾಲಿಗೆ
ಸಿರಿವರ ಪುರಂದರ ವಿಠ್ಠಲರಾಯನನು
ಮರೆಯದೆ ನೆನೆ ಕಂಡೆಯ ನಾಲಿಗೆ

ತನಗೆ ತಿಳಿಯದ ವಿಷಯಗಳ ಬಗ್ಗೆ ಮಾತನಾಡಿ ಅನವಶ್ಯಕವಾಗಿ ಇಲ್ಲಸಲ್ಲದ ಚರ್ಚೆಗಳನ್ನು ಮಾಡುವ ನಿನಗೆ ಸಂಬಂಧಪಡದ ವಿಚಾರಗಳ ಬಗ್ಗೆ ನಾಲಿಗೆ ಇದೆ ಎಂದು ನಿನ್ನ ನೀಚ ಬುದ್ಧಿಯನ್ನು ತೋರಿಸದೆ ನಿನ್ನ ಕೆಲಸವನ್ನು ನೀನು ಮಾಡು ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಪರರ ಚಿಂತೆ ಮಾಡುತ್ತಾ ಸಮಯವನ್ನು ವ್ಯರ್ಥವಾಗಿ ಕಳೆಯುವುದಕ್ಕೆ ಮೊದಲು ಹರಿನಾಮಸ್ಮರಣೆಯನ್ನು ಮಾಡಿ ಆ ಪುರಂದರದ ವಿಠಲನನ್ನು ಜಪಿಸು ಆಗ ನಿನಗೆ ಸ್ವಲ್ಪವಾದರೂ ಮೋಕ್ಷ ಸಿಗುತ್ತದೆ ಎಂಬ ಸೂಚನೆಯನ್ನು ನೀಡಿದ್ದಾರೆ. ನಮ್ಮ ಜೀವನವನ್ನು ನಾವು ನೋಡಿಕೊಳ್ಳುವ ಜೊತೆಗೆ ಆ ಭಗವಂತನ ಸ್ಮರಣೆಯಲ್ಲಿ ತೊಡಗಿಕೊಂಡರೆ ಸಾಕ್ಷಾತ್ಕಾರವೂ ಸಾಧ್ಯ ಎಂಬ ಭಾವನೆ ಈ ಕೀರ್ತನೆಯೊಳಗೆ ಅಡಗಿದೆ ಎನ್ನಬಹುದು. ನಾಲಿಗೆ ಇರುವುದು ಪರರ ನಿಂದನೆಗಲ್ಲ ಅದು ಇರುವುದು ಹರಿನಾಮ ಸ್ಮರಣೆಗೆ ಎನ್ನುವ ಮೂಲಕ ದೈವದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದು ಒಳಿತು ಎಂಬ ಸಂದೇಶ ಈ ಕೀರ್ತನೆಯಲ್ಲಿದೆ.

ಮಲವ ತೊಳೆಯಬಲ್ಲರಲ್ಲದೆ
ಮನವ ತೊಳೆಯಬಲ್ಲರೆ
ಹಲವು ತೀರ್ಥಂಗಳಲಿ
ಮುಳುಗಿ ಹಲುಬಿದರೆ ಫಲವೇನು
ಭೋಗ ವಿಷಯ ಫಲವನುಂಡು
ರಾಗ ಲೋಭದಿಂದ ಮತ್ತನಾಗಿ
ಮೆರೆಯುತಿರೆ ಅವನ ಭಾಗ್ಯವಂತನೆಂಬರೆ
ಯೋಗಿಯಂತೆ ಜನರು ಮೆಚ್ಚುವಂತೆ ಹೋಗಿ ನೀರಿನಲ್ಲಿ
ಕಾಗೆಯಂತೆ ಮುಳುಗೆ ಮಾಘಸ್ನಾನ ಫಲವು ಬಾಹೋದೆ
ಪರರ ಕೇಡು ಬಯಸಿ ಗುರುಹಿರಿಯರನ್ನು ನಿಂದಿಸುತ್ತ
ಪರಮಸೌಖ್ಯವೆಂದು ಪರಸ್ತ್ರೀಯರನ್ನು ಬಯಸುತ್ತ
ಪರಮನಿಷ್ಠ ಮೌನಿಯಂತೆ ಧರೆಯ ಮೇಲೆ ಡಂಭ ತೋರಿ
ಹರಿವ ನೀರಿನ ತೀರದಿ ಕುಳಿತರೇನು ಬಕ ಧ್ಯಾನದಿ
ಕಾಸುವೀಸಕ್ಕಾಗಿ ಹರಿಯದಾಸನೆಂದು ತಿರುಗಿ ತಿರುಗಿ
ದೇಶದೇಶಗಳಲಿ ತೊಳಲಿ ಕಾಶಿಯಾತ್ರೆ ಪೋಗಲು
ಆಶಾಪಾಶ ಬಿಡದೆ ಮನಸು ಹೇಸಿ ವಿಷಯ ಬಯಸುವಂಥ
ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ
ತಂದೆತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ
ಮಂದಗಮನೆರೊಡನೆ ಆನಂದದಿಂದಲಿರುವನು
ತಂದೆ ಸತ್ತಮೇಲೆ ನೂರುಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದಮತಿಯ ಜನಗಳು
ಏನು ಓದಲೇನು ಫಲ ಏನು ಕೇಳಲೇನು ಫಲ
ಜ್ಞಾನದಿಂದ ಅಚ್ಯುತನ ಧ್ಯಾನವಿಲ್ಲದವರಿಗೆ
ಮೌನ ನೇಮ ನಿಷ್ಠೆ ಯಾಕೆ ಹೀನಚಿತ್ತನಾದ ಮೇಲೆ
ಶ್ರೀನಿವಾಸ ಪುರಂದರವಿಠಲನು ಮೆಚ್ಚುವನೆ ಮರುಳೆ

ಡಾಂಬಿಕ ಭಕ್ತರನ್ನು ಕುರಿತು ಬಿಡಂಬನೆ ಮಾಡುವ ಕೀರ್ತನೆ ಇದಾಗಿದೆ. ಮಲವನ್ನು ತೊಳೆದಷ್ಟು ಸುಲಭವಾಗಿ ಮನಸ್ಸನ್ನು ತೊಳೆಯುವುದಕ್ಕೆ ಬರುತ್ತದೆಯೇ ಎಂಬಂತಹ ಮಾತಿನ ಚಾಟಿಯಲ್ಲಿ ನಿಷ್ಕಲ್ಮಶ ಮನಸ್ಸಿನ ಅಗತ್ಯ ಇದೆ ಎಂಬಂತಹ ಧೋರಣೆ ಇದೆ. ಮನಸ್ಸಿನಲ್ಲಿರುವ ಕಲ್ಮಶವನ್ನು ತೊಳೆದರೆ ಅದೇ ನಿಜವಾದ ದೈವಿಕ ರೂಪ. ಮನಸು ಶುದ್ಧವಿಲ್ಲದೆ ಯಾವುದೇ ಕಟ್ಟುಪಾಡಿನಲ್ಲಿ ಪೂಜಿಸಿದರೆ ಅದು ವ್ಯರ್ಥವೆ ಆಗಿರುತ್ತದೆ. ಮನಸ್ಸಿನಲ್ಲಿ ಇಲ್ಲಸಲ್ಲದ ವಿಚಾರಗಳನ್ನು ತುಂಬಿಕೊಂಡು ಯಾವುದೇ ರೀತಿಯ ತೀರ್ಥಕ್ಷೇತ್ರಗಳನ್ನು ಮಾಡಿದರೂ ಅದರಿಂದ ಯಾವುದೇ ಫಲ ಸಿಗಲಾರದು.

ಪುರಂದರದಾಸರ ಈ ಕೀರ್ತನೆ ಆಡಂಬರದ ಭಕ್ತಿಯನ್ನು ಮತ್ತೊಬ್ಬರನ್ನು ಮೆಚ್ಚಿಸಲು ಮಾಡುವ ಭಕ್ತಿಯ ಆರಾಧನೆಯನ್ನು, ಹೆತ್ತವರನ್ನು ಇದ್ದಾಗ ನೋಡಿಕೊಳ್ಳದೆ ಅವರು ಸತ್ತಾಗ ನೂರಾರು ಜನರನ್ನು ಕರೆದು ಎಡೆಯಿಟ್ಟು ತಮ್ಮ ತಂದೆ ತಾಯಿ ತೃಪ್ತರಾದರು ಎಂದು ಭಾವಿಸುವ ಕಪಟಿಗಳಿಗೆ ಚಾಟಿ ಬೀಸಿದಂತಿದೆ. ತಂದೆ ತಾಯಿ ಇದ್ದಾಗ ಅವರನ್ನು ನೋಡಿಕೊಳ್ಳದೆ ಸತ್ತಾಗ ಅವರ ಹೆಸರಿನಲ್ಲಿ ಮಾಡುವ ಕಾರ್ಯದಿಂದ ಏನು ಪ್ರಯೋಜನ ಎಂದು ಟೀಕಿಸುತ್ತಾರೆ. ನಿಜವಾದ ಭಕ್ತಿಗೆ ಯಾವುದೇ ಆಡಂಬರ ತೋರ್ಪಡಿಕೆ ಬೇಕಾಗಿರುವುದಿಲ್ಲ. ನಿಷ್ಕಲ್ಮಶ ಭಕ್ತಿ ಮಾತ್ರ ಆ ಭಗವಂತನನ್ನು ಸೇರಲು ಇರುವ ಮಾರ್ಗವೆಂದು ಈ ಕೀರ್ತನೆಯ ಮೂಲಕ ಪುರಂದರದಾಸರು ಸಾರಿದ್ದಾರೆ.

ಜಾಲಿಯ ಮರದಂತೆ ಧರೆಯೊಳು ದುರ್ಜನರು
ಮೂಲಾಗ್ರ ಪರಿಯಂತೆ ಮುಳ್ಳು ಕೂಡಿಪ್ಪಂತೆ
ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ
ಊರ ಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ
ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ

ಜಾಲಿಯ ಮರ ಯಾವುದೇ ರೀತಿಯ ಉಪಯೋಗಕ್ಕೆ ಬಾರದೆ ವ್ಯರ್ಥವಾಗಿರುತ್ತದೆ. ಅದೇ ರೀತಿ ದುರ್ಜನರಿಂದ ಸಮಾಜಕ್ಕೆ ಯಾವುದೇ ಉಪಯೋಗ ಇಲ್ಲ. ವ್ಯರ್ಥವಾಗಿರುವ ಜಾಲಿ ಮರವನ್ನು ದುರ್ಜನರಿಗೆ ಹೋಲಿಸಿ ಹೇಳಿರುವುದು ಸಮಯೋಚಿತವಾಗಿದೆ.

ಜಾಲಿಯ ಮರ ಅಡಿಯಿಂದ ಮುಡಿಯವರಿಗೆ ಮುಳ್ಳಿನಿಂದ ಕೂಡಿರುತ್ತದೆ. ಬಿಸಿಲಿನಲ್ಲಿ ಬಂದವರಿಗೆ ಯಾವುದೇ ರೀತಿಯ ನೆರಳನ್ನು ನೀಡುವುದಿಲ್ಲ, ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಮರ ಎಂದರೆ ನೆರಳನ್ನು ನೀಡಬೇಕು, ಹಸಿದವರಿಗೆ ದಾಹವನ್ನು ತಣಿಸುವ ರೀತಿಯಲ್ಲಿ ಹಣ್ಣನ್ನು ನೀಡಬೇಕು ಹೀಗೆ ಒಂದಲ್ಲ ಒಂದು ಕಾರಣದಿಂದ ಉಪಯೋಗಕ್ಕೆ ಬರಬೇಕು. ಆದರೆ ಜಾಲಿಯ ಮರ ಇದ್ಯಾವುದನ್ನು ಮಾಡುವುದಿಲ್ಲ. ಇದೇ ರೀತಿ ಈ ದುರ್ಜನರಿಂದ ಸಮಾಜಕ್ಕೆ ಯಾವುದೇ ರೀತಿಯ ಉಪಯೋಗವೂ ಇಲ್ಲ ಎಂಬುದನ್ನು ಪುರಂದರದಾಸರು ಹೇಳಿದ್ದಾರೆ. ಊರ ಹಂದಿಗೆ ಬಗೆ ಬಗೆಯ ಆಹಾರವನ್ನು ನೀಡಿದರೂ ಕೂಡ ಅದರ ಮೈಯಿಂದ ಬರುವ ವಾಸನೆ ತಪ್ಪುವುದಿಲ್ಲ. ಹಾಗೆಯೇ ಈ ದುರ್ಜನರಿಗೆ ಎಷ್ಟೇ ಬುದ್ಧಿವಾದವನ್ನು ಹೇಳಿದರೂ ಅದರಿಂದ ಯಾವುದೇ ಪ್ರಯೋಜನವಿಲ್ಲ. ದುರ್ಜನರಿಂದ ಸಮಾಜಕ್ಕೆ ಯಾವುದೇ ಉಪಯೋಗವಿಲ್ಲದಿದ್ದರೂ ಇವರಾಡುವ ಮಾತುಗಳಿಗೆ ಏನು ಕಡಿಮೆ ಇಲ್ಲ. ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ ಇವರ ಕಾರ್ಯವು ಇರುತ್ತದೆ ಎನ್ನುವ ಮೂಲಕ ಸಮಾಜದಲ್ಲಿ ದುರ್ಜನದಿಂದ ಯಾವುದೇ ರೀತಿಯ ಉಪಯೋಗವಿಲ್ಲ ಎಂಬುದನ್ನು ಮನಮುಟ್ಟುವಂತೆ ಜಾಲಿಯ ಮರಕ್ಕೆ ಹೋಲಿಕೆ ಮಾಡಿ ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಪುರಂದರದಾಸರ ಕೀರ್ತನೆಗಳಲ್ಲಿ ಭಕ್ತಿಯ ತೀವ್ರತೆ,ಭಗವಂತನನ್ನು ಮಾತೃಪ್ರೇಮಿಯಾಗಿ ಕಾಣುವುದು ಕಂಡುಬರುತ್ತದೆ. ಇವರ ಹಲವಾರು ಕೀರ್ತನೆಗಳಲ್ಲಿ ಸಮಾಜವನ್ನು ಟೀಕಿಸುವ ಮೂಲಕ ಸಮಾಜವನ್ನು ಬದಲಿಸುವಂತಹ ತತ್ವಗಳು ಕಂಡು ಬರುತ್ತದೆ. ತಮ್ಮ ವಿಶಿಷ್ಟ ಬಗೆಯ ರಚನೆಯಿಂದ ಅಂದಿಗೂ ಇಂದಿಗೂ ಎಂದೆಂದಿಗೂ ಅಜರಾಮರವಾಗಿ ನಿಲ್ಲುವ ಅಪರೂಪದ ದಾಸ ಸಾಹಿತ್ಯದ ಅಮೂಲ್ಯ ರತ್ನ ಪುರಂದರದಾಸರು ಎಂದರೆ ಅದು ಅತಿಶಯ ವಾಗಲಾರದು. ಈ ಮೇಲೆ ಪ್ರಸ್ತಾಪಿಸಿದ ಎಲ್ಲಾ ಸಂಗತಿಗಳಿಂದ ಒಬ್ಬ ವ್ಯಕ್ತಿ ಮನಸ್ಸನ್ನು ನಿಗ್ರಹ ಮಾಡಿಕೊಂಡು ಸಾಧನೆಗೆ ಒಗ್ಗೂಡಿಸಿಕೊಂಡರೆ ಅದ್ಭುತ ಕಾರ್ಯಗಳು ಘಟಿಸುತ್ತವೆ.

ಬಿಜೆಪಿ ಅಭ್ಯರ್ಥಿ ಘೋಷಣೆಯಾಗಿದ್ದರೂ ಪಕ್ಷ ಅಂತಿಮವಾಗಿ ತೀರ್ಮಾನ ಕೈಗೊಳ್ಳಲಿದೆ

ಮಾಜಿ ಎಂಎಲ್‌ಸಿ ಅರುಣ್ ಶಾಪುರ ಸ್ಪಷ್ಟನೆ

ಮೈಸೂರು, ಮೇ15(ಬಿಎಲ್‌ಯು)– ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿ ಘೋಷಣೆಯಾಗಿದ್ದರೂ ಪಕ್ಷ ತೆಗೆದುಕೊಳ್ಳುವ ಅಂತಿಮ ನಿರ್ಧಾರದ ಮೇಲೆ ಎಲ್ಲವೂ ಅವಲಂಬಿತವಾಗುತ್ತದೆ ಎಂದು ಮಾಜಿ ವಿಧಾನಪರಿಷತ್ ಸದಸ್ಯ ಅರುಣ್ ಶಾಪುರ ಸ್ಪಷ್ಟಪಡಿಸಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಭ್ಯರ್ಥಿಯಾಗಿ ಡಾ.ಈ.ಸಿ.ನಿಂಗರಾಜ್ ಗೌಡ ನಾಮಪತ್ರ ಸಲ್ಲಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಮೈತ್ರಿ ಅಭ್ಯರ್ಥಿ ಆಯ್ಕೆ ಸಂಬಂಧ ಯಾವುದೇ ಗೊಂದಲವಿಲ್ಲ. ಯಾರೇ ಅಭ್ಯರ್ಥಿಯಾದರೂ ನಮ್ಮ ಬೆಂಬಲವಿದೆ. ಈ ಸಂಬಂಧ ಪಕ್ಷದ ವರಿಷ್ಠರು ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ ಧಿಕ್ಕರಿಸಿದೆ. ಪಠ್ಯ ಪುಸ್ತಕದಲ್ಲಿ ಬದಲಾವಣೆ ಮಾಡುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಅರಾಜಕತೆ ಸೃಷ್ಟಿಸಿದೆ. ಕೇವಲ ಒಂದು ವರ್ಷದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗೊಂದಲ ಮೂಡಿಸಿದೆ ಎಂದು ಅವರು ಆರೋಪಿಸಿದರು.

ಎನ್‌ಇಪಿ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಸುಳ್ಳು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಸಂವೇದನಾಶೀಲತೆ ಕಳೆದುಕೊಂಡಿದೆ. ತಮ್ಮ ಖಾತೆ ನಿರ್ವಹಿಸಲು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಸಮರ್ಥರಾಗಿದ್ದಾರೆ. ಈ ಹಿನ್ನೆಲೆ ಮಧು ಬಂಗಾರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಅರುಣ್ ಶಾಪುರ ಆಗ್ರಹಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಧ್ಯಮ ಸಂಯೋಜಕರಾದ ಮಹೇಶ್ ಅರಸ್, ಕೇಬಲ್ ಮಹೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ವಿಧಾನಪರಿಷತ್ ಸದಸ್ಯ ಅರುಣ್ ಶಾಪುರ ಮಾತನಾಡಿದರು.

ಇಂದು ರಾಷ್ಟ್ರೀಯ ಡೆಂಗ್ಯೂ ದಿನ

ಮೈಸೂರು, ಮೇ 15–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ವತಿಯಿಂದ ನಾಳೆ (ಮೇ 16) ಬೆಳಗ್ಗೆ 10 ಗಂಟೆಗೆ ಮೈಸೂರು ತಾಲೂಕಿನ ನಾಚನಹಳ್ಳಿಪಾಳ್ಯದ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನ ಆಚರಣೆ ಪ್ರಯುಕ್ತ ಸಭೆ ಮತ್ತು ಜಾಗೃತಿ ಕಾರ್ಯಕ್ರಮವನ್ನು ಸಾರ್ವಜನಿಕರು, ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರಿಗೆ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬಹುದು ಎಂದು ಜಿಲ್ಲೆಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೊಮ್ಮಗ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಿಂದ ವ್ಯಾಕುಲಗೊಂಡ ಗೌಡರು

ಗಡ್ಡ ಬಿಟ್ಟಿರುವುದ ಕಂಡು ಮರುಗಿದ ಅಭಿಮಾನಿಗಳು!



ಮೈಸೂರು, ಮೇ15(ಬಿಎಲ್‌ಯು)– ಮೊಮ್ಮಗ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ವ್ಯಾಕುಲಗೊಂಡ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮೊದಲ ಬಾರಿಗೆ ಗಡ್ಡ ಬಿಟ್ಟಿದ್ದಾರೆ.

ದೇವೇಗೌಡರು ಪ್ರತಿ ದಿನ ಮುಂಜಾನೆಯೇ ನೀಟ್ ಶೇವ್, ಸ್ನಾನ–ಸನ್ಯಾಧ್ಧಿಗಳ ರೂಢಿಸಿಕೊಂಡಿದ್ದಾರೆ. ಅನಾರೋಗ್ಯದ ಸಂದರ್ಭದಲ್ಲೂ ದೇವೇಗೌಡರು ನೀಟ್ ಶೇವ್ ಮಾಡಿಕೊಳ್ಳುವುದು ಅವರ ಪ್ರತಿದಿನದ ದಿನಚರಿಗಳಲ್ಲಿ ಒಂದಾಗಿತ್ತು. ದೆಹಲಿ ಸೇರಿದಂತೆ ಎಲ್ಲೆ ಪ್ರವಾಸಕ್ಕೆ ಹೋದರೂ ತಮ್ಮ ದೈನಂದಿನ ಈ ಪರಿಪಾಠವನ್ನು ದೇವೇಗೌಡರು ಪಾಲಿಸುತ್ತಾ ಬಂದಿದ್ದಾರೆ.

ಚುನಾವಣೆಯಲ್ಲಿ ಹಲವು ಬಾರಿ ಸೋತಾಗಲೂ, ತಾವು ಪ್ರಧಾನಿ ಹುದ್ದೆ ಕಳೆದುಕೊಂಡ ಸಂದರ್ಭದಲ್ಲೂ ದೇವೇಗೌಡರು ಇಷ್ಟರಮಟ್ಟಿಗೆ ಕಂಗಾಲಾಗಿರಲಿಲ್ಲ. ಕ್ರೀಡಾ ಮನೋಭಾವದಿಂದ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕಾರ ಮಾಡುವ ದೇವೇಗೌಡರು ಸೋಲು ಗೆಲುವಿನ ಮೆಟ್ಟಿಲು ಎಂದು ಹೋರಾಟ ಮಾಡುತ್ತಾ ಬಂದಿದ್ದರು.

ಆದರೆ ಮೊಮ್ಮಗ ಪ್ರಜ್ವಲ್ ರೇವಣ್ಣನ ಪೆನ್‌ಡ್ರೈವ್ ಪ್ರಕರಣದಿಂದ ದೇವೇಗೌಡರಿಗೆ ಭಾರಿ ಆಘಾತವಾಗಿದೆ. ಇದೇ ಪ್ರಕರಣದಲ್ಲಿ ಮಗ ಹೆಚ್.ಡಿ.ರೇವಣ್ಣ ಕೂಡ ಜೈಲು ಸೇರಿದ್ದರು.

ಈ ಎಲ್ಲಾ ಬೆಳವಣಿಗೆಗಳಿಂದ ದೇವೇಗೌಡರು ಕಂಗೆಟ್ಟಿದ್ದಾರೆ. ನೋವಿನಲ್ಲಿರುವ ದೇವೇಗೌಡರು ಇದೇ ಮೊದಲ ಬಾರಿಗೆ ಗಡ್ಡ ಬಿಟ್ಟಿದ್ದಾರೆ. ದೇವೇಗೌಡರನ್ನು ಈ ರೀತಿಯಾಗಿ ನೋಡುತ್ತಿರುವ ಅವರ ಅಭಿಮಾನಿಗಳಿಗೆ ಅತೀವ ನೋವಾಗಿದೆ.

ಬರ, ಗಾಳಿ–ಮಳೆಯಿಂದ ಹಾನಿಗೀಡಾದ ಬೆಳೆಗೆ ಪರಿಹಾರ ಕಲ್ಪಿಸಲು ರೈತ ಸಂಘ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 15(ಎಂಟಿವೈ)– ಭೀಕರ ಬರಗಾಲ ಹಾಗೂ ಬಿರುಗಾಳಿ ಸಹಿತ ಆಲಿ ಕಲ್ಲು ಮಳೆಗೆ ಭಾರಿ ಪ್ರಮಾಣದ ಫಸಲು ಹಾನಿಯಾಗಿದ್ದು, ಸರ್ಕಾರ ಬೆಳೆ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂಡರಿಯದ ಬರದಿಂದ ತತ್ತರಿಸಿದ್ದ ರೈತರಿಗೆ ಕಳೆದ ವಾರ ಸುರಿದ ಆಲಿ ಕಲ್ಲು ಮಳೆ ಹಾಗೂ ಭಾರಿ ಗಾಳಿಯಿಂದಾಗಿ ಅಪಾರವಾದ ಫಸಲು ನಾಶವಾಗಿದೆ. ಬಾಳೆ ಮತ್ತು ಇತರೆ ತೋಟಗಾರಿಕೆ ಬೆಳೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ. ಹೀಗಾಗಿ ಸರ್ಕಾರ ಕೂಡಲೇ ನಷ್ಟದ ಅಂದಾಜು ಸಿದ್ಧಪಡಿಸಿ ಪರಿಹಾರ ನೀಡಬೇಕು. ಇದೇ ವೇಳೆ ರಾಜ್ಯದ ರೈತರು ಸ್ವಂತ ಬಂಡವಾಳ ಹಾಗೂ ಶ್ರಮ ಹಾಕಿ ಕೃಷಿ ಪಂಪ್‌ಸೆಟ್‌ಗಳ ಮೂಲಕ ನೀರಾವರಿ ಒದಗಿಸಿಕೊಂಡು ಹಣ್ಣು ಹಂಪಲು, ತರಕಾರಿ ಮತ್ತು ತೋಟಗಾರಿಕೆ ಬೆಳೆ ಬೆಳೆಯುತ್ತಿದ್ದಾರೆ. ಆದರೆ ಅಕ್ರಮ ಸಕ್ರಮ ಹಾಗೂ ಹೊಸ ಸಂಪರ್ಕಕ್ಕೆ ರಾಜ್ಯ ಸರ್ಕಾರ ಈ ಸಾಲಿನಲ್ಲಿ ಹೆಚ್ಚಿಸಿರುವ ದುಬಾರಿ ಶುಲ್ಕದಿಂದಾಗಿ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ. ಹೊಸ ಸಂಪರ್ಕಕ್ಕೆ 2.50 ಲಕ್ಷದಿಂದ ಮೂರು ಲಕ್ಷ ರೂ. ವೆಚ್ಚ ತಗಲುತ್ತಿದ್ದು, ಹೊಸ ದರವನ್ನು ಹಿಂಪಡೆದು ಹಳೆ ದರವನ್ನೇ ಮುಂದುವರೆಸಬೇಕು ಎಂದು ಆಗ್ರಹಿಸಿದರು.

ಮಲೆನಾಡಿನ ಕಾಫಿ ಬೆಳೆಗಾರರ ಕೃಷಿ ಪಂಪ್‌ಸೆಟ್ ಶುಲ್ಕವನ್ನು ರೈತರೇ ಪಾವತಿಸಿದ್ದರೆ, ನಂತರ ಸರ್ಕಾರ ಅದನ್ನು ವಾಪಸ್ ಕೊಡುವುದಾಗಿ ಕೈಗೊಂಡಿರುವ ತೀರ್ಮಾನ ಹಿಂಪಡೆಯಬೇಕು. 10 ಹೆಚ್‌ಪಿ ಕೃಷಿ ಪಂಪ್‌ಸೆಟ್‌ಗಳಿಗೆ ಬೇರೆಲ್ಲ ರೈತರಿಗೆ ಅನುಸರಿಸುತ್ತಿರುವ ನೀತಿಯನ್ನೇ ಕಾಫಿ ಬೆಳೆಗಾರರಿಗೂ ಅನ್ವಯವಾಗುವಂತೆ ತೀರ್ಮಾನ ಕೈಗೊಳ್ಳಬೇಕು. ಕಬ್ಬು ಬೆಳೆಗಾರರಿಗೆ ನೀಡಬೇಕಾದ ಬಾಕಿ ಪಾವತಿಸಿ, ಎಸ್‌ಎಪಿ ಘೋಷಿಸಬೇಕು, ಕೊಬ್ಬರಿ ಖರೀದಿಯಲ್ಲಿ ಕಿರುಕುಳ ತಪ್ಪಿಸಬೇಕು. ಬರ ಪರಿಹಾರದ ಬಗ್ಗೆ ಸರ್ಕಾರ ವಿಶೇಷ ಪ್ಯಾಕೇಜ್ ನೀಡಬೇಕು. ಕೆರೆಗಳಿಗೆ ನೀರು ತುಂಬಿಸಬೇಕು. ಹೀಗೆ ಹಲವು ಬೇಡಿಕೆ ಮಂಡಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಗೋಪಾಲ್ ಪಾಪೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ಪ್ರತಾಪ್‌ಕುಮಾರ್ ಇದ್ದರು.

ಮೇ 23ರಂದು ಬಿಎಸ್‌ಎಸ್ ವಿದ್ಯೋದಯ ಶಾಲೆ ಉದ್ಘಾಟನೆ

ಮೈಸೂರು,ಮೇ 15(ಪಿಎಂ)– ವೈಕೆ ಅಮೃತಾ ಬಾಯಿ ಎಸ್‌ಕೆ ಸುರವು ಬಾಯಿ ಭಗಿನಿ ಸೇವಾ ಸಮಾಜ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಮತ್ತು ಶ್ರೀ ವಿಜಯವಿಠ್ಠಲ ವಿದ್ಯಾ ಪ್ರತಿಷ್ಠಾನ ವತಿಯಿಂದ ಮೇ 23ರಂದು ಬಿಎಸ್‌ಎಸ್ ವಿದ್ಯೋದಯ ಶಾಲೆಯ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ಮೈಸೂರಿನ ಕೃಷ್ಣಮೂರ್ತಿಪುರಂನ ರಾಘವೇಂದ್ರಸ್ವಾಮಿ ಮಠದ ಸಮೀಪ ನಿರ್ಮಿಸಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯ ಉದ್ಘಾಟನೆಯನ್ನು ಅಂದು ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ. ಉಡುಪಿಯ ಶ್ರೀ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಸಾನಿಧ್ಯ ವಹಿಸಲಿದ್ದಾರೆ. ಅಂದು ಸಂಜೆ 5ರಿಂದ 6ರವರೆಗೆ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿನ ಇಟ್ಟಿಗೆಗೂಡಿನಲ್ಲಿ ಇಲ್ಲಿನ ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ ವತಿಯಿಂದ ಆಯೋಜಿಸಿರುವ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವಕ್ಕೆ ಬುಧವಾರ ಚಾಲನೆ ದೊರೆಯಿತು. ಮೇ 18ರಂದು ಕರಗ ಮಹೋತ್ಸವದ ಮುಖ್ಯ ಮೆರವಣಿಗೆ ನಡೆಯಲಿದೆ.

ಮೈಸೂರಲ್ಲಿ ವೀರ ಸಾವರ್ಕರ್ ಅವರ 141ನೇ ಜಯಂತಿ



ಮೈಸೂರು, ಮೇ 15–ಮೈಸೂರಿನ ಸಾವರ್ಕರ್ ಪ್ರತಿಷ್ಠಾನ, ವೀರ ಸಾವರ್ಕರ್ 141ನೇ ಜಯಂತಿ ಪ್ರಯುಕ್ತ ಸನ್ಮಾನ, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೇ 28ರಂದು ಕಲಾಮಂದಿರದಲ್ಲಿ ಆಯೋಜಿಸಿದೆ. ಅಂದು ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ಸಮಾರಂಭದ ಪ್ರಯುಕ್ತ ಛದ್ಮವೇಷ, ಚಿತ್ರಕಲಾ ಸ್ಪರ್ಧೆ, ವಿಡಿಯೋ ಚಿತ್ರೀಕರಣ ಹಾಗೂ ರಂಗೋಲಿ ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ ಪ್ರಥಮ ಬಹುಮಾನ (ರೂ 5,000), ದ್ವಿತೀಯ ಬಹುಮಾನ (ರೂ 3,000), ತೃತೀಯ ಬಹುಮಾನ (ರೂ 1,000) ಜೊತೆಗೆ ಪ್ರಮಾಣ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ 959141 1335, 8663021946, 8105915449 ಸಂಪರ್ಕಿಸಬಹುದು.

ಮಣಿಪಾಲ್ ಆಸ್ಪತ್ರೆಯಲ್ಲಿ 92 ವರ್ಷದ ಹಿರಿಯ ನಾಗರಿಕರಿಗೆ ಹೋಲೆಪ್ ಚಿಕಿತ್ಸೆ

ಮೈಸೂರು, ಮೇ 15(ಜಿಎ)–ಮೂತ್ರ ವಿಸರ್ಜನೆ ಸಮಸ್ಯೆಯಿಂದ ಬಳಲುತ್ತಿದ್ದ 92 ವರ್ಷದ ನಿವೃತ್ತ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಾಸ್ಟೇಟ್ ಹೋಲ್ಮಿಯಮ್ ಲೇಸರ್ ಎನ್ಯುಕ್ಲಿಯೇಶನ್(ಹೋಲೆಪ್) ಎಂಬ ವಿಧಾನದ ಮೂಲಕ ಮೂತ್ರಧಾರಣ ಸಮಸ್ಯೆ ಪರಿಹರಿಸಲಾಯಿತು ಎಂದು ಆಸ್ಪತ್ರೆಯ ತಜ್ಞ ವೈದ್ಯ ಡಾ.ದಿನೇಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 92 ವರ್ಷ ವಯಸ್ಸಿನ ಹಿರಿಯ ಪುರುಷ ನಾಗರಿಕರೊಬ್ಬರು ಪ್ರಾಸ್ಟೇಟ್ ಗ್ರಂಥಿ ದೊಡ್ಡದಾಗಿ ಬೆಳೆದಿದ್ದ ಕಾರಣ ಮೂತ್ರ ಹಿಡಿದಿಟ್ಟುಕೊಳ್ಳುವ ಹಾಗೂ ಮೂತ್ರ ವಿಸರ್ಜನೆ ಕ್ಲಿಷ್ಟಕರವಾಗುವ ಸಮಸ್ಯೆ ಎದುರಿಸುತ್ತಿದ್ದರು. ಇವರಿಗೆ ಛೇದನ ಮಾಡದೇ ಅತ್ಯಾಧುನಿಕ ಹೋಲೆಪ್ ಕಾರ್ಯ ವಿಧಾನದ ಮೂಲಕ ಶಸ್ತ್ರಚಿಕಿತ್ಸೆ ನೆರವೇರಿಸಿ ಗುಣಪಡಿಸಲಾಗಿದೆ ಎಂದರು.

ರೋಗಿಯು ಎರಡು ತಿಂಗಳಿನಿಂದಲೂ ಈ ಸಮಸ್ಯೆ ಎದುರಿಸುತ್ತಿದ್ದರು. ತಮ್ಮ ಆಸ್ಪತ್ರೆ ಸಂಪರ್ಕಕ್ಕೆ ಬಂದಾಗ ಅವರಿಗೆ ಹಿರಿಯ ವಯಸ್ಸಿನವರಾದರೂ ಲೇಸರ್ ಪ್ರಾಸ್ಟೆಟೆಕ್ಟಮಿ ವಿಧಾನದ ಮೂಲಕ ಪ್ರಾಸ್ಟೇಟ್ ಗ್ರಂಥಿಯಲ್ಲಿದ್ದ ಅನಗತ್ಯ ಅಂಶಗಳನ್ನು ತೆಗೆದುಹಾಕಲಾಗಿದೆ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ಹೊಟ್ಟೆ ಬಳಿ ಛೇದನ ಮಾಡುವುದು ಅನಿವಾರ್ಯವಾಗುತ್ತದೆ. ಆದರೆ ಈ ನೂತನ ವಿಧಾನದಲ್ಲಿ ಆ ರೀತಿ ಮಾಡದೇ ಕೇವಲ ಪ್ರಾಸ್ಟೇಟ್ ಹೋಲ್ಮಿಯಂ ಲೇಸರ್ ವಿಧಾನದ ಮೂಲಕ ಶಸ್ತ್ರಚಿಕಿತ್ಸೆ ನಡೆಸಿದ್ದು, ಈಗ ಇವರು ಗುಣಮುಖರಾಗಿದ್ದು, ಎಲ್ಲರಂತೆ ಸಹಜ ಜೀವನ ನಡೆಸುತ್ತಿದ್ದಾರೆ. ಇದು ಕನಿಷ್ಠ ಅಪಾಯಕಾರಿ ವಿಧಾನವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ ಮುಖ್ಯಸ್ಥರಾದ ಡಾ.ಉಪೇಂದ್ರ ಶೆಣೈ ಉಪಸ್ಥಿತರಿದ್ದರು.

ನಾಳೆ ನಾದ ನೃತ್ಯ ಸಮರ್ಪಣೆ ಭರತನಾಟ್ಯ



ಅರ್ಪಿತ | ಭುವನೇಶ್ವರಿ | ಯಶಸ್ವಿನಿ | ಚಿತ್ರಶ್ರೀ



ಖುಷಿ | ಸಾಯಿ ಪ್ರಾರ್ಥನ | ರಕ್ಷಿತ | ಶರ್ವರಿ




ಸುನೀತಾ


ಮೈಸೂರು, ಮೇ 15– ನಾದ ವಿದ್ಯಾಲಯ ಮತ್ತು ಹೆಬ್ಬಾಳಿನ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡಾನ್ಸ್ ವತಿಯಿಂದ ಮೇ 17ರ ಸಂಜೆ 5.30ಕ್ಕೆ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ 'ನಾದ ನೃತ್ಯ ಸಮರ್ಪಣಂ' ಭರತನಾಟ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ವಿದುಷಿ ನಿರ್ದೇಶಕರು, ಶ್ರೀ ದುರ್ಗಾ ನೃತ್ಯ ಅಕಾಡೆಮಿ ನಿರ್ದೇಶಕಿ ವಿದುಷಿ ಶ್ರೀವಿದ್ಯಾ ಶಶಿಧರ್, ಭರತನಾಟ್ಯ ಕಲಾವಿದೆ ವಿದುಷಿ ವಿ.ಸುಮಾ ಆಗಮಿಸಲಿದ್ದಾರೆ. ಕಾರ್ಯಕ್ರಮದ ನಿರ್ದೇಶನ, ನೃತ್ಯ ಸಂಯೋಜನೆ, ನಟುವಾಂಗ ವಿದುಷಿ ಶ್ರೀಮತಿ ಮಿತ್ರ ನವೀನ್ ಅವರದ್ದು. ಗಾಯನದಲ್ಲಿ ವಿದ್ವಾನ್ ಎಂ.ಎಸ್. ನವೀನ್ ಅಂದಗಾರ್, ಮೃದಂಗದಲ್ಲಿ ವಿದ್ವಾನ್ ವಿಕ್ರಮ್ ಭಾರಧ್ವಾಜ್ ಹಾಗೂ ಕೊಳಲಿನಲ್ಲಿ ಚಿ॥ ಯಶಸ್ ಎನ್. ಕಾಶ್ಯಪ್ ಸಹ ಕಲಾವಿದರಾಗಿ ಸಹಕರಿಸಲಿದ್ದಾರೆ. ನೃತ್ಯ ಕಲಾವಿದರಾದ ಕು॥ ಅರ್ಪಿತ ಉದಯ ನಾಯಕ, ಶ್ರೀಮತಿ ಭುವನೇಶ್ವರಿ ಪ್ರವೀಣ್, ಕು॥ ಯಶಸ್ವಿನಿ ಬಿ ಎಂ, ಕು॥ ಚಿತ್ರಶ್ರೀ ಆರ್ ಎಂ, ಕು॥ ಖುಷಿ ಟಿ.ಜಿ., ಶ್ರೀಮತಿ ಸಾಯಿ ಪ್ರಾರ್ಥನರಾವ್ ಎಚ್, ಕು॥ ರಕ್ಷಿತ ಎ, ಕು॥ ಶರ್ವರಿ ವಾಳಿಂಬೆ ಹಾಗೂ ಶ್ರೀಮತಿ ಸುನಿತಾ ರತೀಶ್ ಪ್ರದರ್ಶನ ನೀಡಲಿದ್ದಾರೆ ಎಂದು ನಾದ ವಿದ್ಯಾಲಯ ನಿರ್ದೇಶಕ ಎಂ.ಎಸ್. ನವೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಸ್ಪೋರ್ಟ್ಸ್ ಪೆವಿಲಿಯನ್ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಅಂತರ ವಲಯ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಗಳಿಸಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮೀಮುರಳೀಧರ್, ಗೌ.ಕಾರ್ಯದರ್ಶಿ, ಮಹಾಜನ ವಿದ್ಯಾಸಂಸ್ಥೆ, ಮೈಸೂರು, ಡಾ. ಎಚ್.ಎನ್. ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ತಂಡದ ನಾಯಕಿ ಲಪ್‌ಯಾ ಅವರನ್ನು ಕಾಣಬಹುದು. (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್ ಕೆ, ಸ್ಮಿತಾ, ದಕ್ಷಿತಾ, ದೀಕ್ಷಿತ, ಪ್ರಿಯಾಂಕ, ಅಭಿಜ್ಞಗೌಡ, ಶರಣ್ಯ, ಕೀರ್ತನ, ತಾಶಿ, ಸುಪ್ರಿತ, ಲೆನಿಟ, ಇಂದುಶ್ರೀ, ಸಂಗೀತ ಹಾಗೂ ಸಾಗರಿ ಪೊನ್ನಮ್ಮ ಅವರನ್ನು ಕಾಣಬಹುದು.




ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡರನ್ನು ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಕಚೇರಿಯಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ಕೇಕ್ ಕತ್ತರಿಸಿ, ಸನ್ಮಾನಿಸುವ ಮೂಲಕ ಶುಭ ಕೋರಿದರು. ರವಿಶಾಸ್ತ್ರಿ, ಎಸ್.ರವಿ, ಭಾಸ್ಕರ ಶೆಟ್ಟಿ, ಸುರೇಶ, ರಘು, ಹೆಚ್.ಬಿ.ಚಂದ್ರು, ಮಹದೇವು, ರತೀಶ, ಹೇಮಂತ್, ಸಿ.ಜೆ.ಗಂಗಾಧರ, ನಾರಾಯಣ ಕುಂದರ್, ಅರುಣ, ಪ್ರಭಾಕರ, ಮರಿದೇವರು, ಸುಬ್ರಹ್ಮಣ್ಯ, ಸುಬ್ರಹ್ಮಣ್ಯ ತಂತ್ರಿ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ 23ನೇ ವಾರ್ಡಿನ ಸ್ನೇಹಿತರ ಬಳಗದಿಂದ ಶುಭಾಶಯ ಕೋರಲಾಯಿತು. ಬಿಜೆಪಿ ಮುಖಂಡರಾದ ಆರ್.ಪರಮೇಶ, ಪ್ರಕಾಶ್ ಪ್ರಿಯದರ್ಶನ್, ಪ್ರಮೋದ್, ಸುರೇಂದ್ರ, ಮಂಜುನಾಥ್, ವಿನೋದ್, ಈರೇಗೌಡ್ರು, ಪ್ರಶಾಂತ್, ಬೈರತಿ ಲಿಂಗರಾಜು, ಚೇತನ್, ಕಾಂತರಾಜು ಇನ್ನಿತರರಿದ್ದರು.

2029ರವರೆಗೆ ಮೋದಿಯೇ ಪ್ರಧಾನಿ: ಶಾ

ಕೇಜ್ರಿವಾಲ್‌ಗೆ ತಿರುಗೇಟು



ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವ ಅಮಿತ್ ಶಾ, 'ಇದು ಸಾಮಾನ್ಯ ತೀರ್ಪು ಅಲ್ಲ' ಎಂದು ಹೇಳಿದ್ದಾರೆ.

ಸುದ್ದಿ ಸಂಸ್ಥೆ 'ಎಎನ್‌ಐ' ಸಂದರ್ಶನದಲ್ಲಿ ಮಾತನಾಡಿರುವ ಅವರು, ಕೇಜ್ರಿವಾಲ್‌ಗೆ ದೊರತಿರುವ ಮಧ್ಯಂತರ ಜಾಮೀನು ಸಾಮಾನ್ಯ ತೀರ್ಪು ಅಲ್ಲ ಎಂದು ನಾನು ನಂಬುತ್ತೇನೆ. ಆದರೆ, ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್ 'ವಿಶೇಷ ತೀರ್ಪು' ನೀಡಿದೆ ಎಂದು ದೇಶದ ಬಹಳಷ್ಟು ಜನರು ನಂಬುತ್ತಿದ್ದಾರೆ ಎಂದು ಹೇಳಿದ್ದಾರೆ.

ಅರವಿಂದ ಕೇಜ್ರಿವಾಲ್ ಅವರೇ, ನಿಮಗೊಂದು ಕೆಟ್ಟ ಸುದ್ದಿ ಇದೆ... 2029ರವರೆಗೆ ನರೇಂದ್ರ ಮೋದಿ ಅವರೇ ದೇಶದ ಪ್ರಧಾನಿಯಾಗಿ ಮುಂದುವರಿಯಲಿದ್ದಾರೆ. 2029ರ ನಂತರವೂ ಪ್ರಧಾನಿ ಮೋದಿಯೇ ನಮ್ಮನ್ನು ಮುನ್ನಡೆಸುತ್ತಾರೆ ಎಂದು ಶಾ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮೊದಲು ಅಪರಾಧ ಕೃತ್ಯಗಳನ್ನು ಎಸಗಲು ಯೋಜನೆ ರೂಪಿಸುತ್ತಾರೆ. ಅದರಂತೆ ಮೊದಲು ದುಷ್ಕೃತ್ಯಗಳನ್ನು ನಡೆಸುತ್ತಾರೆ. ಜನರು ಇದರ ಬಗ್ಗೆ ಮಾತನಾಡುವುದಕ್ಕೆ ಆರಂಭಿಸಿದ ನಂತರ ಕೃತ್ಯಗಳನ್ನು ಮರೆಮಾಚಲು ಯತ್ನಿಸುತ್ತಾರೆ. ಬಳಿಕ ಮತ್ತೊಮ್ಮೆ ದೌರ್ಜನ್ಯ ನಡೆಸುತ್ತಾರೆ. ಇದಕ್ಕೆ ಸಂದೇಶ್‌ಖಾಲಿ ಪ್ರಕರಣವೇ ಸ್ಪಷ್ಟ ಉದಾಹರಣೆ ಎಂದು ಶಾ ಹೇಳಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಮಹಿಳಾ ಸಿಎಂ ಆಗಿಯೂ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಮಾತನಾಡಲಿಲ್ಲ. ಸಂದೇಶ್‌ಖಾಲಿ ಪ್ರಕರಣ ಸಂಬಂಧ ಪೊಲೀಸರು ತನಿಖೆ ನಡೆಸಲಿಲ್ಲ. ಆದರೆ, ಹೈಕೋರ್ಟ್ ಮಧ್ಯಪ್ರವೇಶಿಸಬೇಕಾಯ್ತು. ನಂತರ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದ್ದು ನಾಚಿಕೆಗೇಡಿನ ಸಂಗತಿ ಎಂದು ಶಾ ಕಿಡಿಕಾರಿದ್ದಾರೆ. ಅಯೋಧ್ಯೆಯ ರಾಮ ಮಂದಿರ ಉದ್ಘಾಟನಾ ಸಮಾರಂಭವನ್ನು ಇಡೀ 'ಇಂಡಿಯಾ ಒಕ್ಕೂಟ' ಬಹಿಷ್ಕರಿಸಿತ್ತು. ಮುಸ್ಲಿಮರ ವೋಟ್‌ಬ್ಯಾಂಕ್‌ಗೆ ಹೆದರಿ ಅವರು ಈ ರೀತಿ ನಡೆದುಕೊಂಡಿದ್ದಾರೆ. ಮುಸ್ಲಿಮರೊಂದಿಗೆ 'ಈದ್' ಆಚರಿಸಲು ಇಂಡಿಯಾ ಒಕ್ಕೂಟ ನಾಯಕರಿಗೆ ಯಾವುದೇ ಸಮಸ್ಯೆಗಳಿಲ್ಲ. ಆದರೆ, ಹಿಂದೂಗಳಾಗಿದ್ದರೂ ರಾಮಮಂದಿರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ. ಏಕೆಂದರೆ ಮುಸ್ಲಿಮರ ವೋಟ್‌ಬ್ಯಾಂಕ್‌ಗೆ ಧಕ್ಕೆಯಾಗುತ್ತದೆ. ಇದು ಯಾವ ರೀತಿಯ ರಾಜಕೀಯ ಎಂದು ವಿಪಕ್ಷ ನಾಯಕರ ವಿರುದ್ಧ ಶಾ ಗುಡುಗಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ 25ರಿಂದ 30 ಲೋಕಸಭಾ ಸ್ಥಾನಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಿಜೆಪಿಗೆ ನನ್ನ ಬಗ್ಗೆ ಭಯ

ಚಂಡೀಗಢ: ಬಿಜೆಪಿಗೆ ನನ್ನ ಬಗ್ಗೆ ಭಯವಿದೆ. ಆದ್ದರಿಂದಲೇ ಜೈಲಿಗೆ ಕಳುಹಿಸಿದೆ ಎಂದು ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.



ಕುರುಕ್ಷೇತ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಮಾರ್ಚ್ 16 ರಂದು ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುತ್ತದೆ. ಮಾರ್ಚ್ 21 ರಂದು ಅವರು ನನ್ನನ್ನು ಜೈಲಿಗೆ ಕಳುಹಿಸುತ್ತಾರೆ. ಕೇಜ್ರಿವಾಲ್ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಬಾರದು ಎಂಬುದು ಅವರ ಉದ್ದೇಶವಾಗಿತ್ತು ಎಂದು ಟೀಕಿಸಿದ್ದಾರೆ



ಮೈಸೂರಲ್ಲಿ ವಿಪ್ರ ವಕೀಲರ ಪರಿಷತ್ ವತಿಯಿಂದ ಆಚಾರ್ಯತ್ರಯರ ಜಯಂತಿ ಪ್ರಯುಕ್ತ ವಿವಿಧ ಕ್ಷೇತ್ರದ ಸಾಧಕರಿಗೆ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಅವರನ್ನು ಸಾಮಾಜಿಕ ಕ್ಷೇತ್ರದ ಸೇವೆ ಗುರುತಿಸಿ, ಸನ್ಮಾನಿಸಲಾಯಿತು. ಆನಂದ್ ತೀರ್ಥ, ಡಾ.ವಿ.ನಾಗಸಂಪಿಗೆ, ಇಳೈ ಆಳ್ವಾರ್ ಸ್ವಾಮೀಜಿ, ಸಂಚಾಲಕ ರವೀಂದ್ರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೇ 18, ಅಂತರರಾಷ್ಟ್ರೀಯ ರೈಲ್ವೆ ಮ್ಯೂಸಿಯಂ ಡೇ

ಬೆಳಗ್ಗೆ 10ರಿಂದ ಸಂಜೆ 5.30 ಗಂಟೆವರೆಗೆ ವಿಕಲಚೇತನ, ಅನಾಥಾಶ್ರಮದ ಮಕ್ಕಳಿಗೆ ಉಚಿತ ಪ್ರವೇಶ

ಮೈಸೂರು, ಮೇ 15(ಆರ್‌ಕೆ)– ಮೇ 18ರಂದು ಅಂತರರಾಷ್ಟ್ರೀಯ ರೈಲ್ವೆ ವಸ್ತು ಸಂಗ್ರಹಾಲಯ ದಿನವನ್ನಾಗಿ ಆಚರಿಸಲಾಗುವುದು. ಸಾಂಸ್ಕೃತಿಕ ವೈವಿಧ್ಯಮಯ ಶ್ರೀಮಂತಗೊಳಿಸಲು, ಜಾಗತಿಕ ಮತ್ತು ಪರಸ್ಪರ ಸಂಸ್ಕೃತಿಯನ್ನು ಸಂರಕ್ಷಿಸಲು ನೈರುತ್ಯ ರೈಲ್ವೆ ವಿಭಾಗವು ಮೈಸೂರಿನ ರೈಲು ಮ್ಯೂಸಿಯಂನಲ್ಲಿ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು ಆಚರಿಸುತ್ತಿದೆ ಎಂದು ಹಿರಿಯ ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ತಿಳಿಸಿದ್ದಾರೆ. ಅಂದು ಮೈಸೂರು ರೈಲು ವಸ್ತುಸಂಗ್ರಹಾಲಯಕ್ಕೆ ಅನಾಥಾಶ್ರಮ, ವಿಕಲಚೇತನ ಶಾಲೆಗಳು ಹಾಗೂ 12 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಭುವಂತ್‌ಗೆ ಉನ್ನತ ಶ್ರೇಣಿ



ಮೈಸೂರು: ಮೈಸೂರಿನ ಗೋಪಾಲಸ್ವಾಮಿ ಪ್ರೌಢಶಾಲೆಯ ವಿದ್ಯಾರ್ಥಿ ಭುವಂತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 584 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ವಿದ್ಯಾರಣ್ಯಪುರಂ ನಿವಾಸಿ ವೆಂಕಟೇಶ್ ಹಾಗೂ ಸೌಭಾಗ್ಯ ದಂಪತಿ ಪುತ್ರ



ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 62ನೇ ಜನ್ಮದಿನದ ಅಂಗವಾಗಿ ಬುಧವಾರ ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಎದುರಿನ ಮೈದಾನದಲ್ಲಿ ಸಸಿಗಳನ್ನು ನೆಟ್ಟು, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಕೆಪಿಸಿಸಿ ಸದಸ್ಯ, ಸಂಯೋಜಕ ಪಿ.ರಾಜು, ಎಡ್ವಿನ್ ರಿಚರ್ಡ್, ನಾಮನಿರ್ದೇಶನ ನಗರಪಾಲಿಕೆ ಸದಸ್ಯ ಆರ್.ಹೆಚ್.ಕುಮಾರ್, ನೀರಲ್ ಶಾ, ರಾಘು, ಆದರ್ಶಗೌಡ, ಮಹೇಶ್, ಶಂಕರ್, ಜೆ.ಕುಮಾರ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಲ್ಲಿ ಕಾಂಗ್ರೆಸ್ ಕೈವಾಡವಿದೆ: ಅಶೋಕ್

- ಅನಗತ್ಯವಾಗಿ ಬಿಜೆಪಿಯನ್ನು ಪ್ರಕರಣದಲ್ಲಿ ಎಳೆದು ತರಲಾಗುತ್ತಿದೆ
- ರೇವಣ್ಣನ ಬಂಧಿಸಿದರೂ ಪ್ರಜ್ವಲ್ ಮಾಜಿ ಕಾರ್ ಡ್ರೈವರ್ ಇನ್ನೂ ಬಂಧಿಸಿಲ್ಲ



ಬೆಂಗಳೂರು,ಮೇ 15(ಕೆಎಂಶಿ)–ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಕಾಂಗ್ರೆಸ್ ಕೈವಾಡವಿದೆ. ಬಿಜೆಪಿ ಮೇಲೆ ಅನಗತ್ಯವಾಗಿ ಆರೋಪ ಹೊರಿಸುವ ಪ್ರಯತ್ನವನ್ನು ಆ ಪಕ್ಷದ ಹಿರಿಯ ನಾಯಕರು ಮಾಡುತ್ತಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ರೇವಣ್ಣ ಅವರನ್ನು ಕೂಡಲೇ ಬಂಧಿಸಿದರೂ, ಚಾಲಕನನ್ನು ಬಂಧಿಸಿಲ್ಲ. ಎಸ್‌ಐಟಿ ಅಧಿಕಾರಿಗಳು ಪಕ್ಷಪಾತ ಧೋರಣೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದರು. ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದಂತೆ ಪ್ರಕರಣದ ಹಿಂದೆ ತಿಮಿಂಗಿಲವೇ ಇದೆ, ಅದನ್ನು ಬಡಿದು ತಿನ್ನಬೇಕಾ, ಬೇಡವಾ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬ ತೀರ್ಮಾನಿಸಲಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೂಲಕ ಇಡೀ ಒಕ್ಕಲಿಗ ಸಮುದಾಯವನ್ನು ಅಪಮಾನಿಸಬೇಕಿತ್ತೇ ಎಂದು ಜನರು ಮಾತನಾಡುತ್ತಿದ್ದು, ಇದೀಗ ಆರೋಪವನ್ನು ಬಿಜೆಪಿ ಮೇಲೆ ಹೊರಿಸುವ ಪ್ರಯತ್ನ ನಡೆದಿದೆ.

ತನಿಖೆಯ ಪ್ರತಿ ಮಾಹಿತಿ ಮೊದಲು ಕಾಂಗ್ರೆಸ್ ನಾಯಕರಿಗೆ ತಲುಪುತ್ತದೆ, ಎಸ್‌ಐಟಿ ಅಧಿಕಾರಿಗಳು ಕಾಂಗ್ರೆಸ್ ಹೇಳಿದಂತೆ ಕೇಳುತ್ತಿದ್ದಾರೆ, ಸತ್ಯ ಹೊರಬರಲು ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಆಗ ಯಾರೆಲ್ಲ ಬಂಧನಕ್ಕೊಳಗಾಗುತ್ತಾರೆ ಎಂಬುದು ತಿಳಿಯಲಿದೆ.

ಕಾರು ಚಾಲಕ ಎಲ್ಲಿಂದಲೋ ಸಂದೇಶ ಕಳುಹಿಸುತ್ತಾನೆ. ಶಾಸಕ ಮಂಜು ಸೇರಿದಂತೆ ಹಲವರ ಮೇಲೆ ಆರೋಪ ಮಾಡಲಾಗಿದೆ. ಚಾಲಕನನ್ನು ಕಾಂಗ್ರೆಸ್‌ನವರೇ ಕಾಣದಂತೆ ಇಟ್ಟಿದ್ದಾರೆ. ಹಾಸನದಲ್ಲಿ ಎಲ್ಲೆಡೆ ಪೆನ್‌ಡ್ರೈವ್ ಹಂಚಲಾಗಿದೆ ಎಂದರೆ, ಅದು ಬಿಜೆಪಿ ಕಾರ್ಯಕರ್ತರಿಗೂ ತಲುಪಿರಬಹುದು. ಕಾಂಗ್ರೆಸ್ ಕಾರ್ಯಕರ್ತರ ಬಳಿಯೂ ವಿಡಿಯೋ ಇದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನೂ ಬಂಧಿಸಬೇಕಿತ್ತು. ಮಾಜಿ ಸಚಿವ ರೇವಣ್ಣ ಜೈಲಿಗೆ ಹೋದಾಗ ಕಾಂಗ್ರೆಸ್ ನಾಯಕರು ಹೆಚ್ಚು ಖುಷಿ ಪಟ್ಟಿದ್ದಾರೆ. ಇದು ವ್ಯವಸ್ಥಿತ ಸಂಚಾಗಿದೆ, ಎಲ್ಲರೂ ಟೀಮ್ ಮಾಡಿಕೊಂಡಿದ್ದಾರೆ, ಚುನಾವಣೆ ದೃಷ್ಟಿಯಿಂದ ಕೃತ್ಯ ಎಸಗಿದ್ದಾರೆ. ಆಮ್ಲಜನಕಕ್ಕಾಗಿ ತಿಮಿಂಗಿಲ ಹೊರಗೆ ಬರಲೇಬೇಕು ಎಂದರು.

ಭ್ರಷ್ಟ ಸರ್ಕಾರ ಪಾಪದ ಕರ್ಮ, ರೈತರ ಆತ್ಮಹತ್ಯೆ, ಮಕ್ಕಳ ಮಾರಾಟ, ಬರಗಾಲದ ಬವಣೆ ಕಾರಣಗಳಿಂದ ಕಾಂಗ್ರೆಸ್ ಶಾಸಕರೇ ಸರ್ಕಾರವನ್ನು ಬೀಳಿಸುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಗಲುಗನಸು ಕಾಣುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ 90ಕ್ಕೂ ಅಧಿಕ ಶಾಸಕರು ಪಕ್ಷ ಬಿಟ್ಟು ಹೋಗಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಮತ್ತೊಬ್ಬನಿಗೆ ಗಂಭೀರ ಸ್ವರೂಪದ ಗಾಯ



ಹಲಗೂರು: ಕಾರೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ, ಮತ್ತೊಬ್ಬರು ಗಾಯಗೊಂಡಿರುವ ಘಟನೆ ಸಮೀಪದ ಬಾಣಸಮುದ್ರ ಗೇಟ್ ಬಳಿಯ ಅಕ್ವೇರಿಯಲ್ ಗಾರ್ಮೆಂಟ್ಸ್ ಬಳಿ ಸಂಭವಿಸಿದೆ.

ಹಲಗೂರಿನ ಇಂದಿರಾ ಕಾಲೋನಿ ನಿವಾಸಿ ಚಾಂದ್ ಪಾಷ ಅವರ ಪುತ್ರ ಮೊಹಮ್ಮದ್ ಅರ್ಬಾಜ್ (20) ಮೃತಪಟ್ಟ ದುರ್ದೈವಿ.

ಸ್ನೇಹಿತನೊಡನೆ ಕೆಲಸದ ನಿಮಿತ್ತ ಮಳವಳ್ಳಿಗೆ ಹೋಗುವಾಗ ಬಾಣಸಮುದ್ರ ಗೇಟ್ ಹತ್ತಿರವಿರುವ ಅಕ್ವೇರಿಯಲ್ ಗಾರ್ಮೆಂಟ್ಸ್ ಬಳಿ ಅತಿ ವೇಗವಾಗಿ ಮತ್ತು ಅಜಾಗರೂಕತೆಯಿಂದ ಬಂದ ಸ್ವಿಫ್ಟ್ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಮೊಹಮ್ಮದ್ ಅರ್ಬಾಜ್ ಮತ್ತು ಮೊಹಮ್ಮದ್ ಕೈಫ್ ಅವರನ್ನು ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ನಂತರ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗುವ ವೇಳೆ ಮಾರ್ಗ ಮಧ್ಯೆ ಮೊಹಮ್ಮದ್ ಅರ್ಬಾಜ್ ಮೃತಪಟ್ಟಿದ್ದರು. ಮತ್ತೊಬ್ಬರು ಗಂಭೀರ ಗಾಯಗೊಂಡಿದ್ದು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲಗೂರಿನ ಖಬರ್ಸ್ಥಾನ್‌ನಲ್ಲಿ ಇಂದು ಸಂಜೆ ಮೃತರ ಅಂತ್ಯಕ್ರಿಯೆ ನಡೆಯಿತು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಇಂದು ಮಂಡ್ಯದಲ್ಲಿ ಡೆಂಗ್ಯೂ ಜಾಗೃತಿ ಜಾಥಾ

ಮಂಡ್ಯ, ಮೇ 15–ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯ ಪ್ರಯುಕ್ತ ಮೇ 16 ರಂದು ಬೆಳಿಗ್ಗೆ 10 ಗಂಟೆಗೆ ಸದ್ವಿದ್ಯಾ ಪ್ಯಾರಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಂದ ಸಂಜಯ ವೃತ್ತದಿಂದ ಬೆಂಗಳೂರು–ಮೈಸೂರು ಮುಖ್ಯ ರಸ್ತೆ ಮುಖಾಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯವರೆಗೆ ಜಾಥಾ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಾನವ ಸರಪಳಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ

ಕೆಆರ್‌ಎಸ್‌ನಲ್ಲಿ ಒಳಹರಿವು ಹೆಚ್ಚಳ

ಶ್ರೀರಂಗಪಟ್ಟಣ, ಮೇ 15– ರಾಜ್ಯದಲ್ಲಿ ವರುಣ ಅಬ್ಬರಿಸುತ್ತಿದ್ದಾನೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಸುರಿಯುತ್ತಿರುವುದರಿಂದ ಕೃಷ್ಣರಾಜ ಸಾಗರ (ಕೆಆರ್‌ಎಸ್) ದಲ್ಲಿ ನೀರಿನ ಒಳಹರಿವಿನ ಮಟ್ಟ ನಿಧಾನವಾಗಿ ಹೆಚ್ಚಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ಸುರಿಯುತ್ತಿರುವ ಮಳೆಯಿಂದ ಕೆಆರ್‌ಎಸ್ ಜಲಾಶಯಕ್ಕೆ 800ಕ್ಕೂ ಹೆಚ್ಚು ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿದೆ.

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಉತ್ತಮವಾಗಿ ಸುರಿಯುತ್ತಿದ್ದು, ಇನ್ನೂ ಒಂದು ವಾರ ಭಾರಿ ಮಳೆ ಸುರಿಯುವ ನಿರೀಕ್ಷೆ ಇದೆ. ಕರಾವಳಿ ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಲಿದೆ. ಐದು ದಿನ ದಕ್ಷಿಣ ಒಳನಾಡಿನಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ವಿವಿಧ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಇದರಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮತ್ತಷ್ಟು ಮಳೆ ಸುರಿದು ಕೆಆರ್‌ಎಸ್ ಜಲಾಶಯದ ಒಳಹರಿವಿನ ಮಟ್ಟ ಹೆಚ್ಚಾಗುವ ಸಾಧ್ಯತೆ ಇದೆ.



ಕೊಡಗಿನಲ್ಲಿ ಮಳೆ ಸುರಿದ ಕಾರಣ ನಾಲ್ಕು ತಿಂಗಳ ಬಳಿಕ ಕೆಆರ್‌ಎಸ್ ಅಣೆಕಟ್ಟೆಗೆ 802 ಕ್ಯೂಸೆಕ್ಸ್ ನೀರು ಬಂದಿದೆ. ಈ ವರ್ಷದಲ್ಲಿ ಜನವರಿ 14ರ ಬಳಿಕ ಒಳಹರಿವು ಈ ಪ್ರಮಾಣದಲ್ಲಿ ದಾಖಲಾಗಿರುವುದು ಇದೇ ಮೊದಲು. ಕೆಆರ್‌ಎಸ್ ಗರಿಷ್ಠ ಮಟ್ಟ 124 ಅಡಿ ಇದ್ದು, ಪ್ರಸ್ತುತ 79.65 ಅಡಿ ನೀರಿದೆ.

ಕಳೆದ ವಾರ ನದಿಗೆ ಬರುತ್ತಿದ್ದ ಒಳಹರಿವನ್ನು ಗಮನಿಸಿದರೆ ಕೇವಲ 50 ರಿಂದ 100 ಕ್ಯೂಸೆಕ್ಸ್ ಅಷ್ಟೇ ಒಳ ಹರಿವಿನ ಪ್ರಮಾಣ ಇತ್ತು. ಆದರೆ ಕಳೆದ ಒಂದು ವಾರದಿಂದ ಸುರಿಯುತ್ತಿರುವ ನಿರಂತರ ಮಳೆಗೆ 802 ಕ್ಯೂಸೆಕ್ ಒಳಹರಿವು ದಾಖಲಾಗಿದ್ದು, 491 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದ್ದು, 50 ಕ್ಯೂಸೆಕ್ ನೀರನ್ನು ನಾಲೆಗಳಿಗೆ ಹರಿಸಲಾಗುತ್ತಿದೆ.

ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಮಾತನಾಡಿ, ಈಗ ಬೀಳುತ್ತಿರುವ ಮಳೆಯಿಂದ ರೈತರಿಗೆ ಯಾವುದೇ ಅನುಕೂಲವಾಗುವುದಿಲ್ಲ. ಅದರ ಬದಲು ಬೆಳೆದು ನಿಂತು ಕಟಾವಿಗೆ ಬಂದಿರುವ ಭತ್ತದ ಬೆಳೆಗೆ ಈಗಿನ ಮಳೆ ಆತಂಕ ಉಂಟುಮಾಡಿದೆ, ಇದನ್ನು ಹೊರತುಪಡಿಸಿದರೆ ನಿರಂತರ ಬಿಸಿಲಿನ ತಾಪದಿಂದ ಬೆಂದು ಹೋಗಿದ್ದ ಸಾರ್ವಜನಿಕರಿಗೆ ವಾತಾವರಣದಲ್ಲಿ ತಂಪು ತಂದಿದೆ. ಇದನ್ನು ಬಿಟ್ಟರೆ ಕಾಡಿನ ಪ್ರಾಣಿಪಕ್ಷಿಗಳಿಗೆ ಅಲ್ಪ ಪ್ರಮಾಣದ ಕುಡಿಯುವ ನೀರಿಗೆ ಅನುಕೂಲವಾಗಿದೆ ಅಷ್ಟೇ ಎಂದರು.

ಮೇ 17ರಿಂದ ಕರಾವಳಿ ಹಾಗೂ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆಗಳಿವೆ. ಮುಂಗಾರು ಪೂರ್ವ ಮಳೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಆಗುತ್ತಿದೆ ಇದೇ ರೀತಿ ಇನ್ನೂ ಮೂರು ದಿನ ಮಳೆ ಮುಂದುವರೆಯಲಿದೆ. ಭಾಗಶಃ ಮೋಡ ಕವಿದ ವಾತಾವರಣ ಕಂಡು ಬರುತ್ತಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಹಲವು ಕಡೆ ಮಳೆಯಾಗಲಿದೆ. ಕೆಲವೆಡೆ ಬಿರುಗಾಳಿ, ಮಿಂಚು, ಗುಡುಗು ಸಹಿತ ಮಳೆಯಾಗುವ ಸಂಭವವಿದೆ.

ಸೋಮವಾರವೂ ಕೂಡ ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಯಾದಗಿರಿ, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಚದುರಿದಂತೆ ಮಳೆಯಾಗಿದೆ.

ಒಕ್ಕಲಿಗ ವಧು–ವರರ ಸಮಾವೇಶ

ಪಾಂಡವಪುರ, ಮೇ 15– ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಮೇ 19ರಂದು ಬೆಳಿಗ್ಗೆ 9.30ಕ್ಕೆ ಮೈಸೂರಿನ ನೇಗಿಲಯೋಗಿ ಮರುಳೇಶ್ವರ ಸೇವಾಭವನದಲ್ಲಿ ಒಕ್ಕಲಿಗರ 13ನೇ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ.

ಒಕ್ಕಲಿಗರ ವಧು–ವರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಒಕ್ಕಲಿಗರ ವಧು–ವರರ ಸಮಾವೇಶವನ್ನು ಹಮ್ಮಿಕೊಂಡಿದೆ. ಇದು 13ನೇ ಒಕ್ಕಲಿಗರ ವಧು–ವರರ ಸಮಾವೇಶವಾಗಿದ್ದು, ಪಾಂಡವಪುರ, ಮೈಸೂರು, ರಾಮನಗರ, ಚನ್ನಪಟ್ಟಣ, ಮಂಡ್ಯ, ಕೆ.ಆರ್.ನಗರ ಸೇರಿದಂತೆ ವಿವಿದೆಡೆಯಿಂದ ವಧು–ವರರು, ಪೋಷಕರು ಭಾಗವಹಿಸಲಿದ್ದಾರೆ.

ಒಕ್ಕಲಿಗ ವಧು–ವರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9164585877, 9980306012 ಮೂಲಕ ಸಂಪರ್ಕಿಸುವಂತೆ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಕೆ.ಕುಬೇರ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸಾಲದ ವಸೂಲಾತಿಗಾಗಿ ರೈತರಿಗೆ ಕಿರುಕುಳ ನೀಡಬೇಡಿ

ಮಂಡ್ಯ, ಮೇ 15– ಮೈಕ್ರೋ ಫೈನಾನ್ಸ್ ಕಂಪನಿಯವರು ರೈತರಿಗೆ ಮತ್ತು ಸಾರ್ವಜನಿಕರಿಗೆ ನೀಡಿರುವ ಸಾಲ ವಸೂಲಾತಿ ಮಾಡುವ ಸಂದರ್ಭದಲ್ಲಿ ಅವರುಗಳ ಮೇಲೆ ಯಾವುದೇ ತರಹದ ಕಿರುಕುಳ ಮತ್ತು ಒತ್ತಡ ನೀಡಬಾರದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಎಚ್ಚರಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಮೈಕ್ರೋ ಫೈನಾನ್ಸ್ ಕಂಪನಿಗಳು ಸಭೆ ನಡೆಸಿ ಮಾತನಾಡಿದ ಅವರು, ರೈತರಿಗೆ ಸಾರ್ವಜನಿಕರಿಗೆ ನೀಡಿರುವ ಸಾಲ ವಸೂಲತಿ ಮಾಡುವಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳು ಜನಗಳ ಮೇಲೆ ಕಿರುಕುಳ ಹಾಗೂ ಒತ್ತಡ ನೀಡುತ್ತಿರುವುದು ಕಂಡು ಬಂದಿದೆ ಇದು ಅತಿರೇಖವಾದಲ್ಲಿ ಅಥವಾ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಸಾಲ ವಸೂಲತಿ ಮಾಡುವ ಮೈಕ್ರೋ ಫೈನಾನ್ಸ್ ಅವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಕಿರುಕುಳ ನೀಡಿದ ಮೈಕ್ರೋಫೈನಾನ್ಸ್ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. 2 ರಿಂದ 3 ತಿಂಗಳು ಸಾಲ ವಸೂಲಾತಿ ಮಾಡುವಂತಿಲ್ಲ ಸರ್ಕಾರ ಮಂಡ್ಯ ಜಿಲ್ಲೆಯಲ್ಲಿರುವ ಎಲ್ಲಾ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿ 77 ಸಾವಿರ ರೈತರಿಗೆ ರೂ 34 ಕೋಟಿ ಹಣವನ್ನು ಬರ ಪರಿಹಾರವಾಗಿ ನೀಡಿದೆ. ಬರಗಾಲ ಇರುವ ಹಿನ್ನೆಲೆಯಲ್ಲಿ ಮಾನವೀಯತೆ ದೃಷ್ಟಿಯಿಂದ ಎರಡು ಮೂರು ತಿಂಗಳುಗಳ ಕಾಲ ಸಾಲ ಮರುಪಾವತಿಗೆ ಅವಕಾಶ ನೀಡಿ ಒತ್ತಡ ಎರದಂತೆ ನೋಡಿಕೊಳ್ಳಿ ಎಂದರು.



ಬೆಳಗಿನ ಜಾವ ಹಾಗೂ ರಾತ್ರಿ ವೇಳೆಯಲ್ಲಿ ಸಾಲ ವಸೂಲಾತಿ ಮಾಡುವವರು ಪ್ರತಿದಿನ ಮನೆಗೆ ಭೇಟಿ ನೀಡುತ್ತಿದ್ದು, ಇದರಿಂದ ಸಾರ್ವಜನಿಕರು ತಮಗೆ ಪ್ರತಿದಿನದ ಕೆಲಸ ಮಾಡಲು ತೊಂದರೆ ಹಾಗೂ ಕಿರಿಕಿರಿ ಉಂಟಾಗುತ್ತಿದೆ ಎಂದು ದೂರುಗಳು ಬರುತ್ತಿದ್ದು, ಸಾಲ ವಸೂಲಾತಿಗೆ ಸರಿಯಾದ ಸಮಯ ನಿಗದಿಮಾಡಿಕೊಳ್ಳುವಂತೆ ತಿಳಿಸಿದರು.

ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಮೈಕ್ರೋಪೈನಾನ್ಸ್‌ಗಳು ತೊಂದರೆ ನೀಡುತ್ತಿದ್ದಲ್ಲಿ ಸಹಾಯವಾಣಿ ಸಂಖ್ಯೆ: 18004255654, 18001021080, 011 47174410, ನ್ನು ಸಂಪರ್ಕಿಸಬಹುದು ಎಂದರು.

ಸಭೆಯಲ್ಲಿ ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್‌ಕುಮಾರ್, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಉಪಸ್ಥಿತರಿದ್ದರು.

ತಾವರೆಗೆರೆಯಿಂದ ಮಹಿಳೆ ನಾಪತ್ತೆ

ಮಂಡ್ಯ, ಮೇ 15– ಮಂಡ್ಯ ತಾವರೆಗೆರೆ ನಗರದ ಜಯಮ್ಮ(68) ಕಾಣೆಯಾಗಿರುವ ಬಗ್ಗೆ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ಮಹಿಳೆಯು 5.2 ಅಡಿ ಎತ್ತರ, ಕೋಲುಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ ಹೊಂದಿದ್ದು ಹಳದಿ ಬಣ್ಣದ ಸೀರೆ, ಪಾಚಿ ಬಣ್ಣದ ರವಿಕೆ ಧರಿಸಿರುತ್ತಾರೆ.

ಸುಳಿವು ಸಿಕ್ಕಲ್ಲಿ ದೂ.ಸಂ: 9480804846, 224777 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಪೂರ್ವ ಪೊಲೀಸ್ ಠಾಣೆ ಆರಕ್ಷಕ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ: ಗುಡ್ಡೇನಹಳ್ಳಿ ಹಾಗೂ ಬೋಗಾದಿ ವ್ಯಾಪ್ತಿಯ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಚೀಣ್ಯ, ಸಾಮಕಹಳ್ಳಿ,ಕಾಂತಪುರ, ಎನ್‌ಜೆವೈಗಳಿಗೆ ಹಾಗೂ ಗ್ರಾಮ ಪಂಚಾಯಿತಿಗಳಾದ ಬ್ರಹ್ಮದೇವರಹಳ್ಳಿ, ಮಣ್ಣಹಳ್ಳಿ, ಕಾಂತಪುರ, ಬೋಗಾದಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಹಾಗೂ ಸದರಿ ವಿತರಣಾ ಕೇಂದ್ರದಿಂದ ಮಾರ್ಗಗಳಿಗೆ ನಾಳೆ (ಮೇ16) ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಬೆಳೆ ನಷ್ಟ ಪರಿಹಾರ ಒದಗಿಸಲು ಒತ್ತಾಯ

ಮಂಡ್ಯ, ಮೇ 15– ಶೀಘ್ರವೇ ಬೆಳೆ ನಷ್ಟ ಪರಿಹಾರ ವಿತರಿಸಿ ನಾಲೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ರೈತ ಸಂಘದ ಮುಖಂಡ ಕೆಂಪುಗೌಡ ಆಗ್ರಹಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕರ್ನಾಟಕದ ಎಲ್ಲಾ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದೆ. ಆದರೆ ಇದುವರೆಗೂ ಪರಿಹಾರ ನೀಡಿಲ್ಲ ಎಂದು ದೂರಿದರು.

ಒಣ ಭೂಮಿಗೆ ಮಾತ್ರ ಪರಿಹಾರ ನೀಡುತ್ತೇವೆ ಎನ್ನುವ ಸರ್ಕಾರದ ಕ್ರಮ ಸರಿಯಲ್ಲ. ತೆಂಗು ಮತ್ತು ಅಡಿಕೆ ಭಾರಿ ಪ್ರಮಾಣದಲ್ಲಿ ನಷ್ಟವಾಗಿದ್ದು ಆದಷ್ಟು ತ್ವರಿತವಾಗಿ ರೈತರ ಖಾತೆಗೆ ಪರಿಹಾರ ಹಣ ಕಳುಹಿಸಬೇಕು ಎಂದು ಒತ್ತಾಯಿಸಿದರು.

ವಿ.ಸಿ.ನಾಲೆ ಆಧುನಿಕರಣ ಕಾಮಗಾರಿ ಪ್ರಾರಂಭವಾಗಿದ್ದು ಆದರೆ ಕೆಲಸ ಕುಂಟುತ್ತಸಾಗಿದೆ. 40 ಕಿಲೋಮೀಟರ್ ಕಾಮಗಾರಿಯಲ್ಲಿ 18 ಕಿಲೋಮೀಟರ್‌ನಷ್ಟು ಕಾಮಗಾರಿ ಮುಗಿಸಿದ್ದು ಇನ್ನೂ ಶೇಕಡ 60ರಷ್ಟು ಕಾಮಗಾರಿ ಬಾಕಿ ಉಳಿದಿದೆ. ಜೂನ್ ಕೊನೆಯ ಹಂತದಲ್ಲಿ ನಾಲೆಗೆ ನೀರು ಬರುತ್ತದೆ. ಆಗ ಕಾಮಗಾರಿ ನಡೆಸಲು ಆಗುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಮತ್ತು ಉಸ್ತುವಾರಿ ಸಚಿವರು ಗಂಭೀರವಾಗಿ ಪರಿಗಣಿಸಿ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್‌ಗೆ ಮಾತೃವಿಯೋಗ



ಕೆ.ಆರ್.ಪೇಟೆ: ಪುರಸಭೆಯ ಮಾಜಿ ಅಧ್ಯಕ್ಷರಾದ ದಿ. ಕೆ.ಜೆ.ಬೋರಲಿಂಗೇಗೌಡರ ಧರ್ಮಪತ್ನಿ ಮತ್ತು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಅವರ ತಾಯಿ ಶ್ರೀಮತಿ ಗವಿಯಮ್ಮ (85) ಅವರು ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ.

ಮೃತರು ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್ ಸೇರಿದಂತೆ 6 ಮಂದಿ ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗವಿಯಮ್ಮ ಅವರ ಅಂತ್ಯಕ್ರಿಯೆಯು ಮೇ.16 ರಂದು ಮಧ್ಯಾಹ್ನ 1 ಗಂಟೆಗೆ ಮೈಸೂರು ರಸ್ತೆಯ ಮನ್‌ಮುಲ್ ಎದುರಿನ ಬಳಿಯಿರುವ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜ್ವಲ್ ದೇಶ ಬಿಟ್ಟು ಪರಾರಿಯಾಗಲು ಗೃಹ, ಇಂಟೆಲಿಜೆನ್ಸಿ ವೈಫಲ್ಯವೇ ಕಾರಣ; ಕ್ರಮ ಅವಶ್ಯ

- ಮುಖ್ಯಮಂತ್ರಿಗಳಿಗೆ ಸಾಹಿತಿಗಳು, ಸಂಘ–ಸಂಸ್ಥೆಗಳ ಮುಖಂಡರು, ವೈದ್ಯರು, ಕಲಾವಿದರ ಪತ್ರ
- ದೇವರಾಜೇಗೌಡ ಪ್ರಕರಣ ಸಂಬಂಧ ಬಿಜೆಪಿ ರಾಷ್ಟ್ರೀಯ, ರಾಜ್ಯ ಅಧ್ಯಕ್ಷರಿಗೆ ಪತ್ರ ಬರೆದಿರುವುದರಿಂದ ಅವರನ್ನು ಸಂಚಿನ ಭಾಗವಾಗಿಸಿ
- ಪ್ರಕರಣ ಬಯಲಿಗೆ ಬರಲು ಕಾರಣನಾದ ಕಾರು ಚಾಲಕ ಕಾರ್ತಿಕ್ ಬಂಧಿಸಿ

ಮೈಸೂರು, ಮೇ 15–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಲವಾರು ಸಲಹೆಗಳನ್ನು ನೀಡಿ, ಸಾಹಿತಿಗಳು, ಸಂಘ–ಸಂಸ್ಥೆಗಳ ಮುಖಂಡರು, ವೈದ್ಯರು, ಕಲಾವಿದರು ಸೇರಿದಂತೆ 107 ಪ್ರಜ್ಞಾವಂತ ನಾಗರಿಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸುದೀರ್ಘ ಪತ್ರ ಬರೆದಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಎಲ್ಲಿದ್ದರೂ ಕೂಡಲೇ ಬಂಧಿಸಿ, ಆತನ ವಿರುದ್ಧ ಐಟಿ ಕಾಯಿದೆ, ಐಪಿಸಿ ಕಾಯಿದೆಯಡಿ ಮೊಕದ್ದಮೆ ಹೂಡಬೇಕು. ಐಪಿಸಿ ಸೆಕ್ಷನ್ 173ಕ್ಕೆ 2018ರಲ್ಲಿ ತಂದಿರುವ ತಿದ್ದುಪಡಿಯಂತೆ ಅತ್ಯಾಚಾರ ಪ್ರಕರಣಗಳನ್ನು ಎರಡು ತಿಂಗಳ ಒಳಗೆ ವಿಚಾರಣೆ ಮುಗಿಸಬೇಕು. 60 ದಿನದೊಳಗಾಗಿ ತನಿಖೆ ಮುಗಿಯದಿದ್ದರೆ ಆರೋಪಿ ಜಾಮೀನು ಪಡೆಯಲು ಅವಕಾಶ ದೊರೆಯುತ್ತದೆ. ಹೀಗಾಗಿ ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಬೇಕು ಎಂದು ಸಲಹೆ ನೀಡಿದ್ದಾರೆ.

ಸಂತ್ರಸ್ತ ಮಹಿಳೆಯರಿಗೆ ತೊಂದರೆ ಕೊಡುವ, ದೂರು ನೀಡದಂತೆ ತಡೆಯೊಡ್ಡುವ, ದೂರು ಹಿಂತೆಗೆದುಕೊಳ್ಳುವಂತೆ ಒತ್ತಡ ಹೇರುವ, ಸಂತ್ರಸ್ತರ ಕುರಿತು ಅವಹೇಳನ ಹಾಗೂ ಅಪಪ್ರಚಾರ ಮಾಡುವ, ಸಂತ್ರಸ್ತರ ಮಕ್ಕಳು ಹಾಗೂ ಕುಟುಂಬದವರಿಗೆ ತೊಂದರೆ ನೀಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಾವು (ಸಿಎಂ) ಮಾಧ್ಯಮಗಳ ಮೂಲಕ ಪ್ರಕಟಣೆ ನೀಡಬೇಕು. ಪ್ರಕರಣ ಕುರಿತು ಆರೋಪ–ಪ್ರತ್ಯಾರೋಪದಲ್ಲಿ ತೊಡಗಿರುವ ರಾಜಕೀಯ ನಾಯಕರ ನಡವಳಿಕೆಗೆ ಕಡಿವಾಣ ಹಾಕಬೇಕು ಹಾಗೂ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಅವಕಾಶ ಮಾಡಿಕೊಡುವಂತೆ ರಾಜಕೀಯ ನಾಯಕರಿಗೆ ಸೂಚನೆ ನೀಡಬೇಕು.

ಪ್ರಜ್ವಲ್ ರೇವಣ್ಣನ ಕಾರು ಚಾಲಕನ ಬಂಧಿಸಿ: ಲೈಂಗಿಕ ಕೃತ್ಯ ಚಿತ್ರೀಕರಣದಲ್ಲಿ ಪ್ರಜ್ವಲ್ ಜೊತೆ ಭಾಗಿಯಾಗಿರಬಹುದಾದವರನ್ನು ಪತ್ತೆ ಮಾಡಿ, ಅವರ ವಿರುದ್ಧ ಮೊಕದ್ದಮೆ ಹೂಡಬೇಕು. ಪ್ರಜ್ವಲ್ ರೇವಣ್ಣನ ಕಾರು ಚಾಲಕ ಕಾರ್ತಿಕ್‌ನನ್ನು ಕೂಡಲೇ ಬಂಧಿಸಬೇಕು. ಈ ವೀಡಿಯೋಗಳು ತಮ್ಮ ಬಳಿ ಇದ್ದವು ಎಂದು ಹೇಳಿದ ಬಿಜೆಪಿ ನಾಯಕ ದೇವರಾಜೇಗೌಡ ವಿರುದ್ಧ ಗಂಭೀರ ಪ್ರಕರಣಗಳನ್ನು ದಾಖಲಿಸಬೇಕು. ವೀಡಿಯೋಗಳನ್ನು ಹಂಚಿದವರ ವಿರುದ್ಧವೂ ಮಾನವ ಹಕ್ಕುಗಳಿಗೆ ಧಕ್ಕೆ ತಂದಿರುವುದು, ಸಾಮಾಜಿಕ ಸ್ವಾಸ್ಥ್ಯವನ್ನು ಕದಡುವುದು, ಚುನಾವಣೆಯನ್ನು ಹಾಳು ಮಾಡಲು ಸಂಚು ರೂಪಿಸಿದ ಆರೋಪದ ಮೇಲೆ ಮೊಕದ್ದಮೆ ಹೂಡಬೇಕು. ವೀಡಿಯೋ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ರಾಜ್ಯಾಧ್ಯಕ್ಷರಿಗೆ ದೇವರಾಜೇಗೌಡ ಪತ್ರ ಬರೆದಿರುವುದಾಗಿ ಹೇಳಿರುವುದನ್ನು ಆಧರಿಸಿ, ಈ ಇಬ್ಬರೂ ರಾಜಕೀಯ ನಾಯಕರು ಈ ಕುರಿತು ಪೊಲೀಸರಿಗೆ ಮಾಹಿತಿ ನೀಡದ ಕಾರಣ ಅವರನ್ನು ಸಂಚಿನ ಭಾಗವಾಗಿ ಪರಿಗಣಿಸಬೇಕು ಎಂದು ಸಲಹೆ ನೀಡಲಾಗಿದೆ.

ಗೃಹ, ಇಂಟೆಲಿಜೆನ್ಸಿ ವೈಫಲ್ಯ: ಕೆಲವು ವೀಡಿಯೋಗಳು ಐದಾರು ವರ್ಷಗಳಷ್ಟು ಹಳೆಯವು ಎಂದು ಹೆಚ್.ಡಿ.ರೇವಣ್ಣ ಹೇಳಿಕೆ ನೀಡಿದ್ದು, ಇಂತಹ ಲೈಂಗಿಕ ವಿಕೃತಿಯನ್ನು ಇಷ್ಟು ವರ್ಷ ಮುಂದುವರೆಯಲು ಬಿಟ್ಟಿರುವುದರಿಂದ ಅವರ ಕುಟುಂಬದ ಎಲ್ಲಾ ಸದಸ್ಯರನ್ನು ಈ ಪ್ರಕರಣದ ಸಹ ಅಪರಾಧಿಗಳನ್ನಾಗಿ ಮಾಡಬೇಕು. ಪ್ರಜ್ವಲ್ ತಾಯಿಯನ್ನು ವಿಚಾರಣೆಗೊಳಪಡಿಸಬೇಕು. ಏ.22ರಂದು ವೀಡಿಯೋಗಳು ಬಹಿರಂಗವಾಗಿದ್ದು, ಏ.25ರಂದು ರಾಜ್ಯ ಮಹಿಳಾ ಆಯೋಗ ತನಿಖೆಗೆ ಶಿಫಾರಸು ಮಾಡಿ ಸಿಎಂಗೆ ಪತ್ರ ಬರೆದಿದೆ. ಏ.27ರಂದು ಪ್ರಜ್ವಲ್ ದೇಶ ಬಿಟ್ಟು ಪರಾರಿಯಾಗಿರುವುದು ಗೃಹ ಇಲಾಖೆ ಮತ್ತು ಇಂಟೆಲಿಜೆನ್ಸಿ ವಿಭಾಗದ ವೈಫಲ್ಯವನ್ನು ತೋರಿಸುತ್ತಿರುವುದರಿಂದ ಈ ಇಲಾಖೆಗಳ ಸಂಬಂಧ ಅಧಿಕಾರಿಗಳನ್ನು ವಜಾ ಮಾಡಿ ವಿಚಾರಣೆಗೊಳಪಡಿಸಬೇಕು. ವರ್ಷದ ಹಿಂದೆಯೇ ಪ್ರಜ್ವಲ್ ರೇವಣ್ಣ 86 ಮಾಧ್ಯಮ ಸಂಸ್ಥೆಗಳು ಮತ್ತು ಮೂವರು ವ್ಯಕ್ತಿಗಳ ವಿರುದ್ಧ ತನ್ನ ಬಗ್ಗೆ ಯಾವುದೇ ಮಾನಹಾನಿಕರ ವೀಡಿಯೋ ಚಿತ್ರ ಪ್ರಸಾರ ಮಾಡಬಾರದೆಂದು ತಡೆಯಾಜ್ಞೆ ತಂದಿದ್ದಾರೆ. ಇದು ಜನರ ಹಕ್ಕಿನ ಉಲ್ಲಂಘನೆ ಆಗಿದ್ದು, ರಾಜ್ಯ ಸರ್ಕಾರ ಈ ಕುರಿತು ಮೊಕದ್ದಮೆ ದಾಖಲಿಸಿ ಜನರ ಮಾಹಿತಿ ಹಕ್ಕನ್ನು ಎತ್ತಿ ಹಿಡಿಯಬೇಕು. ಹೆಚ್.ಡಿ.ರೇವಣ್ಣ ಕುಟುಂಬವು ಹಾಸನ ಜಿಲ್ಲೆಯ ಕಂದಾಯ ಮತ್ತು ಪೊಲೀಸ್ ಇಲಾಖೆಗಳಲ್ಲಿ ಆಯಕಟ್ಟಿನ ಜಾಗಗಳಲ್ಲಿ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು, ಅನೇಕ ಭೂ ವ್ಯವಹಾರಗಳನ್ನು ನಡೆಸುತ್ತಿದೆ ಎಂಬ ಆರೋಪವಿದ್ದು, ಈ ಅಧಿಕಾರಿಗಳು ಅದೇ ಸ್ಥಾನದಲ್ಲಿ ಮುಂದುವರೆದರೆ ನಿಷ್ಪಕ್ಷಪಾತ ತನಿಖೆಗೆ ಅಡ್ಡಿಯಾಗುವ ಸಾಧ್ಯತೆ ಇರುವುದರಿಂದ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು.

ಎಸ್‌ಐಟಿ ತನಿಖೆ ಪೂರ್ಣಗೊಳ್ಳುವವರೆಗೆ ಹೆಚ್.ಡಿ.ರೇವಣ್ಣ ಅವರ ವಿಧಾನಸಭೆ ಸದಸ್ಯತ್ವವನ್ನು ತಾತ್ಕಾಲಿಕವಾಗಿ ರದ್ದುಪಡಿಸಬೇಕು. ಪ್ರಜ್ವಲ್ ತಾನು ಎಸಗಿದ ಕೃತ್ಯಕ್ಕೆ ಸರ್ಕಾರಿ ಬಂಗಲೆಯನ್ನು ಬಳಸಿರುವುದಕ್ಕೆ ಮೊಕದ್ದಮೆ ಹೂಡಬೇಕು. ಈ ಕುಟುಂಬಕ್ಕೆ ಒದಗಿಸಿರುವ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಹಿಂದಕ್ಕೆ ಪಡೆಯಬೇಕು. ಪ್ರಜಾಪ್ರಭುತ್ವದ ಉಳಿವಿಗೆ, ಪಿತೃ ಪ್ರಧಾನ ಸಮಾಜದ ನಿರ್ಮೂಲನೆಗೆ, ಮಹಿಳೆಯರ ಘನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

ಉತ್ತಮ ಸಾಹಿತ್ಯ ಕೃತಿಗಳ ಓದುವುದು ಮಕ್ಕಳ ಬದುಕಿನ ದಿನಚರಿಯ ಒಂದು ಭಾಗವಾಗಬೇಕು

ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ಡಿ.ವಿಜಯಲಕ್ಷ್ಮಿ ಅಭಿಮತ

ಮೈಸೂರು, ಮೇ 15– ಉತ್ತಮ ಸಾಹಿತ್ಯ ಕೃತಿಗಳ ಓದುವಿಕೆ ಮಕ್ಕಳ ಬದುಕಿನ ದಿನಚರಿಯ ಭಾಗವಾಗಬೇಕು. ಆಗ ಅವರು 'ಸಾಹಿತ್ಯ ಓದಿನ' ಮೂಲಕ ಅನುಭವಗಳನ್ನು ಮರು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ. ಡಿ. ವಿಜಯಲಕ್ಷ್ಮಿ ಅಭಿಪ್ರಾಯಪಟ್ಟರು.

ಅದಮ್ಯ ರಂಗಶಾಲೆಯ ವತಿಯಿಂದ ನಗರದ ಜಯಲಕ್ಷ್ಮಿಪುರಂನ ವಿವೇಕಾನಂದ ಪದವಿಪೂರ್ವ ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ ನಡೆದ 'ಬಾಲಂಗೋಚಿ' ಬೇಸಿಗೆ ಶಿಬಿರದ ಸಮಾರೋಪ, ಜಾನಪದ ನೃತ್ಯ ಮತ್ತು ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಬಾಲ್ಯದಿಂದಲೂ ಪರಿಸರದ ಜೊತೆಗೆ ನಿಕಟ ಒಡನಾಟವಿದ್ದ ಕುವೆಂಪು ಮತ್ತು ತೇಜಸ್ವಿ ಅವರ ಕೃತಿಗಳಲ್ಲಿ ಸಹಜ ಬದುಕಿನ ಮಾದರಿಗಳಿವೆ. ಪೋಷಕರು ಮಕ್ಕಳಿಗೆ ಇಂತಹ ಕೃತಿಗಳು ಲಭಿಸುವಂತೆ ಮಾಡಿ, ಅವರಲ್ಲಿ ಓದುವ ಅಭಿರುಚಿ ಬೆಳೆಸುವ ಮೂಲಕ ಸಾಂಸ್ಕೃತಿಕ ವ್ಯಕ್ತಿತ್ವ ಅರಳಿಸಲು ಅನುವು ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ನಗರ ಪ್ರದೇಶಗಳಲ್ಲಿ ಹೆತ್ತವರು ಉದ್ಯೋಗಸ್ಥರಾದ ಕಾರಣ ರಜೆಯ ಅವಧಿಯಲ್ಲಿ ಮಕ್ಕಳನ್ನು ನಿಭಾಯಿಸುವುದು ಸವಾಲಿನ ಕೆಲಸ. ಹಾಗಾಗಿ ಇಂದಿನ ದಿನಮಾನಗಳಲ್ಲಿ ಬೇಸಿಗೆ ಶಿಬಿರಗಳು ವರದಾನವಾಗಿವೆ. ಕಲೆ, ಸಾಹಿತ್ಯ, ಜಾನಪದಗಳಂತಹ ವಿಚಾರಗಳನ್ನು ಕಲಿಸುವ ಮೂಲಕ ಬೇಸಿಗೆ ಶಿಬಿರಗಳು ವ್ಯಕ್ತಿತ್ವ ವಿಕಸನಕ್ಕೆ ನೆರವಾಗುತ್ತವೆ ಎಂದು ನುಡಿದರು.



ಅದಮ್ಯ ರಂಗಶಾಲೆಯ ವತಿಯಿಂದ ನಡೆದ ಜಾನಪದ ನೃತ್ಯ ಮತ್ತು ನಾಟಕ ಪ್ರದರ್ಶನವನ್ನು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ಡಿ. ವಿಜಯಲಕ್ಷ್ಮಿ 'ನಗಾರಿ ಬಾರಿಸುವ' ಮೂಲಕ ಉದ್ಘಾಟಿಸಿದರು. ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ರಂಗಕರ್ಮಿ ಚಂದ್ರು ಮಂಡ್ಯ, ವಿಶ್ರಾಂತ ಕುಲಪತಿ ಪ್ರೊ.ಜೆ. ಶಶಿಧರ್ ಪ್ರಸಾದ್ ಉಪಸ್ಥಿತರಿದ್ದರು.


ಹಾಗೆಯೇ ಮಕ್ಕಳಿಗೆ ಬಾಲ್ಯವನ್ನು ಸಹಜವಾಗಿ ಮತ್ತು ಸ್ವಚ್ಛಂದವಾಗಿ ಅನುಭವಿಸಲು ಬಿಡಬೇಕು. ವಿಪರೀತ ಶಿಸ್ತಿಗೆ ಒಳಪಡಿಸಿ ಕಟ್ಟುಕಟ್ಟಳೆಗಳನ್ನು ವಿಧಿಸಬಾರದು. ಮುಗ್ಧ ಮನಸ್ಸಿನ ಮಕ್ಕಳಿಗೆ, ಅವರ ಸಹಜ ಬಾಲ್ಯತನವನ್ನು ಉತ್ತೇಜಿಸುವ ಪರಿಸರವನ್ನೂ ನಿರ್ಮಿಸಿಕೊಡಿ ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಜೆ.ಶಶಿಧರ್ ಪ್ರಸಾದ್ ಮಾತನಾಡಿ ಬೇಸಿಗೆ ಶಿಬಿರಗಳು ಮಕ್ಕಳನ್ನು ಮೊಬೈಲ್, ಟಿವಿ, ಕಂಪ್ಯೂಟರಿನಂತಹ ತಂತ್ರಜ್ಞಾನದ ವಸ್ತುಗಳಿಂದ ದೂರವಿರಿಸಲು ಸಹಕಾರಿಯಾಗಿವೆ. ಹಾಗೆ, ಸಾಹಿತ್ಯದ ಪುಸ್ತಕಗಳನ್ನು ಹತ್ತಿರವಾಗಿಸುತ್ತವೆ ಎಂದರು.

ಮಕ್ಕಳು ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಮರೆಯಬಾರದು. ಇವನ್ನು ತೊರೆದರೆ ಸಮಾಜ ಒಡೆದುಹೋಗುತ್ತದೆ. ಜೀವನದಲ್ಲಿ ಸಮನ್ವಯತೆ ತುಂಬ ಮುಖ್ಯ. ಇದು ಲಭಿಸಬೇಕಾದರೆ ಮಕ್ಕಳಿಗೆ ಕುವೆಂಪು ಗೀತೆಗಳನ್ನು ಕಲಿಸಿ. ಜೊತೆಗೆ ಬಾಲ ರಾಮಾಯಾಣ ಮತ್ತು ಮಹಾಭಾರತ, ಅಮರಚಿತ್ರಕೋಶ, ಜಾತಕ ಕತೆಗಳನ್ನು ಓದಿಸಿ ಎಂದು ಕರೆ ನೀಡಿದರು.

ಅದಮ್ಯ ರಂಗಶಾಲೆಯ ಗೌರವ ಕಾರ್ಯ ದರ್ಶಿ ಟಿ.ಸತೀಶ್ ಜವರೇಗೌಡ ಸಮಾರೋಪ ಭಾಷಣ ಮಾಡಿದರು. ವೇದಿಕೆಯಲ್ಲಿ ಕೆನರಾ ಬ್ಯಾಂಕಿನ ರಾಮಕೃಷ್ಣನಗರ ಶಾಖೆಯ ಹಿರಿಯ ವ್ಯವಸ್ಥಾಪಕ ಎಸ್.ರಾಜ, ಸಮಾಜ ಸೇವಕ ಗದ್ದಿಗೆ ಕುಂಟೇಗೌಡ, ರಂಗ ಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ, ಕವಿ ಟಿ. ಲೋಕೇಶ್ ಹುಣಸೂರು, ಪದಾಧಿಕಾರಿಗಳಾದ ಡಾ.ಬಿ. ಬಸವರಾಜು, ಕೆ.ಎಸ್. ಸತೀಶ್ ಕುಮಾರ್, ನಾಗೇಶ್ ಕಾವ್ಯಪ್ರಿಯ ಉಪಸ್ಥಿತರಿದ್ದರು.

PoK ಭಾರತಕ್ಕೆ ಸೇರಿದ್ದು, ಅದನ್ನು ಮರಳಿ ಪಡೆಯುವುದು ಖಚಿತ



ಸೆರಾಂಪೋರ್: ಪಾಕ್ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಅದನ್ನು ಮರಳಿ ಪಡೆಯುವುದು ಖಚಿತ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಪುನರುಚ್ಚರಿಸಿದ್ದಾರೆ.

ಸೆರಾಂಪೋರ್‌ನಲ್ಲಿ ರ‍್ಯಾಲಿಯನ್ನುದ್ದೇಶಿಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರತಿಭಟನೆ, ಹಿಂಸಾಚಾರವನ್ನು ಉಲ್ಲೇಖಿಸಿ ಮಾತನಾಡಿದರು. 370 ಕಾಯ್ದೆ ರದ್ದುಗೊಳಿಸಿದ ನಂತರ ಕಾಶ್ಮೀರದಲ್ಲಿ ಶಾಂತಿ ನೆಲೆಸಿದೆ, ಆದರೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪ್ರತಿಭಟನೆಗಳು ಮೊಳಗಿವೆ. ಮೊದಲು ಆಜಾದಿ ಘೋಷಣೆಗಳು ಕೇಳಿದ್ದವು. ಇದೀಗ ಮತ್ತೆ ಅದೇ ಘೋಷಣೆಗಳು ಮೊಳಗುತ್ತಿವೆ. ಮೊದಲು ಭಾರತದ ಮೇಲೆ ಕಲ್ಲು ತೂರಾಟ ನಡೆಸಲಾಗುತ್ತಿತ್ತು. ಇದೀಗ ಪಾಕಿಸ್ತಾನದ ಮೇಲೆಯೇ ಕಲ್ಲು ತೂರಾಟ ನಡೆಯುತ್ತಿದೆ ಎಂದು ವ್ಯಂಗ್ಯವಾಡಿದರು.

ಇದೇ ವೇಳೆ ಪಿಒಕೆ ಸ್ವಾಧೀನಪಡಿಸಿಕೊಳ್ಳುವ ಬೇಡಿಕೆಯನ್ನು ಬೆಂಬಲಿಸದ ಕಾಂಗ್ರೆಸ್ ನಾಯಕರನ್ನು ತರಾಟೆಗೆ ತೆಗೆದುಕೊಂಡ ಅವರು, ಮಣಿಶಂಕರ್ ಅಯ್ಯರ್ ಅವರಂತಹ ಕಾಂಗ್ರೆಸ್ ನಾಯಕರು ಪಾಕಿಸ್ತಾನದ ಬಳಿ ಅಣುಬಾಂಬ್ ಇದೆ. ಹೀಗಾಗಿ ಈ ಪ್ರಯತ್ನಕ್ಕೆ ಕೈ ಹಾಕಬಾರದು ಎಂದು ಹೇಳುತ್ತಾರೆ. ಆದರೆ, ಈ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದನ್ನು ಪಡೆಯುವುದು ಖಚಿತ ಎಂದು ಹೇಳಲು ನಾನು ಇಚ್ಛಿಸುತ್ತೇನೆಂದು ಹೇಳಿದ್ದಾರೆ. ಬಳಿಕ ಸಿಎಎ ವಿರೋಧಿಸಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧವೂ ವಾಗ್ದಾಳಿ ನಡೆಸಿದರು.

ಐಷಾರಾಮಿ ಕಳ್ಳ; 200 ಪ್ಲೈಟ್‌ಗಳಲ್ಲಿ ಸಂಚಾರ; ವಿಮಾನ ಪ್ರಯಾಣಿಕರೇ ಟಾರ್ಗೆಟ್; ಕೋಟಿಗಟ್ಟಲೇ ದರೋಡೆ

ನವದೆಹಲಿ: ಒಬ್ಬ ವ್ಯಕ್ತಿ 110 ದಿನಗಳ ಕಾಲ ದೇಶಾದ್ಯಂತ ಸುಮಾರು 200 ವಿಮಾನಗಳಲ್ಲಿ ಪ್ರಯಾಣಿಸಿದ್ದಾನೆ ಎಂದರೆ ಆತ ಉದ್ಯಮಿ ಆಗಿರಬೇಕು ಅಥವಾ ಶೂಟಿಂಗ್‌ನಲ್ಲಿ ಬ್ಯುಸಿಯಾಗಿರುವ ಸಿನಿಮಾ ಸೆಲೆಬ್ರಿಟಿ ಆಗಿರಬಹುದು. ಆದರೆ ಆತನೊಬ್ಬ ಮಹಾನ್ ಕಳ್ಳ. ದೆಹಲಿಯ ಆ ಪೆಡ್ಲರ್ ಕೇವಲ ವಿಮಾನ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ.

ಹೈದರಾಬಾದ್‌ನಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಹ್ಯಾಂಡ್‌ಬ್ಯಾಗ್‌ನಿಂದ ಬೆಲೆಬಾಳುವ ಚಿನ್ನಾಭರಣಗಳನ್ನು ಕಳವು ಮಾಡಿದ ಪ್ರಕರಣದ ತನಿಖೆ ಆರಂಭಿಸಿದ ದೆಹಲಿಯ ಪಹರ್‌ಗಂಜ್ ಪೊಲೀಸರು ಇತ್ತೀಚೆಗೆ ಆರೋಪಿಯನ್ನು ಬಂಧಿಸಿದ್ದರು. ತನಿಖೆ ವೇಳೆ ಆತ ಹೇಳಿದ



ಮಾತು ಕೇಳಿ ಪೊಲೀಸರೇ ಬೆಚ್ಚಿಬಿದ್ದಿದ್ದಾರೆ. ದೆಹಲಿಯ ಪಹರ್‌ಗಂಜ್ ಮೂಲದ ರಾಜೇಶ್ ಕಪೂರ್, ಹಣ ವಿನಿಮಯ ವ್ಯವಹಾರದ ಜೊತೆಗೆ ಮೊಬೈಲ್ ಫೋನ್ ರಿಪೇರಿ ಅಂಗಡಿಯನ್ನು ನಡೆಸುತ್ತಿದ್ದ. ಅಲ್ಲಿಂದ ಬರುತ್ತಿದ್ದ ಆದಾಯ ಸಾಲದೇ ಆತ ಕಳ್ಳನಾದ. ಮೊದಲಿಗೆ ರೈಲಿನಲ್ಲಿ ಕದಿಯುವ ಮೂಲಕ ಪೊಲೀಸರಿಗೆ ಸಿಕ್ಕಿಬಿದ್ದ ಆತ ಜೈಲಿನಿಂದ ಹೊರಬಂದು ಮಾರ್ಗವನ್ನೇ ಬದಲಿಸಿದ. ಮಾತ್ರವಲ್ಲ ಐಷಾರಾಮಿ ಕಳ್ಳನಾದ. ಕೇವಲ ವಿಮಾನ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ದರೋಡೆ ಮಾಡಲು ಪ್ರಾರಂಭಿಸಿದ. ಸಾಮಗ್ರಿಗಳನ್ನು ಸರಿಪಡಿಸುವ ನಾಟಕವಾಡಿ.. ಅಥವಾ ಪ್ರಯಾಣಿಕರು ವಾಷ್‌ರೂಂಗೆ ಹೋದಾಗ ಬೆಲೆಬಾಳುವ ವಸ್ತುಗಳನ್ನು ದೋಚುತ್ತಿದ್ದ. 2023ರಲ್ಲಿ ಈತ ಕೇವಲ ಕಳ್ಳತನಕ್ಕಾಗಿ 110 ದಿನಗಳಲ್ಲಿ 200 ವಿಮಾನಗಳಲ್ಲಿ ಪ್ರಯಾಣಿಸಿದ್ದಾನೆ ಎಂಬುದನ್ನು ಪೊಲೀಸರು ತಾಂತ್ರಿಕ ವಿವರಗಳ ಆಧಾರದ ಮೂಲಕ ಪತ್ತೆ ಹಚ್ಚಿ, ಬೆಚ್ಚಿ ಬಿದ್ದಿದ್ದಾರೆ.

ಸಿಕ್ಕಿಬಿದ್ದ ಕಳ್ಳ: ಏಪ್ರಿಲ್ 11ರಂದು ಹೈದರಾಬಾದ್‌ನಿಂದ ದೆಹಲಿಗೆ ಹೋಗುತ್ತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ 7 ಲಕ್ಷ ರೂಪಾಯಿ ಕಳ್ಳತನ ಮಾಡಿದ್ದ. ಅಲ್ಲದೇ ಫೆಬ್ರವರಿ 2 ರಂದು ಅಮೃತಸರದಿಂದ ದೆಹಲಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬನ ಬ್ಯಾಗ್‌ನಲ್ಲಿದ್ದ 20 ಲಕ್ಷ ರೂಪಾಯಿ ಮೌಲ್ಯದ ವಸ್ತುಗಳನ್ನು ಈತ ಕಳ್ಳತನ ಮಾಡಿದ್ದ. ಈ ಬಗ್ಗೆ ಸಂತ್ರಸ್ತರು ದೆಹಲಿಯಲ್ಲಿ ದೂರು ದಾಖಲಿಸಿದ್ದರು. ಈ ಕ್ರಮದಲ್ಲಿ ದೆಹಲಿ, ಹೈದರಾಬಾದ್, ಅಮೃತಸರ ಮತ್ತಿತರ ವಿಮಾನ ನಿಲ್ದಾಣಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸಿದ್ದರು. ಈ ಅನುಕ್ರಮದಲ್ಲಿ ವ್ಯಕ್ತಿಯೊಬ್ಬ ಮೂರು ಕಡೆ ಅನುಮಾನಾಸ್ಪದವಾಗಿ ಕಾಣಿಸಿಕೊಂಡಿದ್ದ. ಹೀಗಾಗಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು. ಬಳಿಕ ತಂತ್ರಜ್ಞಾನ ಮೂಲಕ ಆರೋಪಿಯನ್ನು ದೆಹಲಿಯ ಪಹರ್‌ಗಂಜ್‌ನಲ್ಲಿ ಬಂಧಿಸಲಾಯಿತು.

ಮೈಸೂರು ಮಿತ್ರ

ರಾಜ್ಯ ಸರ್ಕಾರ ವರ್ಷ ಪೂರ್ಣ; ವಿಶೇಷ ಪೂಜೆ, ಸಿಹಿ ವಿತರಣೆ



ಮೈಸೂರು, ಮೇ 15–ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಡಾ.ಯತೀಂದ್ರ ಯುವ ಬ್ರಿಗೇಡ್ ಹಾಗೂ ಕೃಷ್ಣರಾಜ ಯುವ ಬಳಗದ ವತಿಯಿಂದ 101 ಗಣಪತಿ ದೇವಸ್ಥಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಕೇಂದ್ರದಲ್ಲೂ ಈ ಬಾರಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಗೆಲ್ಲಲಿ, ರಾಜ್ಯದಲ್ಲಿ ಸರ್ಕಾರ 5 ವರ್ಷ ಸುಭದ್ರವಾಗಿರಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ನಂತರ ಮಾತನಾಡಿದ ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 28ರಲ್ಲಿ ಕನಿಷ್ಠ 20 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕಾಂಗ್ರೆಸ್ ಮುಖಂಡ ಜೆ.ಜೆ.ಆನಂದ್, ಡಾ.ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಶಿವಕುಮಾರ್, ಎಚ್.ಎಸ್.ದಿನೇಶ್, ರವಿಚಂದ್ರ, ವರುಣ ಮಹದೇವ್, ಶಿವಕುಮಾರ್, ನವೀನ್ ಕೆಂಪಿ, ರವಿತೇಜ, ವಿನಯ್ ಕಣಗಾಲ್, ನವೀನ್ ಹಾಗೂ ಇನ್ನಿತರ ಮುಖಂಡರು ಹಾಜರಿದ್ದರು.

ಕ್ಯಾನ್ಸರ್‌ನಿಂದ ಬಳಲುತ್ತಿರುವ ಬಾಲಕಿಗೆ ಮೈಸೂರು ಗೋಲ್ಡನ್ ಸಿಟಿ ಲಯನ್ಸ್ ಕ್ಲಬ್ ನೆರವು

ಮೈಸೂರು, ಮೇ 15(ಜಿಎ)–ಬಿ ಸೆಲ್ ತೀವ್ರ ಲಿಂಪೋಬ್ಲಾಸ್ಟಿಕ್ ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ 12 ವರ್ಷದ ಯುವತಿಯ ನೆರವಿಗೆ ಮೈಸೂರು ಗೋಲ್ಡನ್ ಸಿಟಿ ಲಯನ್ಸ್ ಕ್ಲಬ್ ಬಂದಿದೆ ಎಂದು ಕಾರ್ಯದರ್ಶಿ ಎಸ್.ಪ್ರಮೀಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕು ಕೆನ್ನಾಳು ಗ್ರಾಮದ 12 ವರ್ಷದ ಬಾಲಕಿ ಬಿ ಸೆಲ್ ತೀವ್ರ ಲಿಂಪೋಬ್ಲಾಸ್ಟಿಕ್ ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾಳೆ. ಈಗ ಈಕೆಗೆ ಅಸ್ಥಿ ಮಜ್ಜೆ ಕಸಿ ಶಸ್ತ್ರಚಿಕಿತ್ಸೆ ಅಗತ್ಯವಾಗಿದ್ದು, ಸುಮಾರು 40 ರಿಂದ 45 ಲಕ್ಷ ವೆಚ್ಚವಾಗಲಿದೆ. ಇದನ್ನು ಭರಿಸುವುದು ಈ ಬಡಕುಟುಂಬಕ್ಕೆ ಅಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಗೋಲ್ಡನ್ ಸಿಟಿ ಲಯನ್ಸ್ ಕ್ಲಬ್ ನೆರವಿಗೆ ನಿಂತಿದೆ ಎಂದರು.

ಮಗುವಿನ ತಂದೆ ಕೂಲಿ ಕೆಲಸ ಮಾಡುತ್ತಿದ್ದಾರೆ. ಈಗ ಚುನಾವಣಾ ನೀತಿ ಸಂಹಿತೆ ಕಾರಣ ಸರ್ಕಾರ, ಸಚಿವರು, ಶಾಸಕರ ಮಟ್ಟದಲ್ಲಿ ನೆರವು ವಿಳಂಬವಾಗಿದೆ. ಈ ಹಿನ್ನೆಲೆಯಲ್ಲಿ ಕ್ಲಬ್ ಉದ್ಯಮಿಗಳು, ಉಳ್ಳವರು ಹಾಗೂ ಇನ್ನಿತರರ ನೆರವಿಗೆ ಸಂಪರ್ಕಿಸಿದ್ದು, ಸಾರ್ವಜನಿಕರು ಕೂಡ ಮಗುವಿನ ತಾಯಿ ಕೆ.ಎಸ್.ಭಾವನಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದರಸನಗುಪ್ಪೆ ಶಾಖೆ, ಖಾತೆ ಸಂಖ್ಯೆ 39333115926 ಹಾಗೂ ಐಎಫ್‌ಎಸ್‌ಸಿ ಕೋಡ್ ಎಸ್‌ಬಿಐಎನ್0041018 ನೆರವು ನೀಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮಗುವಿನ ತಾಯಿ ಭಾವನಾ, ಅಧ್ಯಕ್ಷ ಟಿ.ಸುರೇಶ್‌ಗೋಲ್ಡ್, ಲೋಕೇಶ್‌ಗೌಡ ಉಪಸ್ಥಿತರಿದ್ದರು.

ಆದ್ಯತೆ ಮೇಲೆ ರೈತರ ಬ್ಯಾಂಕ್ ಖಾತೆಗೆ ಬರ ಪರಿಹಾರದ ಹಣ ವರ್ಗಾವಣೆ ಮಾಡಿ

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬ್ಯಾಂಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ





ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಿಲ್ಲಾ ಯೋಜನೆಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮಾತನಾಡಿದರು. ಲೀಡ್ ಬ್ಯಾಂಕ್ ಮ್ಯಾನೇಜರ್ ವಿ.ಎಸ್.ನಾಗೇಶ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮೇ 15 (ಆರ್‌ಕೆ)– ರೈತರ ಬ್ಯಾಂಕ್ ಖಾತೆಗೆ ಸರ್ಕಾರದಿಂದ ನೀಡುವ ಬರ ಪರಿಹಾರದ ಹಣವನ್ನು ಆದ್ಯತೆ ಮೇಲೆ ವರ್ಗಾಯಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಬ್ಯಾಂಕ್ ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮೈಸೂರು ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಯೋಜನೆಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಮಳೆ ಬಾರದೆ ಬೆಳೆ ನಷ್ಟವಾಗಿ ಕಂಗಾಲಾಗಿರುವ ರೈತರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬರ ಪರಿಹಾರ ಯೋಜನೆ, ಪ್ರಕೃತಿ ವಿಕೋಪದ ಅನುದಾನ ಬಿಡುಗಡೆಯಾಗಿದ್ದು, ಫಲಾನುಭವಿ ರೈತರಿಗೆ ಪರಿಹಾರದ ಹಣ ತಲುಪಿಸಬೇಕಾಗಿದೆ ಎಂದು ಹೇಳಿದರು.

ಕೃಷಿ ಇಲಾಖೆಯಿಂದ ಫಲಾನುಭವಿಗಳ ಮಾಹಿತಿಯೊಂದಿಗೆ ಪಟ್ಟಿ ಸಿದ್ಧಪಡಿಸಿ ಕಳುಹಿಸಿದಾಗ ತಾವು ಆದ್ಯತೆ ಮೇರೆಗೆ ರೈತರ ಬ್ಯಾಂಕ್ ಖಾತೆಗೆ ಬರ ಪರಿಹಾರದ ಹಣವನ್ನು ವರ್ಗಾಯಿಸಬೇಕು. ಬ್ಯಾಂಕುಗಳ ವಿಲೀನದಿಂದಾಗಿ ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಬದಲಾಗಿರಬಹುದು. ಆದರೆ, ಗ್ರಾಹಕರ ಆಧಾರ ನಂಬರ್ ಪಡೆದು ತಾಂತ್ರಿಕ ಸಮಸ್ಯೆ ಬಗೆಹರಿಸಿ ಅವರ ಖಾತೆಗೆ ಹಣ ವರ್ಗಾವಣೆ ಮಾಡಬೇಕು, ಯಾವುದೇ ಸಬೂಬು ಹೇಳುವಂತಿಲ್ಲ ಎಂದು ಜಿಲ್ಲಾಧಿಕಾರಿಗಳು ತಾಕೀತು ಮಾಡಿದರು.

ಸಾಲ ತ್ವರಿತ ವಿಲೇವಾರಿ: ಉದ್ದಿಮೆ, ಕೈಗಾರಿಕೆ, ವೃತ್ತಿ ಆರಂಭಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳಡಿ ಮಂಜೂರಾದ ನವ ಉದ್ಯಮಗಳಿಗೆ ಸಾಲ ಸೌಲಭ್ಯವನ್ನು ಶೀಘ್ರಗತಿ ಮಂಜೂರು ಮಾಡಿ ಹಣ ಬಿಡುಗಡೆ ಮಾಡಬೇಕು, ಸಿಬಿಲ್ ಸ್ಕೋರ್, ಮತ್ತಿತರ ಕಾರಣ ಹೇಳಿ ಸಾಲದ ಅರ್ಜಿಗಳನ್ನು ತಿರಸ್ಕರಿಸಬೇಡಿ. ನೀವು ನೀಡುವ ಸಾಲದ ಹಣದಿಂದ ಹಲವು ಉದ್ಯಮಿಗಳು ಕೈಗಾರಿಕೆ ಆರಂಭಿಸಿ ಹಲವು ಕುಟುಂಬಗಳಿಗೆ ಉದ್ಯೋಗ ನೀಡಿ ಅವರ ಬದುಕು ಕಟ್ಟಿಕೊಡುತ್ತಾರೆ ಎಂಬುದನ್ನು ಮರೆಯಬೇಡಿ ಎಂದೂ ಡಾ.ಕೆ.ವಿ.ರಾಜೇಂದ್ರ ಬ್ಯಾಂಕ್ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ನಿರ್ಲಕ್ಷ್ಯ ಬೇಡ: ಮೊದಲ ಬಾರಿ ಬ್ಯಾಂಕ್ ಶಾಖೆಗೆ ಭೇಟಿ ನೀಡಿದವರು, ರೈತರು, ಮಹಿಳೆಯರನ್ನು ಕಡೆಗಣಿಸಬೇಡಿ. ಶಾಖೆಗೆ ಬರುವ ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವದಿಂದ ಮಾತನಾಡಿಸಿ ವಿಚಾರಿಸಿ ಮಾಡಿ ಅವರು ಬಯಸುವ ಸೇವೆಯನ್ನು ಒದಗಿಸಿ ಯಾವ ಗ್ರಾಹಕರನ್ನೂ ನಿರ್ಲಕ್ಷಿಸಬೇಡಿ ಎಂದು ಜಿಲ್ಲಾಧಿಕಾರಿಗಳು ಬ್ಯಾಂಕ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಶೈಕ್ಷಣಿಕ ಸಾಲ: ಉನ್ನತ ಶಿಕ್ಷಣ, ವಿದೇಶದಲ್ಲಿ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸ್‌ಗಾಗಿ ಸಾಲ ಸೌಲಭ್ಯ ಪಡೆಯ ಬಯಸುವವರು ಅರ್ಜಿ ಸಲ್ಲಿಸಿದರೆ ತಡ ಮಾಡದೇ ಸಾಲದ ಹಣ ಮಂಜೂರು ಮಾಡಿ ಎಂದ ಅವರು, ಆ ಮೂಲಕ ಯುವ ಸಮೂಹಕ್ಕೆ ಆರ್ಥಿಕ ನೆರವು ನೀಡಿ ಎಂದರು.

> **ಬ್ಯಾಂಕ್ ಶಾಖೆ ತೆರೆಯಿರಿ**
>
> "ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಬ್ಯಾಂಕ್ ಸೇವೆ ಲಭ್ಯವಾಗಬೇಕು. 5000 ಜನಸಂಖ್ಯೆ ಹೊಂದಿರುವ ಗ್ರಾಮಗಳಲ್ಲಿ ಚಿಕ್ಕದಾಗಿ ಬ್ಯಾಂಕ್ ಶಾಖೆ ತೆರೆದು ವಹಿವಾಟಿಗೆ ಅವಕಾಶ ನೀಡಿ. ಅಗತ್ಯಬಿದ್ದರೆ ಎಟಿಎಂ ಕೌಂಟರ್ ಆರಂಭಿಸಿ ಗ್ರಾಮೀಣ ಭಾಗದ ಗ್ರಾಹಕರಿಗೆ ಆರ್ಥಿಕ ಉತ್ತೇಜನ ನೀಡಿ.
>
> –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ವಾರ್ಷಿಕ ಕ್ರೆಡಿಟ್ ಪ್ಲಾನ್ ಬಿಡುಗಡೆ: ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಸಾಲ ಯೋಜನೆ ಕುರಿತಂತೆ ಸಿದ್ಧಪಡಿಸಿರುವ ಜಿಲ್ಲಾ ವಾರ್ಷಿಕ ಕ್ರೆಡಿಟ್ ಪ್ಲಾನ್ ಮಾಹಿತಿ ಪುಸ್ತಿಕೆಯನ್ನು ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಲೀಡ್ ಬ್ಯಾಂಕ್ ಮ್ಯಾನೇಜರ್ ವಿಎಸ್.ನಾಗೇಶ್ ಅವರು ಸಭೆಯಲ್ಲಿ ಬಿಡುಗಡೆ ಮಾಡಿದರು.

ರೈತರ ಸಾಲ ವಸೂಲಾತಿ: ರೈತರಿಗೆ ನೀಡಿದ ಸಾಲದ ಹಣ ವಸೂಲಿ ಮಾಡುವಾಗ ತೀಕ್ಷ್ಣ ರೀತಿಯ ಕ್ರಮ ಬೇಡ, ಸಮಯ ನೀಡಿ ಸಹಾನುಭೂತಿಯಿಂದ ವರ್ತಿಸಿ. ರೈತರು ಯಾರೂ ಪಡೆದ ಸಾಲ ಮರು ಪಾವತಿ ಮಾಡದೆ ನುಣುಚಿಕೊಳ್ಳುವುದಿಲ್ಲ. ಸಮಯ ಸಂದರ್ಭ ನೋಡಿಕೊಂಡು ಕ್ರಮವಹಿಸಿ ಎಂದು ಜಿಲ್ಲಾಧಿಕಾರಿಗಳು ಬ್ಯಾಂಕ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಸರ್ಕಾರಿ ಯೋಜನೆಗಳು: ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಮ್ಮ ಇಲಾಖೆಗಳ ಮೂಲಕ ಜಾರಿಗೊಳಿಸಿರುವ ಹಲವು ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಬ್ಯಾಂಕುಗಳ ಪಾತ್ರ ಅತೀ ಮುಖ್ಯವಾಗಿದ್ದು, ಶಾಖಾ ವ್ಯವಸ್ಥಾಪಕರು ತಮ್ಮ ವಿವೇಚನೆ ಬಳಸಿ ಕೆಲಸ ನಿರ್ವಹಿಸಬೇಕು ಎಂದು ಇದೇ ಸಂದರ್ಭ ತಿಳಿಸಿದರು. ಬ್ಯಾಂಕ್ ಅಧಿಕಾರಿಗಳಾದ ಶಾಂತವೀರ, ಜಿ.ಜೆ.ಜೀವಿಕ್, ರಾಜೇಶ್‌ಕುಮಾರ್ ಚೌಧರಿ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕ್ ಮ್ಯಾನೇಜರ್‌ಗಳಿಗೆ ಶಿಕ್ಷಕರಿಂದ ಕನ್ನಡ ಭಾಷೆ ಕಲಿಕೆ ತರಬೇತಿ

ಮೈಸೂರು, ಮೇ 15(ಆರ್‌ಕೆ)– ರಾಷ್ಟ್ರೀಯ ಬ್ಯಾಂಕ್ ಶಾಖಾ ವ್ಯವಸ್ಥಾಪಕರಿಗೆ ಕನ್ನಡ ಭಾಷೆ ಕಲಿಸಲು ಶಾಲಾ ಶಿಕ್ಷಕರಿಂದ ತರಬೇತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮೈಸೂರು ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಯೋಜನೆಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉತ್ತರ ಭಾರತದ ರಾಜ್ಯಗಳಿಂದ ವರ್ಗವಾಗಿ ಬಂದಿರುವ ಬ್ಯಾಂಕ್ ಬ್ರಾಂಚ್ ಮ್ಯಾನೇಜರ್‌ಗಳಿಗೆ ಸ್ಥಳೀಯ ಭಾಷೆ ಗೊತ್ತಿಲ್ಲದ ಕಾರಣ ವ್ಯವಹರಿಸಲು ಕಷ್ಟವಾಗುತ್ತಿದೆಯಲ್ಲದೆ, ಶಾಖೆಗೆ ಬರುವ ಸ್ಥಳೀಯ ಗ್ರಾಹಕರು ಮಾತನಾಡುವ ಭಾಷೆ ತಿಳಿಯದೆ ಸಂವಹನದ ಸಮಸ್ಯೆ ಉಂಟಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದರು.

ಯಾವ ರಾಜ್ಯದಿಂದಲೇ ಬಂದಿರಲಿ ಮ್ಯಾನೇಜರ್, ಸಿಬ್ಬಂದಿಗೆ ಸ್ಥಳೀಯ ಕನ್ನಡ ಭಾಷೆ ಗೊತ್ತಿಲ್ಲದಿದ್ದರೆ ಪ್ರಗತಿ ಕುಂಠಿತವಾಗುತ್ತದೆ. ಗ್ರಾಹಕರೂ ಸಹ ಪರದಾಡುವಂತಾಗುತ್ತದೆ. ಭಾಷೆ ತಿಳಿಯದ ಕಾರಣ ಅಧಿಕಾರಿಗಳು ಬ್ಯಾಂಕ್‌ಗೆ ಬರುವ ಗ್ರಾಹಕ ಸಹಕರಿಸದೇ ಗೊಂದಲದ ಪರಿಸ್ಥಿತಿ ಉಂಟಾಗುತ್ತಿದೆ. ಅದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ನುಡಿದರು.

ಹೊರ ರಾಜ್ಯದಿಂದ ಬಂದವರಿಗೆ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕರು ಮತ್ತು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜವಾಬ್ದಾರಿ ತೆಗೆದುಕೊಂಡು ಶಾಲಾ ಶಿಕ್ಷಕರ ಮೂಲಕ ಕನ್ನಡ ಭಾಷೆ ಕಲಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಅಧಿಕಾರಿಗಳು ಸ್ಥಳೀಯ ಭಾಷೆ ಕಲಿತು ಗ್ರಾಹಕರ ಬೇಡಿಕೆ, ಭಾವನೆಗಳಿಗೆ ಸ್ಪಂದಿಸುವಂತೆ ಸಲಹೆ ನೀಡಿದರು.

ಮುಂದಿನ ಬ್ಯಾಂಕ್ ತ್ರೈಮಾಸಿಕ ಸಭೆಯನ್ನು ಕನ್ನಡದಲ್ಲೇ ನಡೆಸುತ್ತೇವೆ. ಅಷ್ಟರಲ್ಲಿ ಪ್ರತಿಯೊಬ್ಬರೂ ಸ್ಥಳೀಯ ಭಾಷೆ ತಿಳಿದುಕೊಂಡು ಬರುವಂತೆಯೂ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇದೇ ಸಂದರ್ಭ ತಾಕೀತು ಮಾಡಿದರು.

ಪರಿಷತ್ ಚುನಾವಣೆ ಮೈಸೂರು ವಿಭಾಗದಲ್ಲಿ ಬುಧವಾರ 9 ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಡಾ.ಈ.ಸಿ.ನಿಂಗರಾಜ್‌ಗೌಡ ಬುಧವಾರ ಮಧ್ಯಾಹ್ನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಪ್ರಾಂಶುಪಾಲ ವೈ.ಎಚ್.ಲೋಹಿತ್ ಕುಮಾರ್, ಬಿ.ಎನ್.ಸುರೇಶ್, ಡಿ.ಶ್ರೀಕಂಠೇಗೌಡ, ಎಂ.ಎಸ್.ಉಮಾಶಂಕರ ಆರಾಧ್ಯ ಉಪಸ್ಥಿತರಿದ್ದರು.

ಮೈಸೂರು, ಮೇ 15(ಎಸ್‌ಬಿಡಿ)– ಮೈಸೂರು ವಿಭಾಗದ ಮೂರು ಕ್ಷೇತ್ರಗಳಿಂದ ವಿಧಾನಪರಿಷತ್ ಚುನಾವಣೆಗೆ ಬುಧವಾರ ಒಟ್ಟು 9 ಅಭ್ಯರ್ಥಿಗಳು ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ರಾಜ್ಯ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಮೈಸೂರಿನ ಈ.ಸಿ.ಲಿಂಗರಾಜ್‌ಗೌಡ, ನಾಮಪತ್ರ ಸಲ್ಲಿಸಿದ್ದು ಆದರೆ ಪಕ್ಷದ ಬಿ ಫಾರಂ ಲಗತ್ತಿಸಿಲ್ಲದ ಕಾರಣ ಗುರುವಾರ ಮತ್ತೊಂದು ಪ್ರತಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ರಾಜ್ಯ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಗಳಾಗಿ ಬೆಂಗಳೂರಿನ ಎಂ.ಸತೀಶ್ ಕಾರಂತ್, ಮಂಗಳೂರಿನ ಡಾ.ಎಸ್.ಆರ್.ಹರೀಶ್ ಆಚಾರ್ಯ, ಶಿವಮೊಗ್ಗದ ಹೆಚ್.ಟಿ.ಅರುಣ್ ಹಾಗೂ ಎಂ.ರಮೇಶ, ನೈರುತ್ಯ ಪದವೀಧರರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಗಳಾಗಿ ಶಿವಮೊಗ್ಗದ ಎಸ್.ಪಿ.ದಿನೇಶ್, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದ ಬಿ.ಮಹಮ್ಮದ್, ಮಂಗಳೂರಿನ ಶೇಖ್ ಬಾವಾ ಮಂಗಳೂರು ಹಾಗೂ ಶಿವಮೊಗ್ಗದ ಶಹರಾಜ್ ಮುಜಾಹಿದ್ ಸಿದ್ದಿಕಿ ಉಮೇದು ವಾರಿಕೆ ಸಲ್ಲಿಸಿದ್ದಾರೆ.

ಈವರೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಾಲ್ವರು, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ 8 ಹಾಗೂ ನೈರುತ್ಯ ಪದವೀಧರ ಕ್ಷೇತ್ರದಿಂದ 6 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದಂತಾಗಿದೆ. ಗುರುವಾರ ನಾಮಪತ್ರ ಸಲ್ಲಿಕೆಗೆ ಕಡೇ ದಿನವಾಗಿದೆ.

ಇಂದು ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ನಾಮಪತ್ರ ಸಲ್ಲಿಕೆ; ಬೆಳಗ್ಗೆಯೇ ಬಿಜೆಪಿ ಮುಖಂಡರ ಸಭೆ

ಮೈಸೂರು, ಮೇ 15(ಎಸ್‌ಬಿಡಿ)– ವಿಧಾನಪರಿಷತ್ ಚುನಾವಣೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ–ಜೆಡಿಎಸ್ ಮೈತ್ರಿಯ ಎನ್‌ಡಿಎ ಅಭ್ಯರ್ಥಿಯಾಗಿ ಕೆ. ವಿವೇಕಾನಂದ ನಾಮಪತ್ರ ಸಲ್ಲಿಸಲಿರುವ ಹಿನ್ನೆಲೆಯಲ್ಲಿ ಗುರುವಾರ ಬಿಜೆಪಿ ಮುಖಂಡರ ಸಭೆ ಕರೆಯಲಾಗಿದೆ.

ಕೆ.ವಿವೇಕಾನಂದ ಗುರುವಾರ ಬೆಳಗ್ಗೆ 11ಕ್ಕೆ ನಾಮಪತ್ರ ಸಲ್ಲಿಸಲಿದ್ದು, ಅದಕ್ಕೂ ಮುನ್ನ 10.30ಕ್ಕೆ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಬಿಜೆಪಿ ಮುಖಂಡರ ಸಭೆ ನಡೆಯಲಿದ್ದು, ವಿಪಕ್ಷ ನಾಯಕ ಆರ್.ಅಶೋಕ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸೇರಿದಂತೆ ಪಕ್ಷದ ಎಲ್ಲಾ ಪದಾಧಿಕಾರಿಗಳು ಹಾಗೂ ಮುಖಂಡರು ಭಾಗವಹಿಸಲಿದ್ದಾರೆ.

ಬಸ್ ಸೀಟಿಗಾಗಿ ಚಪ್ಪಲಿಯಲ್ಲಿ ಬಡಿದಾಟ; ಮಹಿಳೆಯರ ರಂಪಾಟ

ಬೀದರ್, ಮೇ 15– ಬಸ್ ಸೀಟಿಗಾಗಿ ಇಬ್ಬರು ಮಹಿಳೆಯರು ಪರಸ್ಪರ ಚಪ್ಪಲಿಯಿಂದ ಹೊಡೆದಾಡಿಕೊಂಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಬೀದರ್‌ನಿಂದ ಕಲಬುರಗಿ ಬಸ್‌ನಲ್ಲಿಇಬ್ಬರು ಶಕ್ತಿ ಯೋಜನೆ ಅಡಿ ಉಚಿತ ಟಿಕೆಟ್ ಪಡೆದ ಬಳಿಕ ಮಹಿಳೆಯರು ಕಿತ್ತಾಟ ನಡೆಸಿದ್ದಾರೆ. ಓರ್ವ ಮಹಿಳೆ, ಸೀಟು ಬಿಡು, ಇದು ನನ್ನದು ಎಂದು ಹೇಳಿದ್ದರೆ ಮತ್ತೊಬ್ಬಳು, ನಾನು ಸೀಟ್ ಬಿಡಲ್ಲ. ಏನ್ ಮಾಡ್ತಿ ಎಂದು ಪ್ರಶ್ನಿಸಿದ್ದಾಳೆ. ಇಬ್ಬರು ಪರಸ್ಪರ ಮಾತಿನಲ್ಲಿ ಜಗಳ ಮಾಡುತ್ತಿದ್ದರು. ಗಲಾಟೆ ಜೋರಾಗುತ್ತಿದ್ದಂತೆ ಓರ್ವ ಮಹಿಳೆ ತನ್ನ ಚಪ್ಪಲಿ ತೆಗೆದು ಜಗಳ ಮಾಡುತ್ತಿದ್ದ ಮಹಿಳೆ ಹೊಡೆದಿದ್ದಾಳೆ. ಚಪ್ಪಲಿ ಹಲ್ಲೆ ಬಳಿಕ ಮೈಮೇಲೆ ಹಾಕಿದ ಬಟ್ಟೆ ಹಿಡಿದು ಮಹಿಳೆಯರು ಎಳೆದಾಡಿಕೊಂಡಿದ್ದಾರೆ.

ನಗರ ಪ್ರದೇಶದ ಹಲವು ಮಕ್ಕಳಿಗೆ ಪ್ರಕೃತಿಯ ಅರಿವಿಲ್ಲ

ಸಾಹಿತಿ ಬನ್ನೂರು ರಾಜು ವಿಷಾದ



ಮೈಸೂರು, ಮೇ 15(ಎಸ್‌ಬಿಡಿ)– ಮಕ್ಕಳಲ್ಲಿ ಕ್ರಿಯಾಶೀಲತೆ ಹಾಗೂ ಸೃಜನಶೀಲತೆ ಬೆಳೆಸುವ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಿಸಿದರು.

ಮೈಸೂರಿನ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಡಾ.ನಾ.ಸು.ಹರ್ಡೀಕರ್ ಭಾರತ ಸೇವಾದಳ ಪ್ರೌಢಶಾಲೆ ಸಹಯೋಗದಲ್ಲಿ ಕನಕದಾಸ ನಗರದ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಆವರಣದಲ್ಲಿ ಬುಧವಾರ ನಡೆದ ಚಿಣ್ಣರ ಚಿತ್ತಾರ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ವಿಕಸನ ಅತ್ಯವಶ್ಯ. ಇದು ತರಗತಿಗಳಿಂದ ಮಾತ್ರ ಖಂಡಿತ ಸಿಗಲಾರದು. ಇದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು. ಇಂದಿನ ಶಿಕ್ಷಣ, ವಿಷಯ, ವಿಚಾರ, ಆಟ, ಪಾಠ, ಸರ್ಕಾರದ ನೀತಿ–ನಿಯಮ ಯಾವುದೂ ಹಿಂದಿನಂತಿಲ್ಲ. ಪೋಷಕರು ಹಾಗೂ ಶಿಕ್ಷಕರ ಮನಃಸ್ಥಿತಿಯೂ ಬದಲಾಗಿದೆ. ನಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್, ಐಎಎಸ್, ಐಪಿಎಸ್ ಅಧಿಕಾರಿಗಳಾಗಬೇಕೆಂಬ ನಿರೀಕ್ಷೆಯಲ್ಲಿ ಅಂಕಗಳ ಬೆನ್ನತ್ತಿದ್ದಾರೆ. ಮಕ್ಕಳ ಭವಿಷ್ಯವನ್ನು ಅವರು ತೆಗೆಯುವ ಅಂಕಗಳು ನಿರ್ಧರಿಸುವಂತಾಗಿದೆ. ಇದರಿಂದ ನಗರ ಪ್ರದೇಶದ ಬಹುತೇಕ ಮಕ್ಕಳಿಗೆ ತಾವು ಬದುಕುವ ಪ್ರಕೃತಿಯ ಬಗ್ಗೆಯೂ ಅರಿವಿಲ್ಲ. ಕನಿಷ್ಠ ತಾವು ಸೇವಿಸುವ ಅನ್ನ, ಕಾಳು, ತರಕಾರಿ, ಸೊಪ್ಪು, ಹಾಲು, ಮೊಸರು, ಮೊಟ್ಟೆ, ಮಾಂಸ, ಹಣ್ಣಿನ ಬಗ್ಗೆಯೂ ತಿಳಿದಿರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪೋಷಕರು ತಮ್ಮ ಮಕ್ಕಳನ್ನು ಅವರ ಪಾದಗಳಿಗೆ ಮಣ್ಣು ತಾಗದಂತೆ ಬೆಳೆಸುತ್ತಿದ್ದಾರೆ. ಒಟ್ಟಾರೆ ಪ್ರಕೃತಿಯಿಂದಲೇ ದೂರವಿಡುತ್ತಾರೆ. ನಮ್ಮ ಮಕ್ಕಳು ಹೆಚ್ಚು ಅಂಕ ಗಳಿಸಬೇಕು ಎಂಬ ಆಸೆ ಎಲ್ಲಾ ಪೋಷಕರಲ್ಲೂ ಸಹಜವಾಗಿ ಇರುತ್ತದೆ. ಆದರೂ ಶಿಕ್ಷಣದ ಜೊತೆಗೆ ತಾವು ಬದುಕುವ ಪ್ರಕೃತಿ, ಸಮಾಜದ ಬಗ್ಗೆಯೂ ಮಕ್ಕಳಿಗೆ ತಿಳಿಸಿಕೊಡಬೇಕು. ಪ್ರಕೃತಿ ಮಡಿಲಲ್ಲಿ, ಸಂತಸದಿಂದ ಕಾಲ ಕಳೆಯಲು ಅವಕಾಶ ಕಲ್ಪಿಸಿಕೊಡಬೇಕು. ಈ ನಿಟ್ಟಿನಲ್ಲಿ ಬೇಸಿಗೆ ಶಿಬಿರಗಳು ಸಹಕಾರಿಯಾಗಿರುವುದು ಸಮಾಧಾನದ ಸಂಗತಿ ಎಂದರು.

ಮಕ್ಕಳ ಬಗ್ಗೆ ಎಚ್ಚರವಿರಲಿ: ರಂಗಕರ್ಮಿ ಮೈಮ್ ರಮೇಶ್ ಮಾತನಾಡಿ, ನಮ್ಮಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರ ನಶಿಸಿ ಹೋಗುತ್ತಿದೆ. ಇಂತಹ ಕಾಲಘಟ್ಟದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸುವುದೇ ಸವಾಲಾಗಿ ಪರಿಣಮಿಸಿದೆ. ಪೋಷಕರು ಮಕ್ಕಳನ್ನು ಬಹಳ ಜಾಗೃತಿಯಿಂದ, ಬೆಳೆಸಬೇಕಾಗಿದೆ. ಮಹಾತ್ಮ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್, ಕ್ರಾಂತಿಕಾರಿ ಬಸವಣ್ಣನವರಂತಹ ಜೀವನಗಾಥೆಯನ್ನು ಮಕ್ಕಳಿಗೆ ತಿಳಿಸಿ, ಉತ್ತಮ ಮೌಲ್ಯಗಳನ್ನು ಬಿತ್ತಬೇಕಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಜ್ಞಾ ಶೈಕ್ಷಣಿಕ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ಧರಾಜು, ಭಾರತ ಸೇವಾದಳದ ಕಾರ್ಯದರ್ಶಿ ಬೀರಿಹುಂಡಿ ಬಸವಣ್ಣ, ಶಾಲಾ ಸಲಹಾ ಸಮಿತಿ ಅಧ್ಯಕ್ಷ ಡಿ.ಆರ್.ಶೇಷಾಚಲ, ವಲಯ ಸಂಘಟಕ ಕೆ.ಈರಯ್ಯ, ಪ್ರಜ್ಞಾ ಶೈಕ್ಷಣಿಕ ಟ್ರಸ್ಟ್ ಖಜಾಂಚಿಯಾದ ಉಪನ್ಯಾಸಕ ಡಾ.ತಿರುಮಲೇಶ್, ಸಂಗೀತ ಶಿಕ್ಷಕ ನವೀನ್, ಮಹಾದೇವ್ ಮತ್ತಿತರರು ಉಪಸ್ಥಿತರಿದ್ದರು.

ಸಿಎಎ ಅನುಷ್ಠಾನಕ್ಕೆ ಮೊದಲ ಹೆಜ್ಜೆ: 14 ಮಂದಿಗೆ ಭಾರತೀಯ ಪೌರತ್ವ

ನವದೆಹಲಿ, ಮೇ 15– ಕೇಂದ್ರ ಗೃಹ ಸಚಿವಾಲಯವು ಸಿಎಎ ಅಡಿಯಲ್ಲಿ ಪೌರತ್ವ ಪ್ರಮಾಣಪತ್ರಗಳ ಮೊದಲ ಸೆಟ್ ಅನ್ನು ನೀಡಿದೆ. ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು 14 ಜನರಿಗೆ ಭಾರತೀಯ ಪೌರತ್ವವನ್ನು ನೀಡಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ನವದೆಹಲಿಯಲ್ಲಿ ಮೊದಲ 14 ಜನರಿಗೆ ಸಿಎಎ ಅಡಿಯಲ್ಲಿ ಪೌರತ್ವ ಪ್ರಮಾಣಪತ್ರಗಳನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳು, ನಿರ್ದೇಶಕರು (ಐಬಿ), ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ ಪೌರತ್ವ ಪ್ರಮಾಣಪತ್ರಗಳ ಮೊದಲ ಸೆಟ್ ಅನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ 14 ಮಂದಿಗೆ ಪೌರತ್ವ ಪ್ರಮಾಣ ಪತ್ರ ವಿತರಿಸಲಾಗಿದೆ. ಸಿಎಎ ಪ್ರಮಾಣಪತ್ರವನ್ನು ನೀಡಿದ ನಂತರ, ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದಿಂದ ಕಿರುಕುಳಕ್ಕೊಳಗಾದ ಮುಸ್ಲಿಮೇತರ ವಲಸಿಗರಿಗೆ ಭಾರತೀಯ ರಾಷ್ಟ್ರೀಯತೆಯನ್ನು ನೀಡುವ ಪ್ರಕ್ರಿಯೆಯು ಪ್ರಾರಂಭವಾಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ: ಅಭ್ಯರ್ಥಿ ಕಣಕ್ಕಿಳಿಸಲು ಖಾಸಗಿ ಶಾಲಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಚಿಂತನೆ

ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಮಾಹಿತಿ



ಮೈಸೂರಿನ ವಿಜಯನಗರ ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ ಶಾಲೆಯಲ್ಲಿರುವ ಸಿಐಎಸ್‌ಪಿಎಂಎಂ ಕಚೇರಿಯಲ್ಲಿ ಬುಧವಾರ ಆಡಳಿತ ಮಂಡಳಿ ಸಭೆ ನಡೆಯಿತು.

ಮೈಸೂರು,ಮೇ 15(ಪಿಎಂ)– ಸಿಬಿಎಸ್‌ಇ, ಐಸಿಎಸ್‌ಇ ಅಂಡ್ ಸ್ಟೇಟ್ ಪ್ರೈವೇಟ್ ಸ್ಕೂಲ್ಸ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಮೈಸೂರು (ಸಿಐಎಸ್‌ಪಿಎಂಎಂ) ಕಾರ್ಯದರ್ಶಿ ರಾಧಾಕೃಷ್ಣ ಅವರನ್ನು ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕಣಕ್ಕಿಳಿಸಲು ಅಸೋಸಿಯೇಷನ್ ಚಿಂತನೆ ನಡೆಸಿದೆ.

ಮೈಸೂರಿನ ವಿಜಯನಗರದ ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ ಶಾಲೆಯಲ್ಲಿರುವ ಅಸೋಸಿಯೇಷನ್ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಆಡಳಿತ ಮಂಡಳಿ ಸಭೆ ಬಳಿಕ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಈ ವಿಷಯ ತಿಳಿಸಿದರು.

ಹುಣಸೂರಿನ ಶಾಸ್ತ್ರೀ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿಯೂ ಆಗಿರುವ ರಾಧಾಕೃಷ್ಣ ಅವರನ್ನು ಕಣಕ್ಕಿಳಿಸಬೇಕೆಂಬ ಒತ್ತಾಯ ನಮ್ಮ ಅಸೋಸಿಯೇಷನ್ ಸದಸ್ಯರಿಂದ ವ್ಯಕ್ತವಾಗಿದೆ. ನಾಮಪತ್ರ ಸಲ್ಲಿಕೆಗೆ ನಾಳೆಯೇ (ಮೇ 16) ಕಡೆ ದಿನವಾದ ಕಾರಣ ಆದಷ್ಟು ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಿದ್ದೇವೆ. ಒಂದು ವೇಳೆ ಇದು ಸಾಧ್ಯವಾಗಲಿಲ್ಲವಾದರೆ ಶಾಲಾ ಶಿಕ್ಷಕರು, ಖಾಸಗಿ ಶಾಲೆಗಳು ಮತ್ತು ವಿದ್ಯಾರ್ಥಿಗಳ ಹಿತಕ್ಕಾಗಿ ಉತ್ತಮವಾಗಿ ಕೆಲಸ ಮಾಡುವ ಸ್ಪಷ್ಟ ಭರವಸೆ ನೀಡುವ ಅಭ್ಯರ್ಥಿಗೆ ಬೆಂಬಲ ನೀಡಲಿದ್ದೇವೆ. ಅಲ್ಲದೆ, ಚುನಾವಣೆಯಲ್ಲಿ ಬೆಂಬಲ ನೀಡುವ ಸಂಬಂಧ ಭಾನುವಾರ ಸರ್ವ ಸದಸ್ಯರ ಸಭೆ ಕರೆಯಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಚಾಮರಾಜನಗರ, ಮಂಡ್ಯ, ಹಾಸನ, ಮೈಸೂರು, ಕೊಡಗು ಜಿಲ್ಲೆಗಳ ವ್ಯಾಪ್ತಿಯನ್ನು ನಮ್ಮ ಸಂಘಟನೆ ಹೊಂದಿದೆ. ಸುಮಾರು 300 ಖಾಸಗಿ ಶಾಲೆಗಳು ನಮ್ಮ ಸಂಘಟನೆಯಲ್ಲಿ ಸೇರಿವೆ. ಈ ಎಲ್ಲಾ ಶಾಲೆಗಳು ಅನುದಾನರಹಿತವೇ ಆಗಿವೆ. ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಪುನರ್ ಪ್ರಾರಂಭಿಸುವಾಗ, ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ಆಯಾಯ ಸ್ಥಳೀಯ ಸಂಸ್ಥೆಗಳು ಶಾಲೆಗಳಿಗೆ ನೀರು ಪೂರೈಕೆಯಲ್ಲಿ ಸಮರ್ಪಕ ವ್ಯವಸ್ಥೆ ಮಾಡಬೇಕು. ನೀರಿನ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸುವ ವಿಚಾರವೂ ಸಭೆಯಲ್ಲಿ ಚರ್ಚೆಯಾಗಿದೆ ಎಂದರು.

ಆರ್‌ಟಿಇ ಅನುದಾನ ಬಂದಿಲ್ಲ: ಆರ್‌ಟಿಇ ಮೂಲಕ ನಮ್ಮ ಶಾಲೆಗಳಲ್ಲಿ ಪ್ರವೇಶ ಪಡೆದು ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುವುದಕ್ಕೆ ಎರಡನೇ ಕಂತಿನ ಹಣ ಸರ್ಕಾರದಿಂದ ಬಿಡುಗಡೆಯಾಗಿಲ್ಲ. 2023–24ನೇ ಶೈಕ್ಷಣಿಕ ಸಾಲಿನ ಈ ಅನುದಾನವನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಸರ್ಕಾರ ಬೇರೆ ಎಲ್ಲದಕ್ಕೂ ಹಣ ವೆಚ್ಚ ಮಾಡುತ್ತಿದೆ. ಆದರೆ ಶೈಕ್ಷಣಿಕ ವರ್ಷವೇ ಪೂರ್ಣಗೊಂಡರೂ ಆರ್‌ಟಿಇ ಅಡಿಯ ಹಣ ಬಿಡುಗಡೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶೇ.8ರಷ್ಟು ಫಲಿತಾಂಶ ಇಳಿಕೆ: ರಾಜ್ಯ ಸರ್ಕಾರ ಪಠ್ಯಕ್ರಮದ ಶಾಲೆಗಳಲ್ಲಿ ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಶೇ.8ರಷ್ಟು ಇಳಿಕೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಬೋಧಕರ ಸಂಖ್ಯೆ ಕಡಿಮೆ ಇರುವುದೇ ಇದಕ್ಕೆ ಕಾರಣವೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಖಾಸಗಿ ಶಾಲೆಗಳ ಫಲಿತಾಂಶ ಉತ್ತಮವಾಗಿದ್ದು, ಸರ್ಕಾರಿ ಶಾಲೆಗಳ ಬೋಧನಾ ಗುಣಮಟ್ಟ ಹೆಚ್ಚಿಸುವಂತೆ ಸರ್ಕಾರದ ಗಮನ ಸೆಳೆಯಲು ನಿರ್ಣಯಿಸಲಾಯಿತು ಎಂದು ತಿಳಿಸಿದರು. ಅಸೋಸಿಯೇಷನ್ ಅಧ್ಯಕ್ಷ ವಿ.ವೆಂಕಟೇಶ್, ಉಪಾಧ್ಯಕ್ಷ ರವೀಂದ್ರಸ್ವಾಮಿ, ಕಾರ್ಯದರ್ಶಿ ರಾಧಾಕೃಷ್ಣ, ಖಜಾಂಚಿ ಸ್ವರೂಪಿಣಿ, ಜಂಟಿ ಕಾರ್ಯದರ್ಶಿ ಶ್ರೀವತ್ಸ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಗುರುವಾರ 16 ಮೇ 2024

ಪೂರ್ವ ಮುಂಗಾರು; ನದಿಗಳಿಗೆ ಜೀವಕಳೆ

ಮಡಿಕೇರಿ, ಮೇ 15–ಕೊಡಗಿನ ವಿವಿಧೆಡೆ ಕೆಲ ದಿನಗಳಿಂದ ಸುರಿದ ಮಳೆಯಿಂದಾಗಿ ಭೂಮಿಗೆ ತಂಪೆರೆದಂತಾಗಿದ್ದು, ನದಿಗಳಿಗೆ ಪೂರ್ವ ಮುಂಗಾರಿನಿಂದ ಜೀವಕಳೆ ಮೂಡಿದೆ.

ಬತ್ತಿ ಬರಡಾಗಿ ಒಡಲಾಳದಲ್ಲಿ ಹುದುಗಿದ್ದ ಬಂಡೆಗಳು ಕಾಣುತ್ತಿದ್ದ ನದಿಗಳಲ್ಲಿ ನೀರಿನ ಮಟ್ಟ ತುಸು ಏರಿಕೆಯಾಗಿದೆ. ಕೊಡಗಿನಾದ್ಯಂತ ಪೂರ್ವ ಮುಂಗಾರು ಕೆಲ ದಿನಗಳಿಂದ ಚುರುಕಾಗುವ ಮೂಲಕ, ಮಳೆಯ ಅಭಾವದಿಂದ ನಿಧಾನವಾಗಿ ಕಾಣಿಸಿಕೊಂಡಿದ್ದ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ತಾಪಮಾನ ಹೆಚ್ಚಳಕ್ಕೆ ಕಡಿವಾಣ ಬಿದ್ದಂತಾಗಿದೆ.

ಭಾಗಮಂಡಲ, ಕಕ್ಕಬ್ಬೆ, ನಾಪೋಕ್ಲು, ಮೂರ್ನಾಡು, ವಿರಾಜಪೇಟೆ, ಕದನೂರು, ನಂಜರಾಯಪಟ್ಟಣ, ಗುಡ್ಡೆಹೊಸೂರು ಸೇರಿದಂತೆ ಕಾವೇರಿ ನದಿ ಹರಿಯುವ ಪ್ರದೇಶಗಳಲ್ಲೂ ಉತ್ತಮ ಮಳೆಯಾಗಿದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ಕುಶಾಲನಗರ ತಾಲೂಕಿನ ಗುಡ್ಡೆಹೊಸೂರು ಬಳಿಯ ತೂಗು ಸೇತುವೆಯ ಬಳಿ ಕಾವೇರಿ ನದಿಯಲ್ಲಿ 4 ಅಡಿಗಳಷ್ಟು ನೀರಿನ ಮಟ್ಟ ಏರಿಕೆಯಾಗಿದೆ.

ಸಂಪೂರ್ಣವಾಗಿ ಹರಿಯುವುದನ್ನೇ ನಿಲ್ಲಿಸಿ ಆತಂಕ ಮೂಡಿಸಿದ್ದ ಕಾವೇರಿ ನದಿಯಲ್ಲಿ ಇದೀಗ ನೀರು ಕಾಣುತ್ತಿರುವುದು ಆಶಾದಾಯಕ. ಇದು ಮುಂಗಾರಿನ ಶುಭ ಸೂಚನೆಯಾಗಿದೆ ಎಂದು ಭಾವಿಸಲಾಗುತ್ತಿದೆ. ಅದರೊಂದಿಗೆ ಬಹು ಅಪರೂಪದ ವಿನಾಶದ ಅಂಚಿನಲ್ಲಿರುವ ಮಹಶೀರ್ ಮೀನಿನ ಸಂತತಿ ಹೆಚ್ಚಿರುವ ಕಾವೇರಿ ನದಿ ಪಾತ್ರದಲ್ಲಿ ನೀರಿನ ಏರಿಕೆಯಿಂದ ಜಲಚರಗಳು ಕೂಡ ಚೇತರಿಸಿಕೊಳ್ಳುತ್ತಿವೆ.

ಬದಲಾದ ಮಳೆಯ ಚಿತ್ರಣ: ಕೊಡಗು ಜಿಲ್ಲೆಯಲ್ಲಿ 2018ರಲ್ಲಿ ಸುರಿದ ಭಾರಿ ಮಳೆ, ಅದರಿಂದ ಸೃಷ್ಟಿಯಾದ ವಿಕೋಪಗಳ ಬಳಿಕ ಜಿಲ್ಲೆಯ ಒಟ್ಟು ಮುಂಗಾರಿನ ಚಿತ್ರಣವೇ ಬದಲಾಗಿದೆ. ವಿಕೋಪ ಸಂಭವಿಸಿದ ನಂತರದ ವರ್ಷಗಳಲ್ಲಿ ಜೂನ್ ಬದಲಾಗಿ ಜುಲೈ, ಆಗಸ್ಟ್‌ನಲ್ಲಿ ಅತಿ ಹೆಚ್ಚಿನ ಮಳೆಯನ್ನು ಕೊಡಗು ಜಿಲ್ಲೆ ಕಾಣುತ್ತಿದೆ.

ಜಿಲ್ಲೆಯಲ್ಲಿ 2016ರಲ್ಲಿ 2057 ಮಿ.ಮೀ. ಮಳೆಯಾಗಿದ್ದರೆ, 2017ರಲ್ಲಿ 2305, 2018ರಲ್ಲಿ ದಾಖಲೆಯ 4441 ಮಿ.ಮೀ., 2019ರಲ್ಲಿ 3067, 2020ರಲ್ಲಿ 2483 ಮಿಮೀ ಮಳೆ ಸುರಿದಿದೆ. 2021ರಲ್ಲಿ 2656, 2022ರಲ್ಲಿ 2365 ಮಿ.ಮೀ. ಮಳೆಯಾಗಿದೆ. ಹವಾಮಾನ ಇಲಾಖೆ ಮೇ 21ರವರೆಗೆ ನೀಡಿರುವ ಮುನ್ಸೂಚನೆಯಂತೆ ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಮುಂದುವರಿಯುವ ಸಾಧ್ಯತೆಗಳು ಹೆಚ್ಚಾಗಿದೆ. ಅದರಲ್ಲೂ ಮೇ 20 ಮತ್ತು 21ರಂದು ರಾಜ್ಯದ ದಕ್ಷಿಣ ಒಳನಾಡಿನ ಭಾಗಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಗಳಿವೆ. 2018, 2019 ಮತ್ತು 20220 ಈ ಮೂರು ವರ್ಷಗಳ ಅವಧಿಯಲ್ಲಿ ಮಡಿಕೇರಿ ತಾಲೂಕು, ವಿರಾಜಪೇಟೆಯ ತೋರ ಗ್ರಾಮ, ಬ್ರಹ್ಮಗಿರಿಯ ಬೆಟ್ಟದ ಸಾಲಿನ ಗಜಗಿರಿಬೆಟ್ಟ ಕುಸಿದು ಹಲವು ಮಾನವ ಜೀವ ಹಾನಿ ಘಟನೆಗಳು ಸಂಭವಿಸಿತ್ತು.



ಕುಶಾಲನಗರ ತಾಲೂಕಿನ ಗುಡ್ಡೆಹೊಸೂರು ಬಳಿಯ ತೂಗು ಸೇತುವೆಯ ಬಳಿ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿರುವುದು.

ವಾಡಿಕೆಯ ಮಳೆ ಇಲ್ಲ

ಮುಂಗಾರಿನ ಕೊರತೆ ಬೆನ್ನಲ್ಲೆ ಪ್ರಸಕ್ತ ಸಾಲಿನ ಜನವರಿ, ಫೆಬ್ರವರಿ, ಮಾರ್ಚ್‌ನಲ್ಲಿ ವಾಡಿಕೆಯ ಮಳೆಯಾಗಿಲ್ಲ. ಇದರಿಂದ ಜಿಲ್ಲೆಯ ವಿವಿಧೆಡೆಗಳಲ್ಲಿ ಕಾಫಿ ತೋಟಗಳು ನೀರಿಲ್ಲದೆ ಒಣಗಿ ಹೋದರೆ, ಇದೇ ಪ್ರಥಮ ಎಂಬಂತೆ ಜೀವನದಿ ಕಾವೇರಿಯ ಒಡಲು ಬತ್ತಿ ಬರಿದಾಯಿತು. ಕಳೆದ ಸಾಲಿನ ಮುಂಗಾರಿನ ಅವಧಿಯಲ್ಲಿ ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲೂಕು ವ್ಯಾಪ್ತಿಯಲ್ಲಿ ವಾಡಿಕೆಗಿಂತಲೂ ತೀರ ಅಲ್ಪ ಪ್ರಮಾಣದ ಅಂದರೆ, ಸುಮಾರು 800 ಮಿಮೀ ನಿಂದ 900 ಮಿಮೀ ಮಳೆಯಾಗುವ ಮೂಲಕ 'ಬರ'ದ ಛಾಯೆ ಕಾಣಿಸಿಕೊಂಡಿತ್ತು.

ಉಪಟಳ ನೀಡುತ್ತಿದ್ದ ಕಾಡಾನೆ ಕೊನೆಗೂ ಸೆರೆ

ಅರಣ್ಯ ಇಲಾಖೆಯ ಹರಸಾಹಸದ ಕಾರ್ಯಾಚರಣೆ ಯಶಸ್ವಿ

ಸಿದ್ದಾಪುರ, ಮೇ 15–ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಕೃಷಿ ಫಸಲು ನಾಶಗೊಳಿಸಿ, ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದ ಗಂಡಾನೆಯನ್ನು ಕೊನೆಗೂ ಅರಣ್ಯಾಧಿಕರಿಗಳು ಹಾಗೂ ಸಿಬ್ಬಂದಿ ಕರಡಿಗೋಡು ಮಾರ್ಗದ ಚಿಕ್ಕನಹಳ್ಳಿಯ ತೋಟದಲ್ಲಿ ಸೆರೆ ಹಿಡಿದಿದ್ದಾರೆ.

ಕಾರ್ಯಾಚರಣೆ ಆರಂಭಿಸಿದ 2ನೇ ದಿನವಾದ ಬುಧವಾರ ಅರಣ್ಯ ಸಿಬ್ಬಂದಿಗೆ ಪಾಲಿಬೆಟ್ಟ ಸಮೀಪದ ಎಮ್ಮೆಗುಂಡಿ ಕಾಫಿ ತೋಟದಲ್ಲಿ 30 ವರ್ಷದ ಕಾಡಾನೆ ಪ್ರತ್ಯಕ್ಷವಾಗಿದೆ. ಮತ್ತಿಗೋಡು ಹಾಗೂ ದುಬಾರೆ ಶಿಬಿರದ ಅಭಿಮನ್ಯು, ಭೀಮ, ಮಹೇಂದ್ರ, ಹರ್ಷ, ಧನಂಜಯ, ಅಶ್ವತ್ಥಾಮ ಸಾಕಾನೆಗಳೊಂದಿಗೆ ವನ್ಯಜೀವಿ ವೈದ್ಯರಾದ ರಮೇಶ್, ಚಿಟ್ಟಿಯಪ್ಪ, ಶಾರ್ಪ್ ಶೂಟರ್ ರಂಜನ್ ಹಾಗೂ ಸಿಬ್ಬಂದಿ ತಂಡ ಕಾಡಾನೆ ಸೆರೆಗೆ ಮುಂದಾದ್ದರು. ಈ ವೇಳೆ ಕಾಫಿ ತೋಟದಿಂದ ಕಾಡಾನೆ ಕಾಲ್ಕಿತ್ತಿದೆ. ಬಳಿಕ ಸಿದ್ದಾಪುರ ತೋಟ, ಘಟ್ಟದಳ್ಳ, ಕರಡಿಗೋಡು ಮಾರ್ಗವಾಗಿ ಚಿಕ್ಕನಹಳ್ಳಿಯ ಫಯಾಜ್ ಅವರ ತೋಟದಲ್ಲಿ ಪತ್ತೆಯಾಗಿದೆ.

ನಂತರ ಸುಮಾರು 10 ಕಿಮೀ ನಷ್ಟು ದೂರದ ಕಾಫಿ ತೋಟದ ಕಡಿದಾದ ರಸ್ತೆಯಲ್ಲೇ ಹಿಂಬಾಲಿಸಿದ ಅರಣ್ಯ ಸಿಬ್ಬಂದಿ ಕಾಡಾನೆಯನ್ನು ಚಿಕ್ಕನಹಳ್ಳಿ ಕಾಫಿ ತೋಟದಲ್ಲಿ ಸಾಕಾನೆಗಳೊಂದಿಗೆ ಸುತ್ತುವರೆದರು. ಶಾರ್ಪ್ ಶೂಟರ್ ರುಜನ್ ಬಂದೂಕಿನಿಂದ ಅರವಳಿಕೆ ಮದ್ದು ನೀಡಿದರು. ಆದರೂ ಸ್ಥಳದಿಂದ ಕಾಲ್ಕಿತ್ತ ಕಾಡಾನೆ ಕಿಮೀನಷ್ಟು ಓಡಿ ಹೋಗಿ ಫಯಾಜ್ ಗೇಟ್‌ನಲ್ಲಿ ಕುಸಿದು ಬಿದ್ದಿದೆ. ಹಿಂಬಾಲಿಸಿದ ಅರಣ್ಯ ಸಿಬ್ಬಂದಿ ಕಾಡಾನೆ ಕಾಲಿಗೆ ಹಗ್ಗ ಬಿಗಿದರು. ಬಳಿಕ ವನ್ಯಜೀವಿ ವೈದ್ಯರಾದ ಡಾ.ರಮೇಶ್ ಹಾಗೂ ಚಿಟ್ಟಿಯಪ್ಪ ಕಾಡಾನೆಗೆ ಚಿಕಿತ್ಸೆ ನೀಡಿ ಆರೈಕೆ ಮಾಡಿದರು. ಚೇತರಿಸಿಕೊಂಡ ಕಾಡಾನೆಯನ್ನು ಸಾಕಾನೆಗಳ ಸಹಾಯದಿಂದ ಕಾಫಿ ತೋಟದಿಂದ ರಸ್ತೆಗೆ ಎಳೆದು ತಂದು ಜೆಸಿಬಿ ಮೂಲಕ ಲಾರಿಗೆ ಹತ್ತಿಸಲಾಯಿತು.

ವಿರಾಜಪೇಟೆ ಡಿಸಿಎಫ್ ಜಗನ್ನಾಥ್ ಮಾತನಾಡಿ, ಮನುಷ್ಯರ ಮೇಲೆ ದಾಳಿ ಮಾಡಿ ನಿರಂತರ ಉಪಟಳ ನೀಡುತ್ತಿದ್ದ ಕಾಡಾನೆಯನ್ನು ಹರಸಾಹಸದಿಂದ ಸೆರೆ ಹಿಡಿಯಲಾಗಿದೆ. 1 ತಿಂಗಳ ಹಿಂದೆಯೇ ಕಾಡಾನೆಯ ಗುರುತು ಪತ್ತೆ ಹಚ್ಚಿ, ಅದಕ್ಕೆ ದಕ್ಷ ಎಂದು ಹೆಸರಿಡಲಾಗಿತ್ತು. ಆನೆಯ ಬಗ್ಗೆ ಸಿಬ್ಬಂದಿ ನಿಗಾ ವಹಿಸಿದ್ದರು. ಚೀಫ್ ವೈಲ್ಡ್‌ಲೈಫ್ ಅಧಿಕಾರಿಗಳ ಆದೇಶದ ಮೇರೆಗೆ ಕಾಡಾನೆಗೆ ರೇಡಿಯೋ ಕಾಲರ್ ಅಳವಡಿಸಿ ನಾಗರಹೊಳೆ ವ್ಯಾಪ್ತಿಯ ಅಂತರ ಸಂತೆ ಅರಣ್ಯದಲ್ಲಿ ಬಿಡಲಾಗುವುದು ಎಂದರು.

ಎಸಿಎಫ್ ಗೋಪಾಲ್, ನೆಹ್ರು, ಆರ್‌ಎಫ್‌ಓ ಕಳ್ಳಿರ ಎಂ.ದೇವಯ್ಯ, ಗಂಗಾಧರ, ಡಿಆರ್‌ಎಫ್‌ಓ ಶ್ರೀನಿವಾಸ್, ಉಮಾಶಂಕರ್, ದೇವರಾಜ್ ಸೇರಿದಂತೆ ಆರ್‌ಆರ್‌ಟಿ ಸಿಬ್ಬಂದಿ ಹಾಗೂ ಮಾವುತರು, ಕಾವಡಿಗರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಸಿದ್ದಾಪುರದ ಚಿಕ್ಕನಹಳ್ಳಿಯ ತೋಟದಲ್ಲಿ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಸಾಕಾನೆಗಳೊಂದಿಗೆ ಕಾಡಾನೆ ಸೆರೆ ಹಿಡಿದಿರುವುದು.

ಇಂದು ಮೀನಾಳ ಮನೆಗೆ ಗೃಹ ಸಚಿವರ ಭೇಟಿ



ಮಡಿಕೇರಿ: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದ ಸಂಭ್ರಮದ ನಡುವೆಯೇ ಬರ್ಬರ ಹತ್ಯೆಗೀಡಾದ ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿ ಶಾಲಾ ವಿದ್ಯಾರ್ಥಿನಿ ಯು.ಎಸ್.ಮೀನಾ (16)ಳ ಕುಂಬಾರಗಡಿಗೆ ನಿವಾಸಕ್ಕೆ ಮೇ 16ರಂದು ಗೃಹ ಸಚಿವ ಡಾ.ಪರಮೇಶ್ವರ್ ಭೇಟಿ ನೀಡಲಿದ್ದಾರೆ.

ಬೆಳಗ್ಗೆ 10.30ಕ್ಕೆ ಸೂರ್ಲಬ್ಬಿ ಗ್ರಾಮಕ್ಕೆ ಆಗಮಿಸುವ ಸಚಿವರು, ಮೃತ ಬಾಲಕಿಯ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

ಮೇ 20, ಕುತ್ತುನಾಡ್ ಉರುಸ್ ನೇರ್ಚೆ

ಪೊನ್ನಂಪೇಟೆ: ಎಮ್ಮೆಮಾಡಿನ ಸೂಫಿ ಶಹೀದ್ ವಲಿಯುಲ್ಲಾ ಹೆಸರಿನಲ್ಲಿ ವರ್ಷಂಪ್ರತಿ ನಡೆಯುವ ಕುತ್ತುನಾಡ್ ಉರುಸ್ ನೇರ್ಚೆ ಮೇ 20ರಂದು ಬಿ.ಶೆಟ್ಟಿಗೇರಿ ಸಮೀಪದ ಕೊಂಗಣ ಗ್ರಾಮದ ಸೂಫಿ ಶಹೀದ್ ನೇರ್ಚೆ ಬಿಡಾರದ ಆವರಣದಲ್ಲಿ ಜರುಗಲಿದೆ.

ಹಿಂದೂ ಮತ್ತು ಮುಸ್ಲಿಂ ಸೌಹಾರ್ದತೆಯ ಪ್ರತೀಕವಾಗಿ ಶತಮಾನಗಳಿಂದ ಕುತ್ತುನಾಡ್ ಉರುಸ್ ನೇರ್ಚೆ ನಡೆಯುತ್ತಿದೆ. ಅಂದು ಬೆಳಗ್ಗೆ 8.30ಕ್ಕೆ ಕೊಂಗಣ ಗ್ರಾಮದ ಕರ್ತೂರ ಕುಟುಂಬದ ತಕ್ಕ ಮುಖ್ಯಸ್ಥರಾದ ಕೆ.ಕೆ.ದೇವಯ್ಯ ಮತ್ತು ಬೇಗೂರು–ಮಾಪಿಳ್ಳೆತೋಡು ಗ್ರಾಮದ ತಕ್ಕ ಮುಖ್ಯಸ್ಥರಾದ ಆಲೀರ ಎ.ಕುಟ್ಟಿಯಾಲಿ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ.

ಬಳಿಕ ಬೇಗೂರು–ಮಾಪಿಳ್ಳೆತೋಡು ಕಲ್ಲಾಯಿ ಜುಮಾ ಮಸೀದಿಯ ಖತೀಬರಾದ ಅಬ್ದುಲ್ ರಜಾಕ್ ಸಖಾಫಿ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಬೆಳಗ್ಗೆ 9ಕ್ಕೆ ಭಂಡಾರ ಜಮಾಯಿಸುವ ಕಾರ್ಯಕ್ರಮ, 10 ಗಂಟೆಗೆ ಹಾಲು–ಅನ್ನ ಪ್ರಸಾದ ವಿತರಣೆ, ಮಧ್ಯಾಹ್ನ 12 ಗಂಟೆಗೆ ಮೌಲೂದ್ ಪಾರಾಯಣ ನಂತರ ಹರಕೆ ವಸ್ತುಗಳ ಹರಾಜು ಪ್ರಕ್ರಿಯೆ ನಡೆಯಲಿದೆ. 2 ಗಂಟೆಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಅರಣ್ಯ ಭವನದ ಎದುರು ಬಿಜೆಪಿ ಪ್ರತಿಭಟನೆ

ಮಡಿಕೇರಿ, ಮೇ 15–ಕೊಡಗು ಜಿಲ್ಲೆಯಲ್ಲಿ ಮರಗಳ ಗಣತಿ ಕಾರ್ಯವನ್ನು ಅರಣ್ಯ ಇಲಾಖೆ ಮುಂದುವರೆಸಿದ್ದು, ಕೃಷಿಕ ವರ್ಗಕ್ಕೆ ಮಾರಕವಾಗಿರುವ ಈ ಆದೇಶವನ್ನು ಸರ್ಕಾರ ಹಿಂಪಡೆಯುವವರೆಗೂ ವಿವಿಧ ಹಂತಗಳಲ್ಲಿ ಹೋರಾಟ ರೂಪಿಸಲಾಗುವುದು ಎಂದು ಕೊಡಗು ಜಿಲ್ಲಾ ಬಿಜೆಪಿ ಎಚ್ಚರಿಸಿದೆ.

ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಖಾಸಗಿ ಮತ್ತು ಜಮ್ಮಾ ತೋಟಗಳ ಮರಗಳ ಗಣತಿ ಕಾರ್ಯ ಜಿಲ್ಲೆಗೆ ಮಾರಕವಾಗಿದೆ. ಗಣತಿ ಆದೇಶವನ್ನು ತಕ್ಷಣ ಹಿಂಪಡೆಯಬೇಕೆಂದು ಬೆಳೆಗಾರರ ಪರವಾಗಿ ಬಿಜೆಪಿ ಹಿಂದೆಯೇ ಆಗ್ರಹಿಸಿದ್ದರೂ ಸರ್ಕಾರ ಯಾವುದೇ ಸ್ಪಂದನೆ ನೀಡಿಲ್ಲ. ಆದ್ದರಿಂದ ಮೇ 17ರಂದು ಮಡಿಕೇರಿಯ ಅರಣ್ಯ ಭವನದ ಎದುರು ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿದೆ. ಬೆಳೆಗಾರರು, ಸಾರ್ವಜನಿಕರು ಹಾಗೂ ದೇವಾಲಯ ಸಮಿತಿಗಳ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜಿಲ್ಲೆಯ ಶಾಸಕರು ಮರಗಳ ಗಣತಿ ಕಾರ್ಯ ಮುಂದುವರೆಯುವುದಿಲ್ಲ ಎಂದು ಭರವಸೆ ನೀಡಿದ ಮರು ದಿನವೇ ಸಂಪಾಜೆ ಮತ್ತು ಚೆಂಬು ಭಾಗದಲ್ಲಿ ಅರಣ್ಯ ಸಿಬ್ಬಂದಿ ಸರ್ವೆ ನಡೆಸಿದ್ದಾರೆ. ಅಧಿಕಾರಿಗಳು ಶಾಸಕರ ಮಾತಿಗೆ ಗೌರವ ನೀಡುತ್ತಿಲ್ಲವೇ? ಅಥವಾ ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಕುರಿತು ಗಮನ ಸೆಳೆಯುವಲ್ಲಿ ಶಾಸಕರೇ ವಿಫಲರಾಗಿದ್ದಾರೆಯೇ ಎಂದು ತಿಳಿಯುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರದ ಪ್ರತಿಭಟನೆಯನ್ನು ಸರ್ಕಾರ ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ವಿವಿಧ ಹಂತಗಳಲ್ಲಿ ಹೋರಾಟ ರೂಪಿಸಿ, ಕೊಡಗು ಬಂದ್‌ಗೂ ಕರೆ ನೀಡುವುದಾಗಿ ಎಚ್ಚರಿಕೆ ನೀಡಿದರು.

ಅರಣ್ಯ ಪ್ರದೇಶದ ಮರಗಳನ್ನೇ ರಕ್ಷಿಸಿಕೊಳ್ಳಲಾಗದ ಅರಣ್ಯ ಇಲಾಖೆ ವಿನಾಃ ಕಾರಣ ಬೆಳೆಗಾರರಿಗೆ ತೊಂದರೆ ನೀಡುತ್ತಿದೆ. ಕೇರಳದ ಗಡಿಭಾಗದ ಅರಣ್ಯ ಪ್ರದೇಶದಿಂದ ಲೆಕ್ಕವಿಲ್ಲದಷ್ಟು ಮರಗಳ ಹನನವಾಗಿವೆ. ಮಡಿಕೇರಿ ತಾಲೂಕಿನ ಕೆ.ನಿಡುಗಣೆ ಗ್ರಾಮ ವ್ಯಾಪ್ತಿಯ ನೂರಾರು ಎಕರೆ ಪ್ರದೇಶದಲ್ಲಿ ಮರಗಳ ಹನನವಾಗಿದೆ. ಇದನ್ನೆಲ್ಲ ತಡೆಯಲು ಸಾಧ್ಯವಾಗದ ಅರಣ್ಯಾಧಿಕಾರಿಗಳು ತೋಟಗಳಲ್ಲಿರುವ ಮರಗಳ ಗಣತಿ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ, ಬಿಜೆಪಿ ಪ್ರಧಾನ ಕಾಯದರ್ಶಿ ಮಹೇಶ್ ಜೈನಿ, ಕಾರ್ಯದರ್ಶಿ ನಾಳನ ಕನ್ನಿಕೆ, ವಕ್ತಾರರಾದ ಬಿ.ಕೆ.ಅರುಣ್ ಕುಮಾರ್ ಹಾಗೂ ತಳೂರು ಕಿಶೋರ್ ಕುಮಾರ್ ಉಪಸ್ಥಿತರಿದ್ದರು.



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು.

ಹುಲಿ ದಾಳಿಗೆ ಎರಡು ಹಸು ಬಲಿ

ಮಡಿಕೇರಿ, ಮೇ 15–ಹುಲಿ ದಾಳಿಗೆ ಎರಡು ಹಸು ಬಲಿಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ನಡೆದಿದೆ.

ಹಾತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈಚೂರು ಕುಂದ ಗ್ರಾಮದ ತಾತೀರ ಎಸ್.ದೇವಯ್ಯ ಅವರ ಮನೆಯ ಮುಂದೆ ಕಟ್ಟಿ ಹಾಕಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಅದೇ ಹುಲಿ ಸುಮಾರು 2 ಕಿ.ಮೀ ದೂರದ ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಗಣ ಗ್ರಾಮದ ಕಡೆಮಾಡ ಭೀಮಯ್ಯ ಅವರ ಹಸುವಿನ ಮೇಲೂ ದಾಳಿ ನಡೆಸಿ ಕೊಂದುಹಾಕಿದೆ.

ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಬಿ.ಎಂ.ಶಂಕರ್, ಉಪ ವಲಯ ಅರಣ್ಯಾಧಿಕಾರಿಗಳಾದ ದಿವಾಕರ್, ಸಚಿನ್ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಹುಲಿ ದಾಳಿಯಿಂದ ಹಸು ಕಳೆದು ಕೊಂಡವರಿಗೆ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದು, ಅರಣ್ಯ ಇಲಾಖೆ ಶೀಘ್ರವಾಗಿ ಈ ಹುಲಿಯನ್ನು ಪತ್ತೆ ಹಚ್ಚಿ ಸೆರೆ ಹಿಡಿಯುವಂತೆ ಒತ್ತಾಯಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 15–ಕುಶಾಲನಗರ–ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 16ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ಉಪ ಕೇಂದ್ರ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಶಾಂತಳ್ಳಿ, ಗೌಡಳ್ಳಿ, ಸೋಮವಾರಪೇಟೆ, ಅಬ್ಬೂರುಕಟ್ಟೆ, ಐಗೂರು, ಬಜೇಗುಂಡಿ, ಬೇಲೂರು, ಕುಂಬೂರು ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಶ್ರೀನಿವಾಸಪ್ರಸಾದ್ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ



ಕೊಳ್ಳೇಗಾಲದಲ್ಲಿ ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ವತಿಯಿಂದ 'ಸ್ವಾಭಿಮಾನದ ದೊರೆ ಅಜರಾಮರ' ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೊಳ್ಳೇಗಾಲ: ವಿ.ಶ್ರೀನಿವಾಸ ಪ್ರಸಾದ್ ಅವರ ಉತ್ತರಾಧಿಕಾರಿ ಹೊಣೆಯನ್ನು ಯಾರು ಹೊರಬೇಕು. ಉತ್ತರಾಧಿಕಾರಿ ಯಾರಾಗಬೇಕು ಎಂಬುದು ಈಗ ಯಕ್ಷ ಪ್ರಶ್ನೆಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಪಟ್ಟಣದಲ್ಲಿ ಶ್ರೀನಿವಾಸಪ್ರಸಾದ್ ಅವರ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ 'ಸ್ವಾಭಿಮಾನದ ದೊರೆ ಅಜರಾಮರ' ನುಡಿ ನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರಿಗೆ ಪರ್ಯಾಯ ನಾಯಕ ಯಾರು ಇಲ್ಲವೋ, ಹಾಗೆ ಶ್ರೀನಿವಾಸಪ್ರಸಾದ್ ಅವರ ಸ್ಥಾನ ತುಂಬಲು ಯಾರಿಂದಲ್ಲೂ ಸಾಧ್ಯವಾಗಲ್ಲ. ಸಮಾಜ ಬಯಸುವುದು ನಾಯಕತ್ವದ ಗುಣ ಹಾಗೂ ಅವರು ಮಾಡಿದ ಕೆಲಸಕ್ಕಿಂತ ಸಮುದಾಯದ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಎಂದರು.

ಬದನವಾಳುವಿನ ಗಲಭೆ ಪ್ರಕರಣದಲ್ಲಿ ಶ್ರೀನಿವಾಸಪ್ರಸಾದ್ ಅವರು ಸಮಾಜದ ಪರವಾಗಿ ತೆಗೆದುಕೊಂಡ ತೀರ್ಮಾನವೇ ಅವರನ್ನು ಅತ್ಯಂತ ಎತ್ತರಕ್ಕೇರಿಸಿತು. ಹಾಗಾಗಿ ಅವರು ಜನಪರ ನಾಯಕರಾಗಿದ್ದರು. ಅಂಥ ನಾಯಕನನ್ನು ಕಳೆದುಕೊಂಡಿದ್ದೇವೆ. ಕೊನೆಯ ದಿನದಲ್ಲಿ ಒಪ್ಪದ ಸಿದ್ಧಾಂತದ ಜೊತೆಗೆ ರಾಜಕೀಯಮಾಡಬೇಕಾದ ಅನಿವಾರ್ಯತೆ ಅವರಿಗೆ ಒದಗಿ ಬಂತು. ನಾನು ಪಕ್ಷಾಂತರಿಯಾಗಿದ್ದೇನೆ. ಆದರೆ, ತತ್ವಾಂತರಿಯಲ್ಲ ಎಂದಿದ್ದರು. ಅವರು ಪ್ರಜಾಪ್ರಭುತ್ವದ ವಾದಿಯಾಗಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಎಸ್.ಜಯಣ್ಣ ಆರ್.ನರೇಂದ್ರ ಹರ್ಷವರ್ಧನ್, ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ಮುಖಂಡ ಓಲೆ ಮಹದೇವ, ಹೆಚ್.ಕೆ.ಟ್ರಸ್ಟ್ ಅಧ್ಯಕ್ಷೆ ಪ್ರೇಮಲತ, ಡಿವೈಎಸ್ಪಿ ಮಹಾನಂದ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಲಹಳ್ಳಿ ತೋಟೇಶ್, ಕಾರ್ಯದರ್ಶಿ ರವಿ, ನಗರಸಭೆ ಮಾಜಿ ಅಧ್ಯಕ್ಷರಾದ ರಮೇಶ್, ರೇಖಾ ರಮೇಶ್, ಬಸ್ತಿಪುರ ಶಾಂತು, ಸದಸ್ಯ ಮಂಜುನಾಥ್, ಸುಮಾ ಸುಬ್ಬಣ್ಣ, ನಟರಾಜು, ಹೊಂಗನೂರು ಚಂದ್ರು, ಪುಟ್ಟಬುದ್ಧಿ, ಮಾಂಬಳ್ಳಿ ನಂಜುಂಡಸ್ವಾಮಿ, ಪ್ರಸಾದ್ ಅಭಿಮಾನಿಗಳು ಹಾಜರಿದ್ದರು.

ಎಆರ್‌ಕೆಯನ್ನು, ಯಾಕೆ? ಮಂತ್ರಿ ಮಾಡಲಿಲ್ಲ ಎಂದಿದ್ರು

ಮುಖ್ಯಮಂತ್ರಿಗಳ ಜೊತೆ ನಾನು ಶ್ರೀನಿವಾಸ್‌ಪ್ರಸಾದ್ ಅವರ ನಿವಾಸಕ್ಕೆ ತೆರಳಿದ ವೇಳೆ ನನ್ನನ್ನು ಕಂಡು ಎಆರ್‌ಕೆಯನ್ನು ಯಾಕೆ? ಮಂತ್ರಿ ಮಾಡಲಿಲ್ಲ ಎಂದು ಸಿದ್ದರಾಮಯ್ಯ ಅವರನ್ನು ಶ್ರೀನಿವಾಸ್‌ಪ್ರಸಾದ್ ನೇರವಾಗಿ ಪ್ರಶ್ನಿಸಿದ್ದರು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಶ್ರೀನಿವಾಸಪ್ರಸಾದ್ ನುಡಿ ನಮನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಸದ ಅನಂತ್ ಕುಮಾರ್ ಹೆಗ್ಗಡೆ ಹೇಳಿಕೆಯನ್ನು ಖಂಡಿಸಿ ನಾನು ಬಿಜೆಪಿಯಿಂದ ಹೊರಬಂದೆ. ಆದರೆ, ಶ್ರೀನಿವಾಸ್‌ಪ್ರಸಾದ್ ಪಕ್ಷದಲ್ಲಿದ್ದುಕೊಂಡೆ ಹೇಳಿಕೆಯನ್ನು ಖಂಡಿಸಿದ್ದರು. ತುಳಿತಕ್ಕೊಳಗಾದವರ ಪರ ಗಟ್ಟಿ ಧ್ವನಿಯಾಗಿದ್ದರು. ಅವರ ಬದುಕಿನ ಉದ್ದಕ್ಕೂ ಬಡವರು, ದೀನ ದಲಿತರ ಪರವಾಗಿ ಎದೆಗಾರಿಕೆಯಿಂದಲೇ ನಿಂತಿದ್ದರು ಎಂದರು.

ರಾಜಪ್ಪ ನಿಧನ



ಚಾಮರಾಜನಗರ, ಮೇ 15– ನಗರದ ರಾಮಸಮುದ್ರ ಡಾ.ಅಂಬೇಡ್ಕರ್ ಬಡಾವಣೆ ನಿವಾಸಿ ಹಾಗೂ ರಂಗಭೂಮಿ ಕಲಾವಿದ ಜಿ.ರಾಜಪ್ಪ (ರಾಜು 43) ಅನಾರೋಗ್ಯದಿಂದ ಬುಧವಾರ ಮುಂಜಾನೆ ನಿಧನರಾದರು.

ರಾಜು ನಾಟಕ ಶಿಕ್ಷಕರಾಗಿಯೂ ಕೆಲಸ ನಿರ್ವಹಿಸಿದ್ದರು. ಮೃತರಿಗೆ ತಾಯಿ, ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಬುಧವಾರ ಸಂಜೆ ರಾಮಸಮುದ್ರದಲ್ಲಿ ಅಂತ್ಯಕ್ರಿಯೆ ನಡೆಯಿತು.

ನೀರು, ಮೇವು ಕೊರತೆ ಆಗದಂತೆ ಕ್ರಮ ವಹಿಸಿ

● ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ ● ಗೋ ಶಾಲೆ, ಮೇವಿನ ಬ್ಯಾಂಕ್ ನಿರ್ವಹಣೆ ಕುರಿತ ಸಭೆ

ಚಾಮರಾಜನಗರ, ಮೇ 15–ಚಾಮರಾಜನಗರವನ್ನು ಸರ್ಕಾರ ಬರಪೀಡಿತ ಜಿಲ್ಲೆಯಾಗಿ ಘೋಷಿಸಿದ್ದು, ಬರ ನಿರ್ವಹಣೆ ಹಿನ್ನೆಲೆಯಲ್ಲಿ ಜನ–ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಸರಬರಾಜಿನಲ್ಲಿ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗೋ ಶಾಲೆಗಳು ಹಾಗೂ ಮೇವಿನ ಬ್ಯಾಂಕ್‌ಗಳ ನಿರ್ವಹಣೆ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ವಿವಿಧೆಡೆ ತೆರೆಯಲಾಗಿರುವ ಮೇವು ಬ್ಯಾಂಕ್ ಹಾಗೂ ಗೋ ಶಾಲೆಗಳಲ್ಲಿನ ಮೇವಿನ ಲಭ್ಯತೆ, ಪ್ರತಿನಿತ್ಯದ ದಾಸ್ತಾನು, ವಿತರಣೆ ಕಾರ್ಯವೈಖರಿಯನ್ನು ಸಮರ್ಪಕವಾಗಿ ದಾಖಲೀಕರಣವನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಈಗಾಗಲೇ ಕುಡಿಯುವ ನೀರು ಹಾಗೂ ಮೇವು ಸರಬರಾಜಿನಲ್ಲಿ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ. ಈ ನಿಟ್ಟಿನಲ್ಲಿ ಹನೂರು ತಾಲೂಕಿನಲ್ಲಿ ಒಟ್ಟು 17 ಗೋ ಶಾಲೆ ಮತ್ತು ಚಾಮರಾಜನಗರ ತಾಲೂಕಿನಲ್ಲಿ 2, ಗುಂಡ್ಲುಪೇಟೆಯಲ್ಲಿ ಒಂದು ಮತ್ತು ಹನೂರು ತಾಲೂಕಿನಲ್ಲಿ 4 ಮೇವು ಬ್ಯಾಂಕ್‌ಗಳನ್ನು ತೆರೆಯಲಾಗಿದೆ ಎಂದು ಮಾಹಿತಿ ನೀಡಿದರು.

37,519 ರೈತರಿಗೆ ಮೇವಿನ ಕಿಟ್ ವಿತರಣೆ: ಬರ ನಿರ್ವಹಣೆ ಸಂಬಂಧ ರೈತರು ತಮ್ಮ ಜಮೀನುಗಳಲ್ಲಿ ಮೇವು ಬೆಳೆಯಲು ಅನುಕೂಲವಾಗುವಂತೆ ಪಶುಪಾಲನಾ ಇಲಾಖೆಯಿಂದ ಮಿನಿ ಮೇವಿನ ಕಿಟ್ (ಬೀಜ)ಗಳನ್ನು ನೀಡಲಾಗುತ್ತಿದೆ. ಚಾಮರಾಜನಗರ ತಾಲೂಕಿನ 9388, ಗುಂಡ್ಲುಪೇಟೆಯ 9387, ಕೊಳ್ಳೇಗಾಲ 7435, ಹನೂರು 9966 ಮತ್ತು ಯಳಂದೂರಿನ 1343 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 37,519 ರೈತರಿಗೆ ಈಗಾಗಲೇ ಮೇವಿನ ಕಿಟ್‌ಗಳನ್ನು ವಿತರಿಸಲಾಗಿದೆ ಎಂದರು.

ವಿತರಣೆ ಬಳಿಕ ರೈತರು ಮೇವಿನ ಬೀಜ ಬಿತ್ತಿದ್ದಾರೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ಪಶು ಪರಿವೀಕ್ಷಕರು ಈ ಕುರಿತು ಕಡತ ಹಾಗೂ ಛಾಯಾಚಿತ್ರ ದಾಖಲೀಕರಣ ಮಾಡಬೇಕು ಎಂದು ತಿಳಿಸಿದರು.

